Recommendation from His Highness the Rajpramukh.

Mr. SPEAKER.—I have received an Order from His Highness the Rajpramukh, which reads as follows:

> "In pursuance of Clause (1) of Article 207 of the Constitution of India, I, Jaya Chamaraja Wadiyar, Rajpramukh of Mysore, do hereby recommend that the Mysore Appropriation Bill, 1955 be introduced and moved in the Mysore Legislative Assembly."

MYSORE APPROPRIATION BILL, 1955.

Introduction.

Sri K. HANUMANTHAIYA (Chief Minister).—Sir, I introduce the Mysore Appropriation Bill, 1955. It has been published in the *Mysore Gazette* Extraordinary, dated 28th February 1955, under Rule 48 of the Rules of Procedure and Conduct of Business in the Mysore Legislative Assembly.

Motion to consider.

1 P.M.

Sri K. HANUMANTHAIYA (Chief Minister).—Sir, I move:

> "That the Mysore Appropriation Bill, 1955, be taken into consideration."

Sir, the Appropriation Bill merely contains the items that were included in the list of supplementary estimates and demands. Those estimates have already been discussed threadbare on the floor of this House. Therefore, there is hardly any need for me to make a fresh speech, for it would be merely repeating whatever has already been said. I therefore find it unnecessary to take away the time of the House in making a speech now. But I would be very happy to answer any criticisms that Hon'ble Members may make in this behalf.

Mr. SPEAKER.—Motion moved:

> "That the Mysore Appropriation Bill, 1955, be taken into consideration."

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಮಸೂದೆಯನ್ನು ನಾನು ವಿರೋಧಿಸಿ ಮಾತನಾಡುತ್ತೇನೆ. ಸಪ್ಲಿಮೆಂಟರಿ ಅಂದಾಜಿನಲ್ಲಿರುವ ಸಾಮಾನ್ಯವಾಗಿ ಎಲ್ಲ ಗ್ರಾಂಟುಗಳನ್ನೂ ಕಾಲಕ್ಕೆ ಸರಿಯಾಗಿ ಸಭೆಯ ಮುಂದೆ ತರಲೇಬಹುದಾಗಿತ್ತು ಎಂದು ನನ್ನ ಅಭಿಪ್ರಾಯ. ಒಂದು ಉದಾಹರಣೆ ಹೇಳುವುದಾದರೆ, ಮೆಡಿಕಲ್ ಬಾಬಿನ ಡಿಮ್ಯಾಂಡ್ ಒಂದು ಲಕ್ಷ ರೂಪಾಯನ್ನು ಆಯುರ್ವೇದ ಪಂಡಿತರಿಗೆ, ವೈದ್ಯರಿಗೆ ಸಂಬಳಗಳನ್ನು ಕೊಡುವುದಕ್ಕಾಗೆಂದು ಕೇಳಿದ್ದಾರೆ. ಈ ಆಯುರ್ವೇದಿಕ್ ಕಾಲೇಜಿನಲ್ಲಿ ಸಾಮಾನ್ಯವಾಗಿ, ಐದು ವರ್ಷ ವಿದ್ಯಾಭ್ಯಾಸಮಾಡಿ ಅನೇಕರು ಪದವೀಧರರಾಗಿ ವೈದ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಹಿಂದೆ ಸರ್ಕಾರದ ಎಲ್ಲಾ ನೌಕರರಿಗೂ ರಿವೈಸ್ಡ್ ಸ್ಕೇಲ್‌ಗಳನ್ನು ಮಂಜೂರು ಮಾಡಿದರು. ಹಾಗೆಯೇ ಇವರಿಗೂ ಹಿಂದೆ 35-40 ರೂಪಾಯಿ ಸಂಬಳವಿದ್ದುದನ್ನು 50ರಿಂದ 100ರವರೆಗೆ ಗ್ರೇಡು ಮಾಡಿದರು. ಆದರೂ ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಈ ಗ್ರೇಡನ್ನು ಇವರಿಗೆ ಕೊಟ್ಟಿಲ್ಲ. 1947ರಿಂದ ಬೇರೆ ಇಲಾಖೆಗಳಲ್ಲಿ ನೌಕರರಿಗೆ ರಿವೈಸ್ ಆದ ರೇಟಿನಮೇಲೆ ಕೊಟ್ಟರೂ ಕೂಡ ಇವರಿಗೆ ಕೊಟ್ಟಿಲ್ಲ. ರೆಟ್ರಾಸ್‌ಪೆಕ್ಟಿವ್ ಎಫೆಕ್ಟಿನಿಂದ ಕೊಟ್ಟಿಲ್ಲ. ವರ್ಷಕ್ಕೆ ಐದು ರೂಪಾಯಿನಂತೆ ಇನ್‌ಕ್ರಿಮೆಂಟ್ ಕೂಡ ಕೊಟ್ಟಿಲ್ಲ, ಇನ್ನೂ ಹಳೆಯ ಸಂಬಳದಲ್ಲೇ ಇದ್ದಾರೆ. ಇದಕ್ಕೆ ಕಾರಣ ಜಿಲ್ಲಾ ಬೋರ್ಡುಗಳಿಗೆ ಸರ್ಕಾರದವರು ಕೊಡಬೇಕಾದ ಹಣವನ್ನು ಅನೇಕ ವರ್ಷಗಳಿಂದ ಕಾಲಕ್ಕೆ ಸರಿಯಾಗಿ ಕೊಟ್ಟಿಲ್ಲ. ಆದುದರಿಂದ ಈ ವೈದ್ಯರಿಗೂ ಕೊಡಬೇಕಾದ ಸಂಬಳವನ್ನು ಅವರು ಕೊಟ್ಟಿಲ್ಲ. ಜಿಲ್ಲಾ ಬೋರ್ಡುಗಳಲ್ಲಿ ಹಣವಿಲ್ಲದೆಯೋ ಅಥವಾ ಸರ್ಕಾರದವರು ಕೊಡಬೇಕಾದುದನ್ನು ಕೊಡಲೆಂದೋ ಕಾರಣ ಮಾಡಿಕೊಂಡು ಆ ಬಡ ನೌಕರರಿಗೆ ದೊರೆಯಬೇಕಾದುದು ದೊರೆಯದೆ ತೊಂದರೆಯಾಗಿದೆ. ಅದೇ ದರ್ಜೆಯಲ್ಲಿರತಕ್ಕ Assistant Surgeons, Class IIನವರಿಗೆ ಬೇಕಾದಷ್ಟು ಉತ್ತಮ ಗ್ರೇಡು ದೊರೆತಿದೆ. ಆದರೆ ಆಯುರ್ವೇದ ಡಾಕ್ಟರುಗಳಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ. ಹೀಗಾಗಿ ಆಯುರ್ವೇದಿಕ್ ಕಾಲೇಜಿಗೆ ಸೇರುವುದಕ್ಕೆ ಬಹಳ ಕಡಮೆ ದರ್ಜೆಯ ಜನರು ಬರುತ್ತಿದ್ದಾರೆ. ಆದುದರಿಂದ ಇವರಿಗೆ ಪ್ರೋತ್ಸಾಹ ಕೊಡುವುದು ಒಳ್ಳೆಯದು. ನಮ್ಮ ದೇಶದಲ್ಲಿ ಇವೊತ್ತಿಗೂ ಆಯುರ್ವೇದ ಯುನಾನಿ ಔಷಧಿಗಳನ್ನು ಅನೇಕ ಜನರು ತೆಗೆದುಕೊಳ್ಳುತ್ತಿದ್ದಾರೆ. ಅಲ್ಲದೆ ಎಲ್ಲಾ ಕಡೆಯೂ ಅಲೋಪತಿಕ್ ಔಷಧಿಗಳು ಸಿಕ್ಕುವುದು ದುರ್ಲಭವಾಗಿದೆ. ಜನರಿಗೆ ಆಯುರ್ವೇದದಲ್ಲಿ ನಂಬಿಕೆಯಿದೆ. ಹೀಗೆ ಜನರಿಗೆ ಯಾವುದರಲ್ಲಿ ಹೆಚ್ಚು ಆಸಕ್ತಿಯಿದೆಯೋ ಅಂಥಾ ಒಂದು ಇಲಾಖೆಯಲ್ಲಿ ಸರ್ಕಾರದವರು ಹೆಚ್ಚು ಸಂಶೋಧನೆ ವಗೈರೆ ನಡೆಸಲು ಏರ್ಪಡಿಸಿ, ಔಷಧಗಳ ದರ್ಜೆಯನ್ನು ಹೆಚ್ಚಿಸಿ, ದೇಶದಲ್ಲಿ ಅಲ್ಲಲ್ಲಿ ಜನರಿಗೆ ಪರಿಚಯವಿರುವ ಔಷಧಗಳನ್ನೂ ಸೇರಿಸಿ ತಜ್ಞರ ಸಹಾಯಪಡೆದು ಶಾಸ್ತ್ರೀಯ ರೀತಿಯಲ್ಲಿ ಉತ್ತಮಪಡಿಸಲು ಸಂಘವನ್ನೇರ್ಪಡಿಸಿ ಅಭಿವೃದ್ಧಿಪಡಿಸಲು ಪ್ರಯತ್ನಮಾಡುವುದು ಆವಶ್ಯಕ. ಈಗ ಯಾವ ರೀತಿಯಲ್ಲಿದೆಯೆಂದರೆ, ಆಯುರ್ವೇದವನ್ನು ಪೂರ್ತಿಯಾಗಿ ತೆಗೆದೂಹಾಕಿಲ್ಲ ಅಥವಾ ಶಾಸ್ತ್ರ ರೀತಿಯಾಗಿ ನಡೆಸುತ್ತಲೂ ಇಲ್ಲ. ಇದರಿಂದ ಆಯುರ್ವೇದಕ್ಕೆ ಬಹಳಮಟ್ಟಿಗೆ ಕೆಟ್ಟ ಹೆಸರು ಬರುವುದಕ್ಕವಕಾಶವಾಗಿದೆ. ಇಂಥಾ ಒಂದು ಸಂದರ್ಭದಲ್ಲಿ ಸರ್ಕಾರದವರು ಅನೂಚಾನವಾಗಿ ಬಂದಿರುವ ಈ ವೈದ್ಯ ಪದ್ಧತಿಯನ್ನು ಅಭಿವೃದ್ಧಿಮಾಡಬೇಕು. ಅಲ್ಲಿನ ನೌಕ

ರರಿಗೆ ಸರಿಯಾದ ಸಂಬಳಗಳನ್ನೂ ಇತರ ಸೌಲಭ್ಯಗಳನ್ನೂ ಕಲ್ಪಿಸಿ, ಅವರ ಸಮಾನ ದರ್ಜೆಯ ಇತರ ಇಲಾಖೆಗಳ ನೌಕರರಂತೆ ಇವರನ್ನೂ ಸರಿಯಾಗಿ ನೋಡಿಕೊಂಡು ಪ್ರೋತ್ಸಾಹ ಕೊಡಬೇಕೆಂದು ಒತ್ತಾಯಪಡಿಸುವುದಕ್ಕಾಗಿ ಹೇಳುತ್ತಿದ್ದೇನೆ.

ಇನ್ನು ಎಂಟನೆಯ ಡಿಮ್ಯಾಂಡಿನಲ್ಲಿ 10 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಕೆರೆಗಳೆಂದರೆ ಬಹಳ ಕಾಲದಿಂದ ಪ್ರತಿಯೊಂದು ಊರಿನಲ್ಲಿಯೂ ಇವೆ. ಮೈಸೂರು ದೇಶದಲ್ಲಿ ಹೀಗೆ ಕೆರೆಗಳಿರುವುದು ಇಂಡಿಯಾ ದೇಶದಲ್ಲೇ ಒಂದು ವೈಶಿಷ್ಟ್ಯ. ಹೊರದೇಶಗಳಿಂದ ಬಂದವರನೇಕರೂ ಉತ್ತರ ದೇಶದಿಂದ ಬಂದವರೂ ಇದನ್ನು ನೋಡಿ ಆಶ್ಚರ್ಯಪಡುತ್ತಾರೆ. ಅಲ್ಲಿಂದ ಬಂದಿದ್ದ ಒಬ್ಬ ಇಂಜಿನಿಯರು ತೂಬುಗಳಿಂದ ನೀರು ಹೋಗುವುದು ಗೊತ್ತಿಲ್ಲದೆ ಸೈಫನ್ನುಗಳನ್ನು ಹಾಕುತ್ತಾರೆಯೇ ಎಂದು ಕೇಳಿದರು. ಇಂಥಾ ಒಳ್ಳೆಯ ಸೌಲಭ್ಯ ನಮ್ಮ ದೇಶದ ಕೆರೆಕಟ್ಟೆಗಳಲ್ಲಿದೆ. ಇಂಥಾ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಬೇಕು. ನೀವು ದೊಡ್ಡದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡುತ್ತಿರುವುದೇನೋ ಸರಿ. ಆದರೆ, ಇದರಿಂದ ಒಂದು ಕಡೆ ಮಾತ್ರ ಆರ್ಥಿಕಸ್ಥಿತಿ ಉತ್ತಮವಾಗುತ್ತದೆ. ಎಲ್ಲಕಡೆಯೂ ಜನರಿಗೆ ಬೇಕಾದುದು ಕೆರೆಗಳು. ಇವಿಲ್ಲದಿದ್ದರೆ ಅವರಿಗೆ ನಿರೋಗುವುದಿಲ್ಲ. ಮುಖ್ಯವಾಗಿ ರೈತ ವರ್ಗದವರಿಗೆ ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಕೆರೆ ಇರುವುದು ಅವಶ್ಯಕ. ಅದರಲ್ಲಿಯೂ ನಮ್ಮ ದೇಶದಲ್ಲಿ 15 ಸಾವಿರ ಹಳ್ಳಿಗಳಿಗೆ ಮೂವತ್ತು ಸಾವಿರ ಕೆರೆಗಳಿದ್ದವು. ಈಗ 2,712 ಮೇಜರ್ ಕೆರೆಗಳಲ್ಲಿ 2,234 ದುರಸ್ತಾಗಿ ಇನ್ನು 478 ಮಾತ್ರ ಉಳಿದಿವೆ. ಇವನ್ನು ವರ್ಷಕ್ಕೆ 30-35 ರಂತೆ ತೆಗೆದುಕೊಂಡು ದುರಸ್ತು ಮಾಡಿಸುತ್ತಿದ್ದರೂ ಎಲ್ಲವನ್ನೂ ಹತ್ತು ವರ್ಷದಲ್ಲಿ ರಿಪೇರಿಮಾಡಬಹುದು. ಹೀಗೆ 10 ವರ್ಷಗಳಲ್ಲಿ ಮುಗಿಸಲು ಏರ್ಪಾಡುಮಾಡಬಹುದಾಗಿತ್ತು. ಮೈನರ್ ಕೆರೆಗಳು 218,878 ಕೆರೆಗಳಲ್ಲಿ 8,788 ಕೆರೆಗಳು ಸರಿಯಾದ ಸ್ಥಿತಿಯಲ್ಲಿದ್ದು, 13 ಸಾವಿರ ಕೆರೆಗಳು ನಾದುರಸ್ತಾಗಿವೆ. ಇವುಗಳನ್ನು ರಿಪೇರಿಮಾಡಬೇಕು. ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಇತರ ಬಾಬುಗಳಿಗೆ ಖರ್ಚುಮಾಡುವಾಗ ಮೈನರ್ ಕೆರೆಗಳ ದುರಸ್ತಿಗೆ ಒದಗಿಸಿರುವ ಹಣ ಸಾಕಾಗುವುದಿಲ್ಲ. ಈಗ ಅಂದಾಜು ದರಗಳು ಜಾಸ್ತಿಯಾಗಿ ಸಾಕಷ್ಟು ಕೆರೆಗಳು ವರ್ಷವರ್ಷವೂ ತಯಾರಾಗುತ್ತಿಲ್ಲ. ಆದುದರಿಂದ ಕೆರೆಗಳಿಗೂ ಬಾವಿಗಳಿಗೂ ಹೆಚ್ಚು ಹಣವನ್ನೊದಗಿಸಿ ಮುಖ್ಯವಾಗಿ ಮೈನರ್ ಕೆರೆಗಳ ದುರಸ್ತಿನ ಕಾರ್ಯವನ್ನು ಕೈಕೊಂಡರೆ ಐದು, ಹತ್ತು ಅಥವಾ ಇಪ್ಪತ್ತು ವರ್ಷಗಳಲ್ಲಾದರೂ ಮಿಕ್ಕ ಕೆರೆಗಳನ್ನು ದುರಸ್ತುಮಾಡಲು ಸಾಧ್ಯವಾಗುತ್ತದೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲು).—ಇಪ್ಪತ್ತು ವರ್ಷ ಎಂದರೆ ಬಹಳ ದೂರವಾಯಿತು !

ಶ್ರೀ ಬಿ. ಹುಚ್ಚೇಗೌಡ.—ಇಪ್ಪತ್ತು ವರ್ಷಗಳಲ್ಲಿ ಮಾಡಿಸುತ್ತೇವೆಂದು ಸರ್ಕಾರದವರು ಭರವಸೆ ಕೊಟ್ಟರೂ ನಮ್ಮ ಮಕ್ಕಳ ಕಾಲಕ್ಕಾದರೂ ಆಗುತ್ತದೆ. (ನಗು !)

ಅಧ್ಯಕ್ಷರು.—ಇನ್ನು 20 ವರ್ಷಕ್ಕೆ ನೀವಿರುವುದಿಲ್ಲವೆ?

ಶ್ರೀ ಬಿ. ಹುಚ್ಚೇಗೌಡ.—ಯಾರೂ ಇರುವಂತೆ ಕಾಣುವುದಿಲ್ಲ.

ಇನ್ನೊಂದು ವಿಚಾರ. ಸಹಕಾರ ಇಲಾಖೆಯಲ್ಲಿ ಆಡಿಟ್ ಶಾಖೆಯನ್ನೇರ್ಪಾಡು ಮಾಡಿದ್ದಾರೆ. ಇದನ್ನು ಮಾಡಿರುವುದು ಒಳ್ಳೆಯದು. ಏಕೆಂದರೆ, ಇಲ್ಲಿಯವರಿಗೆ ಆ ಇಲಾಖೆಯಲ್ಲಾಗಿರುವ ಅನಾಹುತವನ್ನು ಹೇಳಬೇಕಾದರೆ, ಅದೊಂದು ದೊಡ್ಡ ಚರಿತ್ರೆಯನ್ನೇ ಬರೆಯಬಹುದು. ಇಲಾಖೆಯಲ್ಲಿ ನೌಕರರಿದ್ದಾರೆ, ಇನ್ಸ್ಪೆಕ್ಟರಿದ್ದಾರೆ. ಆ ಇನ್ಸ್ಪೆಕ್ಟರು ಹೋಗಿ ನೋಡಿದರೆ ಆಡಿಟ್ ಆಗುವವರೆಗೆ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆಡಿಟ್ ಆಗುವುದರಲ್ಲಿ ದುಡ್ಡು ತಿಂದಿರುವವರು ಪಲಾಯನವಾಗಿರುತ್ತಾರೆ. ಮುಖ್ಯವಾಗಿ ಬೆಂಗಳೂರಿನಲ್ಲಿ ಮೂರು ನಾಲ್ಕು ಉದಾಹರಣೆಗಳಿವೆ. ದೊಡ್ಡದೊಡ್ಡ ಸಂಸ್ಥೆಗಳು ಅವರ ಕೈಯಲ್ಲಿ ಸಿಕ್ಕಿವೆ; ಇಪ್ಪತ್ತು ಮೂವತ್ತು ಸಾವಿರ ತಿಂದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ರಿಜಿಸ್ಟ್ರಾರ್‌ರವರು ಸರ್ಕಾರಕ್ಕೆ ಬರೆದರೂ ಏನೂ ಆಗಿಲ್ಲ, ಯಾರೂ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಅವರು ದೊಡ್ಡ ದೊಡ್ಡ ಪ್ರಭಾವಶಾಲಿಗಳಾದ ವ್ಯಕ್ತಿಗಳು !

ಸಹಕಾರ ಸಂಘಗಳಿಂದ ಗ್ರಾಮಾಂತರಗಳಲ್ಲಿ ಹಣ ಒದಗುವುದಿಲ್ಲ. ಈ ಸಂಘಗಳಿಂದ ರೈತರಿಗೇನೂ ಪ್ರಯೋಜನವಾಗುತ್ತಿಲ್ಲ. ಅವರಿಂದ ಬರುವ ಹಣ ಇವರಿಗೆ ಬರುತ್ತದೆಯೇ ಹೊರತು ಅವರಿಗೇ ಸಿಕ್ಕುವುದಿಲ್ಲ. ಮಾರ್ಕೆಟಿಂಗ್ ಸೊಸೈಟಿ ಅಥವಾ ಬೇರೆ ಸಂಘಗಳನ್ನು ಉದಾಹರಣೆಗೆ ತೆಗೆದುಕೊಂಡರೆ ಒಂದು ಸಂಘ ರಿಜಿಸ್ಟರ್ ಆಯಿತು; ರಿಜಿಸ್ಟರಾದ ದಿವಸವೇ ಐವತ್ತು ಸಾವಿರ ರೂಪಾಯಿಗೆ ದರಖಾಸ್ತು ಹಾಕಿ, ಅದೇ ದಿವಸವೇ ಹಣವನ್ನು ತೆಗೆದುಕೊಂಡಿದ್ದಾರೆ. ಇನ್ನೊಂದು, ಏಪೆಕ್ಸ್ ಬ್ಯಾಂಕಿನಲ್ಲಿ ಇಪ್ಪತ್ತು ಸಾವಿರ ರೂಪಾಯಿಯನ್ನು ಅಧಿಕಾರದಲ್ಲಿರುವವರು ತಮ್ಮ ಮಗನಿಗೆ ಶೇಕಡ 2½ ಬಡ್ಡಿಗೆ ಕೊಟ್ಟಿದ್ದಾರೆ. ಶೇಕಡ ಐದು ಆರು ಬಡ್ಡಿ ಕೊಟ್ಟು ತೆಗೆದುಕೊಂಡು ಹೀಗೆ ಮಾಡಿದ್ದಾರೆ.

Mr. SPEAKER.—That matter was brought to the notice of Government last time.

ಶ್ರೀ ಬಿ. ಹುಚ್ಚೇಗೌಡ.—ಹಾಗೆಯೇ ಅನೇಕವಾಗಿ ನಡೆಯುತ್ತಿವೆ. ಇಂಥಾದ್ದರಲ್ಲಿ ಒಂದರಲ್ಲಿಯೂ ಕೂಡ ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ಜನರಿಗೆ ತಿಳಿಯುವಹಾಗೆ ಸರಿಯಾದ ಬಂದೋಬಸ್ತು ಮಾಡುವುದಕ್ಕೆ ಸರ್ಕಾರಕ್ಕೆ ತ್ರಾಣವಿಲ್ಲದೇ ಹೋಗಿದೆ. ಆಡಿಟ್ ಮಾಡದೇಯಿದ್ದ ಮಾತ್ರಕ್ಕೇ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ಏನು ಪ್ರಯೋಜನ ?

ಅಧ್ಯಕ್ಷರು.—ಅದಕ್ಕೇ ಆಡಿಟ್ ಏರ್ಪಾಡು ಮಾಡುವುದಕ್ಕೆ ತಂದಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಇದು belated ಆದರೂ ಕೂಡ, ಮಾಡಿದ್ದವರಮೇಲೆ ಏನೂ ಕಾರ್ಯಕ್ರಮ ನಡೆಸಲಿಲ್ಲ. ಯಾರು ನಿಸ್ಪೃಹರಾಗಿ ಆಡಿಟ್ ಮಾಡುತ್ತಾರೋ ಅವರಿಗೇ ಕೆಟ್ಟ ಹೆಸರು ಬರುತ್ತದೆಯೇ ಹೊರತು ಒಳ್ಳೆಯ ಫಲತಾಂಶವಾಗುವುದಿಲ್ಲ. ನನಗೆ ಇದರಲ್ಲಿ ನಂಬಿಕೆಯೇ ಹೋಗಿದೆ. ಆದುದರಿಂದ ಆಡಿಟ್ ಮಾಡಿದ ತಕ್ಷಣ ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳಬೇಕು. ಬೆಂಗಳೂರಿನಲ್ಲಿರುವ ಸಂಸ್ಥೆಗಳನ್ನು ಪ್ರತಿ ತಿಂಗಳೂ ಆಡಿಟ್ ಮಾಡಲು ಏರ್ಪಾಡು ಮಾಡುವುದರಿಂದ ಅನುಕೂಲವಾಗುತ್ತದೆ. ಹಾಗಿಲ್ಲದೆ ಒಂದು ವರ್ಷದವರೆಗೆ ಕಾದು ಆಮೇಲೆ ಮಾಡಿದರೆ, ಅಷ್ಟರಲ್ಲಿ ಆ ಮ್ಯಾನೇಜಿಂಗ್ ಕಮಿಟಿ ಹೋಗಿ ಬೇರೆ ಬಂದಿದ್ದರೆ ಪ್ರಯೋಜನ ವಾಗುವುದಿಲ್ಲ.

ದೊಡ್ಡದೊಡ್ಡ ಸಂಸ್ಥೆಗಳು ಈ ಆಡಿಟ್ ಫೀ ಹಣ ಕೊಡಲು ಶಕ್ತವಾಗಿರಬಹುದು. ಗ್ರಾಮಾಂತರಗಳಲ್ಲಿರುವ ಸಂಸ್ಥೆಗಳಿಗೆ ಹತ್ತು ರೂಪಾಯಿ ಹಾಕಿದ್ದಾರೆ.

(ಶ್ರೀ ಬಿ. ಹುಚ್ಚೇಗೌಡ)

ಹತ್ತು ರೂಪಾಯಿ flat rate ಹಾಕಬೇಕೆಂದು ನನ್ನ ಮನವಿ. ಹಾಗಿಲ್ಲದಿದ್ದರೆ ಅವರಿಗೆ ಬರತಕ್ಕ ಆದಾಯದಲ್ಲಿ ನೂರಕ್ಕೆ ನಾಲ್ಕು ಆರು ಆಣೆ ಕೊಡಬೇಕೆಂದರೆ ಅವರಿಗೆ ಕಷ್ಟವಾಗುತ್ತದೆ. ಸದ್ಯದಲ್ಲಿ ಇವುಗಳನ್ನು ಕಡಮೆ ಮಾಡಿಕೊಡಬೇಕೆಂದು ನಾನು ಕೇಳುತ್ತೇನೆ.

ರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಮಾಡುತ್ತಿದ್ದಾರೆ; ಇದು ಒಳ್ಳೆಯದು. ಆಸ್‌ಫಾಲ್ಟ್ ಮಾಡಿದರೆ ಅದಕ್ಕೆ ಖರ್ಚು ಮಾಡುವ ಹಣ ಪರದೇಶಗಳಿಗೆ ಹೋಗುತ್ತದೆ. ಏಕೆಂದರೆ ತಾರು ಪರದೇಶಗಳಿಂದ ಬರುತ್ತದೆ, ನಮ್ಮಲ್ಲಿ ತಯಾರಾಗುವುದು ಸಾಕಾಗುವುದಿಲ್ಲ. ಅಲ್ಲದೆ ಅಷ್ಟಾಗಿ ಇದು ಬಹಳದಿವಸ ಬಾಳಿಕೆ ಕೂಡ ಬರುವುದಿಲ್ಲ. ಮೇಲೆ ಬಣ್ಣಹಾಕಿದ ಹಾಗಾಗುತ್ತದೆ. ಇದಕ್ಕೆ ಬದಲು ಸಿಮೆಂಟ್ ಕಾಂಕ್ರೀಟ್ ಮಾಡುವುದು ಒಳ್ಳೆಯದು. ಸ್ವಲ್ಪಸ್ವಲ್ಪವಾಗಿ ಮಾಡಿಸಿದರೂ ಒಂದು ಸಾರಿ ಮಾಡಿಸಿದರೆ ಮೂವತ್ತು ವರ್ಷ ನಿಲ್ಲುತ್ತದೆ. ಒಟ್ಟು ಸರಾಸರಿ ಲೆಕ್ಕಹಾಕಿದರೆ, ಬಹಳ ಬಾಳಿಕೆ ಬರುತ್ತದೆ. ಸರ್ಕಾರದವರು ಇದನ್ನ ಮಾಡಿದರೆ ಒಳ್ಳೆಯದು. ಮಾಡುತ್ತಿರುವುದರಲ್ಲಿ ಅವಾನಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಹಣವೇನೋ ಉಳಿಯುತ್ತದೆ. ಆದರೆ, ಇದರಲ್ಲಿ ಬಹಳ wastage ಇದೆ, ಇದನ್ನು ನಿಲ್ಲಿಸುವುದು ಕರ್ತವ್ಯ. ಕೂಲಿ ಆಳುಗಳು ಹನ್ನೊಂದು ಗಂಟೆಗೆ ಬಂದು ಒಂದು ಎರಡು ಗಂಟೆಗೆ ಹೊರಟು ಹೋಗುತ್ತಾರೆ. ನಾನು ಅನೇಕವೇಳೆ ನೋಡಿದಾಗ ಇದು ನನ್ನ ಗಮನಕ್ಕೆ ಬಂದಿದೆ. ಅಲ್ಲದೆ ಹತ್ತು ಆಳುಗಳು ಬೇಕಾಗುವ ಕಡೆ ಇಪ್ಪತ್ತು ಆಳುಗಳನ್ನು ಇಟ್ಟಿದ್ದಾರೆ. ಸರಿಯಾದ ಸೂಪರ್‌ವಿಷನ್ ಇಲ್ಲ. ಹಿಂದಿನ ಕಾಲದಲ್ಲಿ ಅಸಿಸ್ಟೆಂಟ್ ಇಂಜಿನಿಯರೇ ಹತ್ತಿರವಿದ್ದು ಮಾಡಿಸುತ್ತಿದ್ದರು. ಈಗ ಅಲ್ಲಿ ಸಬ್ ಓವರ್ಸಿಯರು ಕೂಡ ಇರುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಇದನ್ನು ನಾವು ತಿಳಿಸಿದ್ದೇವೆ. ಒಂದುಕಡೆ ತಾರು ಹಾಕುವಾಗ ನಾವು ಅಲ್ಲಿಗೆ ಹೋದಾಗ ಅಲ್ಲಿ ಮೇಸ್ತ್ರಿ ಕೂಡ ಇರಲಿಲ್ಲ. ಒಬ್ಬ ಹುಡುಗ ಮಾಡುತ್ತಿದ್ದ. ಇಷ್ಟು ಚೆನ್ನಾಗಿದೆ ಸೂಪರ್‌ವಿಷನ್! ಇದಕ್ಕೆ ಬದಲು ಕಂಟ್ರಾಕ್ಟು ಕೊಡುವುದೇ ಒಳ್ಳೆಯದೆಂದು ತೋರುತ್ತದೆ. ಇದಕ್ಕೆ ಬದಲಾಗಿ ಹಣದ ಏರ್ಪಾಡು ಕಂಟ್ರಾಕ್ಟುದಾರರು ಮಾಡುವಾಗ ಅವರೇ check ಮಾಡುತ್ತಾರೆ. ಗಲಾಟೆ ಮಾಡುತ್ತಾರೆ. ಆದ್ದರಿಂದ ಇವರೇ ಮಾಡುವುದರಲ್ಲಿ ಬಹಳಮಟ್ಟಿನ ಲಾಭವಿರುತ್ತದೆ. ಇಲ್ಲದಿದ್ದರೆ ಸರಿಯಾದ supervision ಇಟ್ಟುಕೊಂಡು ಸಾಮಾನ್ಯವಾಗಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇಲ್ಲದೆ ಇರುವ ಕಡೆಗಳಲ್ಲಿ 60-70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಗಳಿಗೆ cement ಹಾಕಿಸುವುದು ಕಾರ್ಯಲೋಪವಾಗಿದೆ. ಆದ್ದರಿಂದ ಅದಕ್ಕೆ ಬದಲಾಗಿ Cement Association ಅವರಿಗೆ contract ಕೊಟ್ಟರೆ ಅದಕ್ಕಿಂತ ಕಡಿಮೆ ಖರ್ಚು ಆಗುವುದಲ್ಲದೆ ಬಹಳ ಭದ್ರತೆಯಿಂದ ಕೆಲಸ ಕಾರ್ಯಗಳು ನಡೆಯುತ್ತವೆ. ಅದಕ್ಕೆ ಬದಲಾಗಿ ನಮ್ಮ ಇಲಾಖೆಯವರು ದುಡ್ಡು ಉಳಿಸಬೇಕು, ಕೆಲಸಗಳು ಮಾತ್ರ ದಕ್ಷತೆಯಿಂದ ನಡೆಯುತ್ತಾ ಇಲ್ಲ. ಇದಕ್ಕೆ ಸಾಕಾದಷ್ಟು ಗಮನ ಕೊಡುತ್ತಾರೆಂದು ನಾನು ಭಾವಿಸುತ್ತೇನೆ.

ಆಮೇಲೆ ಸಿಮೆಂಟ್ concrete ಮಾಡುವ ವಿಚಾರ. ರಸ್ತೆಯಲ್ಲಿ gang ಕೂಲಿಗಳೆಂದು ಇರುತ್ತಾರೆ. ಅವರನ್ನು ಆಫೀಸರ ಮನೆಗಳಲ್ಲಿ ಕೆಲಸ ಮಾಡುವುದಕ್ಕೆ ಉಪಯೋಗಿಸುತ್ತಾರೆ. ತಿಂಗಳಿಗೆ ಮೂವತ್ತು ರೂಪಾಯಿನಂತೆ ಐದು ಜನಗಳಿಗೆ ವರ್ಷಕ್ಕೆ 1,800 ರೂಪಾಯಿಗಳಾಗುತ್ತವೆ. ಅಂದರೆ 450 ರೂಪಾಯಿಗಳು ಒಂದು ಮೈಲಿಗೆ ಬಿತ್ತು. District Board ನಲ್ಲಿ ರೋಡಿಗೆ 250 ರೂಪಾಯಿಗಳನ್ನು ಕೊಡುವುದಿಲ್ಲ. ಇದರಿಂದ ಕೆಲಸಗಳು ಅಷ್ಟು ಚೆನ್ನಾಗಿ ನಡೆಯುವುದಿಲ್ಲ. ದೊಡ್ಡ ರಸ್ತೆಗಳಲ್ಲಿ ಸಾವಿರಾರು vehicles ಆಗಿಂದಾಗ್ಗೆ ತಿರುಗಾಡುತ್ತಿರಬಹುದು. ಆದರೆ ಬಾಕಿ ಕಡೆ gang ಕೂಲಿಗಳನ್ನು ತಪ್ಪಿಸಬೇಕು. ಏಕೆಂದರೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿಲ್ಲ. ಐದು ಜನ ಕೂಲಿಗಳಲ್ಲಿ ಮೂರು ಜನ ಆಫೀಸರ ಮನೆಗಳಲ್ಲಿ ಇರುತ್ತಾರೆ. ಇನ್ನುಳಿದ ಇಬ್ಬರು ಸುಮ್ಮನೆ ತಿರುಗಾಡುತ್ತಿರುತ್ತಾರೆ. ಇತ್ತ ಕಡೆ ಅತ್ತ ಕಡೆ ನೋಡುತ್ತಿರುತ್ತಾರೆ. ಯಥಾಪ್ರಕಾರ ಮಾಮೂಲು ಕಂಟ್ರಾಕ್ಟುದಾರರು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ gang ಕೂಲಿಗಳನ್ನು ತಪ್ಪಿಸುವುದರಿಂದ ಸುಮಾರು 400-500 ರೂಪಾಯಿಗಳು ಉಳಿಯುತ್ತವೆ. ಇಲ್ಲದಿದ್ದರೆ ಖರ್ಚು ಎಷ್ಟೆಂಬುದನ್ನು estimate ಮಾಡಿ ಅವರಿಂದ ದುಡ್ಡು ಎಷ್ಟು ಖರ್ಚಾಗುತ್ತದೆ, ಎಷ್ಟು ಕೆಲಸ ಮಾಡಿಸಬೇಕು—ಇವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕು. ನಾನು ಹೇಳಿದ ಕೆಲವು ಅಂಶಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B. P. NAGARAJA MURTHY (Malavalli).—Mr. Speaker, while criticising the Appropriation Bill which has been placed before this House, I offer my remarks only with regard to Demand No. 26. For this Demand No. 26, Rs. 14,92,705 has been charged on the Consolidated Fund. Hitherto, this item of expenditure was coming under the voted item and this time it has been brought under the charged item and the simple explanation given for this change is :

> "Provision for this has been included in the voted section of the Estimates for the current year. This is now to be transferred to the charged section in accordance with the change of classification suggested by the Accountant-General (Mysore). This is an accounting adjustment only and does not involve any actual outgoing of cash as the portion now included in the voted Section will be surrendered."

In this connection I want to ask the Government why they should take away one of the important rights and privileges of this House, that is, exercising the right of vote on every item of expenditure and the right of discussion on this item of nearly Rs. 15 lakhs. It may be a simple change

from the voted section to the charged section. But why should this House be deprived of exercising their right in exercising their vote for the expenditure of this item and particularly when this amount comes under Industries and Supplies. If a perusal has been made regarding the Audit Report regarding Industries and Supplies, it will be seen that the state of affairs seems to be very miserable and all those budget speeches delivered during those years in respect of which audit report is available by the Finance Minister of the corresponding year seem to be far from the truth; particularly in this Department of Industries and Supplies, the fact that the Accountant-General has commented upon the method of accounts in respect of cost accounting and the Accounts Manual, stock and credit sales, maintaining the provident fund account, etc., goes to show a very miserable state of affairs in those industries. In every Budget speech, it has been shown to the House that a lot of profit has been made out of these Industries and Supplies. But in the Audit Report it is shown that nearly Rs. 7 lakhs are outstanding recovery from Messrs Essen Flour Products for the last 20 to 25 years. This is a heavy sum which is outstanding for the last 20 or 25 years. I do not know whether the Government have made any attempt to recover this heavy outstanding sum. In the case of Sandalwood Oil Factory, the net revenue has been shown even without deducting the cost of sandalwood supplied to the factory. So, in that year, the net revenue is shown as nearly Rs. 10 lakhs and if you deduct the value of sandalwood supplied from the Forest Department, the net profit will be about Rs. 1,79,665. So, the difference will be something like Rs. 8 lakhs. I do not know how the Ministers when delivering their speeches actually played with the figures. It is not a children's affair when dealing with the budget if there is a difference in terms of lakhs. So, when this is the state of affairs with respect to Industries and Supplies, the actual state of affairs as disclosed from the Budget speeches is quite different from the audit reports placed before the Legislature. In this connection, I may request the Government that before placing the new Budget on the floor of this Assembly, it is better to get the previous Audit Report for the preceding year so that the House may be able to know whether the amount voted by the Legislature for the previous year is properly spent or not. The experience gained by looking into the previous Audit Report is really noteworthy and it is better for the Government to insist and get all these reports before the Budget for the coming year is placed before this House. So when this is the state of affairs, I strongly object to the changing of this expenditure from the voted section to the charged section whereby our important privilege and right of voting will be curtailed and the state of affairs may go from bad to worse. So, I insist on the Government not to change this head. If this change of accounting is given assent to by this House, our important right will be curtailed and it will not be fair, when giving so much of amount for this important item, to see that the State is incurring such loss. So, with these remarks, I close my speech.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ನಮ್ಮ ಮುಂದೆ ಇಟ್ಟಿರತಕ್ಕಂಥ ಬಿಲ್ಲನ್ನು ಸಮರ್ಥನೆಮಾಡಿ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ಈ Public Works Departmentನ ಕೆಲಸ ಕಾರ್ಯಗಳು ಈ ಸಭೆಯಲ್ಲಿ ಅನೇಕ ವರ್ಷಗಳಿಂದ ಆಗಿಂದಾಗ್ಗೆ ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಸದಸ್ಯರು ಅನೇಕರು ಅಭಿಪ್ರಾಯ ಕೊಡುತ್ತಿದ್ದರೂ ಕೂಡ ಅವನು ಯಾವ ವಿಧದಲ್ಲೂ ಸಮರ್ಪಕವಾಗಿ ನಡೆಯಿಸುವುದಕ್ಕೆ ಮಾರ್ಗವು ಇನ್ನೂ ಸರ್ಕಾರಕ್ಕೆ ಸಿಕ್ಕಿಲ್ಲವೋ ಏನೋ ಅಥವಾ ಅವರು ಎಷ್ಟೇ ಪ್ರಯತ್ನಪಟ್ಟರೂ ಆ ಡಿಪಾರ್ಟ್‌ಮೆಂಟನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೋ ಇಲ್ಲವೋ ಏನೋ ಎಂದು ಒಂದು ಶಂಕೆ ನನಗೆ ಬಂದಿದೆ. ಈ ರೋಡ್ ಕೆಲಸಗಳನ್ನು ಮಾಡುವಾಗ ನನ್ನ ಸ್ವಂತ ಅನುಭವಕ್ಕೆ ಬಂದಿರತಕ್ಕಂಥ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ಯಾವುದಾದರೂ ಒಂದು ರೋಡಿನಲ್ಲಿ ಒಂದು ರಿಪೇರಿ ಮಾಡಬೇಕಾದರೆ ಒಂದು ಫರ್ಲಾಂಗಿಗೆ ಜೆಲ್ಲಿ ಎಷ್ಟು ಹಾಕಬೇಕು ಎಂಬುದಾಗಿ ಅಸಿಸ್ಟೆಂಟ್ ಇಂಜಿನಿಯರ್ ಒಂದು ಅಭಿಪ್ರಾಯ ಇಟ್ಟುಕೊಂಡಿರುತ್ತಾರೆ. ಅಸಿಸ್ಟೆಂಟ್ ಇಂಜಿನಿಯರ್ 50 ಗಜ ಬೇಕೆಂದು ಹೇಳುತ್ತಾರೆ, Executive Engineer, ಇಲ್ಲ, 20 ಗಜ ಬೇಕೆಂದು ಹೇಳುತ್ತಾರೆ, Superintending Engineer 30 ಗಜ ಸಾಕೆಂದು ಹೇಳುತ್ತಾರೆ. ಹೀಗೆ ಒಬ್ಬೊಬ್ಬರೂ ಒಂದು ಅಭಿಪ್ರಾಯವನ್ನು ಕೊಡುತ್ತಿ

(ಶ್ರೀ ಡಿ. ದೇವರಾಜ ಅರಸ್.)

ದ್ದರೆ ಕೆಲಸಗಳಾಗುವ ಬಗೆ ಹೇಗೆ? ಒಂದು ಸಾರಿ ಒಬ್ಬ ಅಧಿಕಾರಿ ಕ್ವಾರ್ಟ್ಜರ್ ಕ್ವಾರಿ ಮೆಟಲ್ (ಜಲ್ಲಿ) ಹಾಕಿದರೆ ಸಾಕು ಎಂದು ಹೇಳುತ್ತಾರೆ. ಇನ್ನೊಬ್ಬರು ಬರುತ್ತಾರೆ. ಅವರು ಮೆಟಲ್ ಹಾಕುವುದು ಬಹಳ ಅಪಾಯಕರ, ಬಾಳಿಕೆಬರುವುದಿಲ್ಲವೆಂದು ಹೇಳುತ್ತಾರೆ. ಮೂರನೆಯವರು ಇವೆರಡೂ ಬೇಡ. ದುಡ್ಡು ಹೆಚ್ಚಾದರೂ ಸುಲಭವಾಗಿ ನಾವು ಹೇಗೋ ರಸ್ತೆ ಸರಿಮಾಡುವುದಕ್ಕೋಸ್ಕರ "ಬ್ಲಾಕ್ ಮೆಟಲ್" ಉಪಯೋಗಿಸೋಣ ಎನ್ನುತ್ತಾರೆ. ಆದರೆ Black Metal ಅನೇಕಕಡೆ ಇರುವುದಿಲ್ಲ. ಬ್ಲಾಕ್ ಮೆಟಲ್ ಹೇಗೆಂದರೆ ಅದು "ಹಿಟ್ಟುಗಲ್ಲು" ರಾಕ್ಸ್‌ನಿಂದ Quarry ಮಾಡಿ ದುರ್ಬಲವಾದ ಭೂಮಿಯನ್ನು ಅಗೆದು ತೆಗೆಯುತ್ತಾರೆ. ಈ ರೀತಿಯಲ್ಲಿ ಹಾಕಿದರೆ ಸಾಕೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಈ ಕಲ್ಲಿನ ವಿಷಯ ಬೇಸಿಗೆಯಲ್ಲಿ ಲಾಟನಲ್ಲಿ ಮಾಡಿದರೆ ಮಳೆಗಾಲದಲ್ಲಿ ಕರಗಿಹೋಗಿರುತ್ತದೆ. ಈ ಕಲ್ಲಿನ Lot ಇಲ್ಲದೆ ಎಲ್ಲಾ ಮಣ್ಣು ಆಗಿರುತ್ತದೆ. ಆದರೂ ಭೇದವೇ ಇರುವುದಿಲ್ಲ. ಹೀಗೆ ಕೆಲಸಕಾರ್ಯಗಳು ನಡೆಯಬೇಕಾದರೆ ಒಂದು standard ಇಲ್ಲ. ಅಧಿಕಾರಿಗಳು ಅವರವರ ಕಾಲದಲ್ಲಿ ಅವರಿಗೆ ತೋಚಿದ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವುದು ಅಷ್ಟು ಸಮರ್ಪಕವಾಗಿಲ್ಲ. ನನ್ನ ಎದುರಿಗೆ ಒಂದು ವಿಚಾರ ನಡೆಯಿತು. ಅದು ಏನೆಂದರೆ Executive Engineer ರೋಡ್ ರಿಪೇರಿ ಮಾಡಬೇಕಾದರೆ ಕೆಲವು ಒಪ್ಪಂದಗಳಿವೆ. Assistant Engineer ಆ ರೀತಿ ನಡೆಯಬೇಕು. Assistant Engineer ರವರು ಸಾಮಾನ್ಯವಾಗಿ ಯಾವುದಾದರೂ ಒಂದು ರಸ್ತೆ ರಿಪೇರಿ ಕಾಲದಲ್ಲಿ ಅಗಲ ಮೂರು ಅಡಿ ಉದ್ದ ಎರಡು ಅಡಿ ರಿಪೇರಿ ಆಗಬೇಕೆಂದು ಹೇಳಿದರೆ ಮಾರುದಿವಸವೇ Superintending Engineer ಸಾಹೇಬರು ಬಂದು, ಈ ಕೆಲಸ ಸರಿಯಾಗಿಲ್ಲ, ರಸ್ತೆ ಸರಿಯಾಗಿ ಮಾಡಿದಂತೆ ಕಾಣುವುದಿಲ್ಲ, ಇನ್ನೊಂದು ಬೇರೆ ರೀತಿಯಲ್ಲಿ ಮಾಡಿ ಎಂದು ಹೇಳುತ್ತಾರೆ. ತರುವಾಯ Executive Engineer ಬಂದು ನಾನು Immediate Officer ನಾನು ಹೇಳಿದ ಹಾಗೆ ಮಾಡಬೇಕೆನ್ನುತ್ತಾರೆ. ಇತ್ತಕಡೆ Assistant Engineerರನ್ನು ದಬಾಯಿಸುತ್ತಾರೆ. ಈ ರೀತಿಯಾಗಿ ಪ್ರತಿಯೊಬ್ಬ ಅಧಿಕಾರಿಯೂ ತಮಗೆ ತೋಚಿದ ರೀತಿಯಲ್ಲಿ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಒಂದುವೇಳೆ Executive Engineerಗೂ Superintending Engineerಗೂ ಘರ್ಷಣೆ ಇದ್ದರೆ ಇವರು ಒಂದು ತರಹ instruction, Superintending Engineer ಒಂದು ತರಹ instruction ಕೊಡುತ್ತಾರೆ. Chief Engineer ಬಂದಾಗ ಇವೆರಡನ್ನೂ ಬಿಟ್ಟು ಇನ್ನೊಂದು ತರಹ instruction ಕೊಡುತ್ತಾರೆ. ಆದ್ದರಿಂದ ಈ ರೀತಿ ಕೆಲಸಗಳು ಕೆಲವು ಸಂದರ್ಭಗಳಲ್ಲಿ ನಡೆಯುವುದಿಲ್ಲವೆಂದೂ ಇನ್ನು ಕೆಲವು ಸಂದರ್ಭಗಳಲ್ಲಿ ನಮ್ಮ ಹಣ ಅನೇಕ ಕಾರಣಗಳಿಂದ ದುರ್ವಿನಿಯೋಗವಾಗುತ್ತಿದೆಯೆಂದೂ ಹೇಳಬೇಕಾಗಿದೆ. ನಾನು ಇದಕ್ಕೆಲ್ಲಾ ಒಂದು ಅಭಿಪ್ರಾಯ ಕೊಡುತ್ತೇನೆ. ಏನೆಂದರೆ ಒಂದು standardise ಮಾಡಬೇಕು. ಡಿಪಾರ್ಟ್‌ಮೆಂಟ್‌ನವರು ಎಲ್ಲರೂ ಸೇರಿ ಒಂದು ಕಮಿಟಿ ಮಾಡಿ ಇಂತಹ ಕಡೆ ರಸ್ತೆ ಕೆಲಸ ಆಗಿದೆಯೋ ಇಲ್ಲವೋ ಎಂಬುದನ್ನು ತಿಳಿಯುವುದಕ್ಕೆ ಒಂದು ಬರವಣಿಗೆ ಬರೆದಿಟ್ಟರೆ, ಅದನ್ನು standardise ಮಾಡಿ ಇಟ್ಟರೆ, ಆಗ ಪ್ರತಿಯೊಬ್ಬ ಆಫೀಸರೂ ಬಂದಾಗ ಅವರು ತಮ್ಮ ಇಷ್ಟಬಂದ ರೀತಿಯಲ್ಲಿ ಕೆಲಸಗಳನ್ನು ಮಾಡದೆ ಎಲ್ಲರಿಗೂ ಒಪ್ಪುವ ರೀತಿಯಲ್ಲಿ ನಡೆದುಕೊಳ್ಳುವ ಪ್ರಮೇಯ ಬರುತ್ತದೆಂದು ನಾನು ಭಾವಿಸುತ್ತೇನೆ.

1-30 P.M.

ಆದಕಾರಣ, ಇದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುವ ಅಗತ್ಯವಿದೆ. ಈ ರೀತಿಯಾಗಿ standardisation ಮಾಡುವುದರಿಂದ ಸರ್ಕಾರದವರು ವಿನಿಯೋಗ ಮಾಡುವ ಹಣ ಪೋಲಾಗುವುದಕ್ಕೆ ಅವಕಾಶವಿರುವುದಿಲ್ಲ. ಅಧಿಕಾರಿಗಳಿಗೆ ಅವರವರ ಅಭಿಪ್ರಾಯಗಳಿಗೆ ಮಾನ್ಯತೆ ಕೊಟ್ಟುಕೊಂಡು ಬಂದರೆ ಸರ್ಕಾರದ ದುಡ್ಡು ವ್ಯರ್ಥಾ ಖರ್ಚಾಗುವುದಕ್ಕೆ, ಪೋಲಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈರೀತಿ ಅಧಿಕಾರಿಗಳು ಸ್ವೇಚ್ಛೆಯಿಂದ ಖರ್ಚು ಮಾಡುವುದನ್ನು ತಪ್ಪಿಸುವುದು ಅಗತ್ಯವೆಂದು ಈ ಸಂದರ್ಭದಲ್ಲಿ ನಾನು ಸಲಹೆ ಕೊಡುತ್ತೇನೆ.

ಆಮೇಲೆ ಕೆರೆ ಕೆಲಸಗಳಲ್ಲೂ, ಮೈನರ್ ಕೆರೆಯೇ ಆಗಲಿ, ಮೇಜರ್ ಕೆರೆಯೇ ಆಗಲಿ, ಇಂಥ ಕೆರೆಯ ಕಾಮಗಾರಿಗಳಲ್ಲಿ ಸರ್ಕಾರದ ದುಡ್ಡು ಪೋಲಾಗುವುದು ಕೂಡ ಬಹಳವಾಗಿದೆ. ಅದರಲ್ಲೂ ಇಂಥ ಕೆಲಸಗಳನ್ನು ಮಾಡುವುದಕ್ಕೆ ಬರುವವರೆಲ್ಲಾ ಹೊರಗಿನ ಜನ. ಇವರೆಲ್ಲಾ Professional Contractors ಆಗಿರುತ್ತಾರೆ. ನಮ್ಮ ದೇಶದ ಜನ ಬಹು ಮಟ್ಟಿಗೆ ಈ ಕಾಮಗಾರಿಗಳ ಕೆಲಸ ಮಾಡಲಿಕ್ಕೆ ಬರುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿರಬಹುದು. ಹೊರ ದೇಶದ ಜನಗಳೇ ಬರುವುದು ಜಾಸ್ತಿ. ಅವರೇ Professional Contractors ಕೂಡ ಆಗಿರುತ್ತಾರೆ. ಈ ಕೆರೆ ಕಾಮಗಾರಿ ನಡೆಸತಕ್ಕ Public Works Department ಇಲಾಖೆಯಲ್ಲಿ,—ಎಲ್ಲಾ ಕಡೆಯಲ್ಲೂ ಎಂದರೆ ತಾವು ಒಪ್ಪಲಾರರಿ—ಕೆಲವು ಕಡೆಗಳಲ್ಲಿಯಂತೂ ಕಂಟ್ರಾಕ್ಟರುಗಳಿಗೂ ಸಂಬಂಧಪಟ್ಟ ಅಧಿಕಾರಿಗಳಿಗೂ ಮೊದಲೇ ಒಂದು ರೀತಿಯ understanding ಇರುತ್ತದೆ. ಇಂತಿಂಥ ದರ್ಜೆಯ ಅಧಿಕಾರಿಗಳಿಗೆ ಇಷ್ಟಿಷ್ಟು per cent ಕೊಡಬೇಕೆಂದು ಹೇಳಿ ಒಂದು organised system ಇದ್ದಹಾಗೆ ಇರುತ್ತದೆ. ಇದರಿಂದಾಗಿ, ಯಾವ ಯಾವ ಕಂಟ್ರಾಕ್ಟರುಗಳು ಯಾವ ಯಾವ ಕೆಲಸ ತೆಗೆದುಕೊಳ್ಳಬೇಕೆಂದು ಮೊದಲೇ ತೀರ್ಮಾನವಾಗಿರುತ್ತದೆ. ಅವರುಗಳಲ್ಲಿ ಕೆರೆ ಕೆಲಸಗಳ ಅನುಭವವಿಲ್ಲದಿರುವವರೇ ಕಡಮೆ. ಟೆಂಡರು ಕರೆದರೂ, ಇವರುಗಳೇ ಅನುಭವಸ್ಥರಾಗಿದ್ದು ಕಡಮೆ ಹಣಕ್ಕೇ ಟೆಂಡರು ಕೊಡುತ್ತಾರೆ. ಕಡಮೆ ಟೆಂಡರು ಹಾಕಿದರೂ ಅದನ್ನು ಯಾವ ರೀತಿ make up ಮಾಡಬೇಕೆಂಬುದು ಅವರಿಗೆ ಗೊತ್ತಿರುತ್ತದೆ. ಅಧಿಕಾರಿಗಳು ಅದಕ್ಕೆಲ್ಲಾ ಸಾಮೀಲು. ಅದರಲ್ಲೂ ಮೈನರ್ ಕಾಮಗಾರಿಗಳನ್ನು ಮಾಡುವಾಗ ಅವರಿಗೆ ಬಹಳ ಸುಲಭ. ಕೆರೆ ಕೆಲಸಗಳನ್ನು ಮಾಡುವಾಗ ಹಳೆಯ ಗುಂಡಿಗಳನ್ನೇ ನೋಡಿಕೊಂಡು ಆಳತೆಯಲ್ಲಿ 10 ಗಜ ಬರುವುದಾಗಿದ್ದರೆ, ಅದನ್ನೇ ಒಳಮುಖದಲ್ಲೂ ಹೊರಮುಖದಲ್ಲೂ ಕೆತ್ತಿ 25 ಗಜ ಬರುವಂತೆ ಮಾಡಿ ಹೆಚ್ಚಿಗೆ ಕೆಲಸ ಮಾಡಿದ್ದೇವೆಂದು ಹೇಳಿ ದುಡ್ಡನ್ನು ತೆಗೆದುಕೊಳ್ಳುವ ಸಂದರ್ಭ ಇದೆ. ಸರ್ಕಾರದವರೇನೋ ಹೆಚ್ಚಿಗೆ ಹಣವನ್ನು ಕೆರೆ ಕಾಮಗಾರಿಗಳಿಗೆ ಖರ್ಚು ಮಾಡುತ್ತಿದ್ದಾರೆ. ಆ ರೀತಿಯಾಗಿ ಹೇಳುತ್ತಲೂ ಇದ್ದಾರೆ. ನಾವು ಹೆಮ್ಮೆ ಕೂಡ ಪಡಬಹುದು. ಆದರೆ ಕೆಲವಾರು ವರ್ಷಗಳಲ್ಲೇ ತಿಳಿಯಬರುತ್ತದೆ, ನಾವು ಎಷ್ಟುದುಡ್ಡು

ಖರ್ಚು ಮಾಡಿದ್ದೇವೋ ಅದಕ್ಕೆ ತಕ್ಕಷ್ಟು ಉಪಯುಕ್ತತೆ ದೊರೆಯುವುದಿಲ್ಲ ಎಂದು. ಮಾಡಿದ ಕೆಲಸವನ್ನು ಪುನಃ ಪುನಃ ಮಾಡಬೇಕಾದ ಸಂದರ್ಭ ಬರುತ್ತದೆಂದು ಹೇಳುತ್ತೇನೆ.

ಆದ್ದರಿಂದ ಇದನ್ನೆಲ್ಲಾ ವ್ಯವಸ್ಥಿತವಾಗಿ ನಾವು ಕಂಟ್ರೋಲ್ ಮಾಡಬೇಕಾದರೆ, ನಾವು ಏಕಾ ಏಕಿ ಈ ರೀತಿ ಮಾಡಿದರೆ ಸರಿಯಾಗುತ್ತದೆಂದು ಹೇಳುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಈ ಇಲಾಖೆಯ ಕೆಲಸ ಕಾರ್ಯಗಳು ಬಹಳ elusive ಆಗಿದೆ, ಹತೋಟಿಯನ್ನಿಟ್ಟುಕೊಳ್ಳುವುದು ಬಹಳ ಕಷ್ಟ. ಈ ಅಂಶವನ್ನು ಗಮನದಲ್ಲಿಟ್ಟು ಸರ್ಕಾರದವರು ಬಹಳ ದುಡ್ಡು ಪೋಲಾಗುವುದನ್ನು ತಡೆಗಟ್ಟಬೇಕೆಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕು.

ನಾವು ಹಿಂದೆ Estimate ಸಮಿತಿಯಲ್ಲಿ ಈ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೆವು. ಈಗಾಗಲೇ ಒಂದುವರ್ಷವಾಯಿತು. ಈಗ ತಾನೆ, ಈ ಸಂದರ್ಭದಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರವಾಗಿ ಅದು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದಾರೆ. ಇಷ್ಟು ದಿವಸಗಳಾದರೂ 'ಇನ್ನೂ 'ಪರಿಶೀಲನೆಯಲ್ಲಿದೆ' ಯೆಂದು ಹೇಳುತ್ತಿದ್ದಾರೆ! ಐದಾರು ಕೋಟಿ ರೂಪಾಯಿಗಳನ್ನು ಈ ಇಲಾಖೆಯ ಮೂಲಕ ಖರ್ಚು ಮಾಡುತ್ತಿರುವ ಸಂದರ್ಭದಲ್ಲಿ ನಾವು ಇಷ್ಟು ಉದಾಸೀನ ಮನೋಭಾವದಿಂದ ಇರುವುದು ಸರಿಯಲ್ಲ. ತೀವ್ರವಾಗಿ ಆಲೋಚನೆ ಮಾಡಿ ಯಾವ ರೀತಿ ಮಾಡಿದರೆ ಎಲ್ಲವೂ ಸರಿಹೋಗುತ್ತದೆಂಬುದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಆ ಮೇಲೆ, ಕೆರೆ ಕೆಳಗಿನ ಅಚ್ಚುಕಟ್ಟುದಾರರು ತಾವೇ ಸಂಬಂಧಪಟ್ಟ ಕೆರೆಗಳ ರಿಪೇರಿ ಕೆಲಸವನ್ನು ಮಾಡುವ ವಿಚಾರ—ನಾನೇ ಆರೀತಿ ಹೇಳಿದ್ದೇನೆ. ಮತ್ತು ನನ್ನ ಮಾನ್ಯ ಸ್ನೇಹಿತರಾದ ಶ್ರೀ ಚನ್ನಬಸಪ್ಪನವರೂ ಅದೇ ಅಭಿಪ್ರಾಯಪಟ್ಟರು—ಆದರೆ ಮಂತ್ರಿಗಳು ಅದಕ್ಕೆ ಪ್ರತ್ಯುತ್ತರವಾಗಿ ಹೇಳಿದರು 'ಆ ರೀತಿಯಾಗಿ ಆಜ್ಞೆಯೊಂದನ್ನು ಮಾಡುವುದಕ್ಕಾಗುವುದಿಲ್ಲ' ಟೆಂಡರುಗಳನ್ನು ಕರೆಯದೆ ಕೊಡುವುದಕ್ಕಾಗುವುದಿಲ್ಲ. ಅಕೌಂಟೆಂಟ್ ಜನರಲ್‌ರವರಿಂದ objectionಗಳು ಬರಬಹುದು ಎಂದು ಹೇಳಿದರು. ಆದರ, ಕಾನೂನು ಈಗಿರುವ ರೀತಿಯಲ್ಲೇ ಸಣ್ಣ ಪುಟ್ಟ ಕಾಮಗಾರಿಗಳನ್ನು, 5-6 ಸಾವಿರ ರೂಪಾಯಿಗಳೊಳಗಿರುವ ಕಾಮಗಾರಿಗಳನ್ನು ಎಗ್ಜಿಕ್ಯೂಟಿವ್ ಇಂಜಿನಿಯರ್‌ರವರೇ ಸ್ಯಾಂಕ್ಷನ್ ಮಾಡಬಹುದು; ಅವರು ಟೆಂಡರು ಕರೆದು ಯಾರಿಗಾದರೂ ಕೊಡಬಹುದು, ಇಷ್ಟಪಟ್ಟರೆ ಅಮಾನಿಯಾಗಿಯೂ ಕೂಡ ಮಾಡಿಸಬಹುದು. ಎಂದು ಇದೆ. ಆದ್ದರಿಂದ ಅಕೌಂಟೆಂಟ್ ಜನರಲ್‌ರವರು ಆಕ್ಷೇಪಣೆಯೆತ್ತುತ್ತಾರೆಂದು ಹೇಳಿ ಅನೇಕ ಕಡೆ ಅಚ್ಚುಕಟ್ಟುದಾರರು ಬಂದು ಕೇಳಿದರೂ ಕೂಡ ಕೊಡುವುದಿಲ್ಲವೆಂದು ಹೇಳುವುದು ಸರಿಯಲ್ಲ. ಏಕೆಂದರೆ, ಕಾನೂನಿನಲ್ಲಿರತಕ್ಕ ರೀತಿಯಲ್ಲೇ, ಕಾನೂನಿಗೆ ವಿರೋಧವಾಗದ ಹಾಗೆ Estimated Rate ನಂತೆ ಕೊಡುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲವೆಂದು ಹೇಳುತ್ತೇನೆ. ಎಷ್ಟೋ ಕೆಲಸಗಳನ್ನು ಈಗಲೂ ಅಮಾನಿಯಾಗಿ ನಡೆಸುತ್ತಿದ್ದಾರೆ. ಆದ್ದರಿಂದ ಟೆಂಡರು ಮೂಲಕವೇ ಆಗಬೇಕು ಇಲ್ಲದಿದ್ದರೆ ಅನುಮಾನ ಪಡುತ್ತಾರೆ ಎಂದು ಹೇಳುವುದು ಸಾಧುವಲ್ಲ.

ಅಲ್ಲದೆ ಟೆಂಡರುಗಳನ್ನು ಕರೆಯಬೇಕೆನ್ನುವುದರಲ್ಲಿ ಒಂದು ಒಳಗುಟ್ಟಿದೆ. ಅನೇಕ ವೇಳೆ ಎಸ್ಟಿಮೇಟುಗಳಿಗೆ ಟೆಂಡರು ಕರೆದಾಗ, ಎಸ್ಟಿಮೇಟಿನ ಹಣಕ್ಕಿಂತ ಕಡಮೆಗೆ ಕೆಲಸಮಾಡುತ್ತೇವೆಂದು ಒಪ್ಪಿಕೊಳ್ಳುತ್ತಾರೆ. ಆ ಮೇಲೆ, ಕೆಲಸ ಶುರುವಾದ ಕೆಲವು ದಿವಸಗಳಲ್ಲೇ ಎಸ್ಟಿಮೇಟುಗಳನ್ನು ರಿವೈಸ್ ಮಾಡಿಸುವುದಕ್ಕೆ ಪ್ರಯತ್ನಗಳು ಶುರುವಾಗುತ್ತವೆ. ರಿವೈಸ್ ಮಾಡುವುದರ ಉದ್ದೇಶವೇನೆಂದರೆ, ಮೊದಲು ಕೆಲಸ ಇಷ್ಟಿತ್ತೆಂದು ಗೊತ್ತಿರಲಿಲ್ಲ, ಒಂದು ಅಂದಾಜನ್ನು ತಯಾರು ಮಾಡಿದ್ದೆವು, ಅಷ್ಟೆ, ವರ್ಷ ವರ್ಷ ಕಳೆದ ಹಾಗೆ ಸಾಮಗ್ರಿಗಳ ಬೆಲೆಗಳು ಏರುಪೇರಾಗುತ್ತವೆ ಎಂದು ಹೇಳುತ್ತಾರೆ. ಒಳಗಿನ ರಹಸ್ಯವೇನೆಂದರೆ,—ಇದು ಯಾರಿಗೂ ಗೊತ್ತಾಗುವುದಿಲ್ಲ—ಕಂಟ್ರಾಕ್ಟರುಗಳೂ ಸಂಬಂಧಪಟ್ಟ ಅಧಿಕಾರಿಗಳೂ colude ಆಗಿ ಆ ಎಸ್ಟಿಮೇಟುಗಳ ಬದಲಾವಣೆಗೆ ಏರ್ಪಾಡು ಮಾಡುತ್ತಾರೆ. ಹೀಗೆ ಮೊದಲು ಕಡಮೆ ಟೆಂಡರು ಕೊಟ್ಟು ಆಮೇಲೆ ರಿವೈಸ್ ಮಾಡಿಸುವ ಉಪಾಯವನ್ನು ಅವರು ಕಂಡು ಹಿಡಿದಕೊಂಡಿರುತ್ತಾರೆ.

ಇನ್ನೂ ಒಂದು ವಿಷಯವೇನೆಂದರೆ, ಭೂಮಿಯನ್ನು ಅಗತೆ ಮಾಡಬೇಕಾದ ಸಂದರ್ಭಗಳಲ್ಲಿ, ಕಾಲುವೆ ಮುಂತಾದುವುಗಳನ್ನು ತೋಡತಕ್ಕ ಸಂದರ್ಭದಲ್ಲಿ ಭೂಮಿಯ ಮಟ್ಟದಿಂದ ಕೆಳಗಡೆ ಹೋಗುತ್ತಾ ಹೋಗುತ್ತಾ ನಾನಾ ತೆರದ ಘನವುಳ್ಳ ಮಣ್ಣುಗಳು ಅಂದರೆ, gravel, soft rock, hard rock—ಇತ್ಯಾದಿಯಾಗಿ ಸಿಕ್ಕುತ್ತಿರುತ್ತವೆ. ಒಂದೊಂದು ಕಡೆಗೂ ಭೂಮಿಯ ಮಣ್ಣಿನ ಗುಣ ಬದಲಾವಣೆಯಾಗುವ ಹಾಗೆ, ಡಿಪಾರ್ಟ್‌ಮೆಂಟಿನವರು ಗೊತ್ತುಮಾಡಿರುವ ದರಗಳಲ್ಲೂ ವ್ಯತ್ಯಾಸವಿರುತ್ತದೆ. ಮೊದಲನೆಯ 3 ಅಡಿಗಳಿಗೆ 1 ರೂಪಾಯಿನಂತಿದ್ದರೆ, ಅದರ ಕೆಳಗಿನ soft rockಗೆ 1½ ರೂಪಾಯಿ ಇರುತ್ತದೆ. ಇನ್ನೂ ಕೆಳಗೆ ಹೋದರೆ, ಎರಡು ರೂಪಾಯಿ, ಮೂರು ರೂಪಾಯಿ ಇರುತ್ತದೆ. ಇವೆಲ್ಲಾ ಕಂಟ್ರಾಕ್ಟರುಗಳಿಗೆ ಅನುಕೂಲ ಮಾಡಬೇಕಾದರೆ ಬಹಳ ಸಹಾಯಕವಾಗಿರುತ್ತವೆ. ಮೊದಲು ಅಂದಾಜನ್ನು soft rock ಇತ್ತೆಂದು ಭಾವಿಸಿ ಕಮ್ಮಿ ದರದಂತೆ ತಯಾರಿಸಿ, ಆಮೇಲೆ, hard rock ಸಿಕ್ಕಿತೆಂದು ಹೇಳಿ ಹೆಚ್ಚಿಗೆ ದರದಂತೆ ಕೊಡುವುದಕ್ಕೆ ಇದರಿಂದ ಅವಕಾಶವಿದೆ. ಹೀಗಾಗಿ, ಎಷ್ಟೋ ದೊಡ್ಡ ದೊಡ್ಡ ಕಾಮಗಾರಿಗಳಲ್ಲಿ ಅವರಲ್ಲೂ ಎಲ್ಲೆಲ್ಲಿ foundation ತೆಗೆಯುವ ಸಂದರ್ಭಗಳಿರುತ್ತವೆಯೋ ಅಲ್ಲಿ 10 ಲಕ್ಷ ರೂಪಾಯಿಗಳ ಅಂದಾಜು ಇದ್ದದ್ದು 15 ಲಕ್ಷಕ್ಕೆ ರಿವೈಸ್ ಆಗಿರುವುದುಂಟು. ಕೇಳಿದರೆ, 'ನಾವು ಭೂಮಿಯೊಳಗಡೆ ನೋಡಿದ್ದೇವೆಯೇ, ಇದ್ದಕ್ಕಿದ್ದ ಹಾಗೆ hard rock ಸಿಕ್ಕಿತೆಂದು ಹೇಳುತ್ತಾರೆ. ಇದಕ್ಕೂ ಒಂದು ಉಪಾಯ ಇದೆ. ಮುಂಚೆ ಅಂದಾಜಾವನ್ನು ತಯಾರು ಮಾಡುವಾಗಲೇ ಕೂಲಂಕಷವಾಗಿ ನೋಡಿ ಅಂದಾಜು ತಯಾರು ಮಾಡಬೇಕು. ಹಾಲಿ ಇರುವ ಪದ್ಧತಿಯೇನೆಂದರೆ, ಎಂಥ ದೊಡ್ಡ ಪ್ರಾಜೆಕ್ಟನ್ನು ತಯಾರು ಮಾಡಬೇಕಾದರೂ ಅಲ್ಲಿನ local sub-overseer ಗಳೋ, ಅಥವಾ overseer ಗಳೋ ಎಸ್ಟಿಮೇಟುಗಳನ್ನು ತಯಾರು ಮಾಡುತ್ತಾರೆ. ಮುಕ್ಕಾಲು ಪಾಲು ಸಂದರ್ಭಗಳಲ್ಲಿ ಇಂಜಿನಿಯರುಗಳು ಮಾಡುವುದೇ ಇಲ್ಲ. ಈ overseer ಗಳೂ, 25 ಮೈಲಿಗಳ ಒಂದು ನಾಲಾ ತೆಗೆಯಬೇಕೆಂದಿದ್ದರೆ 25 ಮೈಲಿಗಳನ್ನೂ ಒಂದೊಂದಾಗಿ ಪರಿಶೀಲನೆ ಮಾಡಿ ಎಸ್ಟಿಮೇಟ್ ಮಾಡಿರುವುದಿಲ್ಲ. ಇಂಥ ಅಂದಾಜನ್ನು ಸ್ವಲ್ಪ ಮಟ್ಟಿಗೆ 'ಅದು ಹಾಗೆ' 'ಇದು ಹಾಗೆ' ಎಂದು ಅಲ್ಲಲ್ಲಿ ಸ್ವಲ್ಪ scrutinise ಮಾಡಿದ ಹಾಗೆ ಮಾಡಿ ಮೇಲಕ್ಕೆ ಕಳುಹಿಸಿಕೊಡುತ್ತಾರೆ, ಅಷ್ಟೆ. ಸೂಪರಿಂಟೆಂಡಿಂಗ್ ಇಂಜಿನಿಯರುಗಳ ಎಗ್ಜಿಕ್ಯೂಟಿವ್ ಎಂಜಿನಿಯರುಗಳು ನೇರವಾಗಿ ಹೋಗಿ ಎಸ್ಟಿಮೇಟ್‌ಗಳನ್ನು ತಯಾ

(ಶ್ರೀ ಡಿ. ದೇವರಾಜ ಅರಸ್.)

ರಿಸುವುದು ಅಪರೂಪ. ಹೀಗಾಗಿ ಮೊದಲು 10 ಲಕ್ಷವಿದ್ದುದು ಆಮೇಲೆ 15 ಲಕ್ಷವಾಗುವುದಕ್ಕೆ ಅವಕಾಶವಿದೆ. ಆದ್ದರಿಂದ ಇದನ್ನು ತಡೆಗಟ್ಟಬೇಕಾದರೆ ಮೊದಲೇ ಅಂದಾಜಾ ತಯಾರಿಸುವಾಗಲೇ ಪ್ರತಿ ನೂರು ಗಜ, 50 ಗಜಕ್ಕೂ trial pits ಗಳನ್ನು ಮಾಡಿ, ಎಷ್ಟು ಆಳ ತೋಡಬೇಕೋ ಅಷ್ಟು ತೋಡಿ ಯಾವ ಯಾವ ತರಹೆಯ ಮಣ್ಣು ಎಷ್ಟೆಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆಂಬುದನ್ನು ಸ್ವಲ್ಪ ಹೆಚ್ಚು ಕಡಮೆ accurate ಆಗಿ ಗೊತ್ತು ಮಾಡಬಹುದು. ಹೀಗೆ ಮಾಡಿ, ಎಸ್ಟಿಮೇಟುಗಳು ಪುನಃ ಪುನಃ ಏರುಪೇರಾಗದೆ ಮೊದಲು ಗೊತ್ತು ಮಾಡಿಕೊಂಡ ದುಡ್ಡಿನಲ್ಲೇ ಕೆಲಸಮಾಡುವುದಕ್ಕೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನು ಕೂಡ ಸರ್ಕಾರದವರು ಕೂಲಂಕಷವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ, Forest Demand ಗೆ ಸಂಬಂಧಪಟ್ಟ ಹಾಗೆ ಬಂದಿರುವ ಮನವಿಯ ವಿಚಾರದಲ್ಲಿ ಒಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ನಮ್ಮ ಹುಣಸೂರು ಟೌನಿನಲ್ಲಿ ಈಗ್ಗೆ ಸುಮಾರು 50 ವರುಷಗಳಿಂದ ಕೊಡಗಿನ ಸರ್ಕಾರದವರು ಒಂದು ಟಿಂಬರ್ ಡಿಪೋವನ್ನಿಟ್ಟಿದ್ದಾರೆ. ಇತ್ತೀಚೆಗೆ ಕೊಡಗಿನ ಸರ್ಕಾರ ಈ ಟಿಂಬರ್ ಡಿಪೋವನ್ನು ಮೈಸೂರು ಹತ್ತಿರ ಒಂದು ಸ್ಥಳಕ್ಕೆ ವರ್ಗಾಯಿಸಬೇಕೆಂದು ಮನಸ್ಸು ಮಾಡಿದ್ದಾರೆಂದು ನಾನು ಕೇಳುತ್ತೇನೆ. ಇದರ ಬಗ್ಗೆ ಅವರು ನಮ್ಮ ಸರ್ಕಾರದ ಅಭಿಪ್ರಾಯವನ್ನು ಕೇಳಿದ್ದಾರೆಂತಲೂ ಸಹ ನಾನು ಕೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರಕ್ಕೆ ಕೊಡಗಿನ ಸರ್ಕಾರದವರು ಈಗ ಹಾಲಿ ಹುಣಸೂರಿನ ಸಮೀಪ ಇರತಕ್ಕಂಥ ಟಿಂಬರ್ ಡಿಪೋವನ್ನು ಮೈಸೂರು ಹತ್ತಿರಕ್ಕೆ ವರ್ಗಾಯಿಸತಕ್ಕ ಬಗ್ಗೆ ನಿಮ್ಮ ತಕರಾರುಗಳು ಅಥವಾ ಅಬ್‌ಜೆಕ್ಷನ್‌ಗಳೇನಾದರೂ ಇರುತ್ತವೆಯೋ ಎಂದು ಕೇಳಿದ್ದಾರೆಂತಲೂ ನಾನು ತಿಳಿಯುತ್ತೇನೆ. ಆದರೆ ಈಗಾಗಲೇ ಈ ಬಗ್ಗೆ ನಮ್ಮ ಮೈಸೂರು ಸರ್ಕಾರದ ಫಾರೆಸ್ಟ್ ಇಲಾಖೆಯವರು ಸರ್ಕಾರಕ್ಕೆ ತಮ್ಮ ಶಿಫಾರಸುಗಳೊಂದಿಗೆ ಒಂದು ವರದಿಯನ್ನು ಕಳುಹಿಸಿದ್ದಾರೆಂದು ಕೇಳುತ್ತೇನೆ. ಈ ಸಂಬಂಧವಾಗಿ ಮೈಸೂರು ಜಿಲ್ಲೆಯ ಫಾರೆಸ್ಟ್ ಇಲಾಖೆಯ ಅಧಿಕಾರಿಗಳು ಆ ಟಿಂಬರ್ ಡಿಪೋವನ್ನು ಮೈಸೂರು ಹತ್ತಿರಕ್ಕೆ ವರ್ಗಾಯಿಸುವುದರಿಂದ ನಮ್ಮ ಟಿಂಬರ್‌ಗೆ ಮಾರ್ಕೆಟ್ಟಿನಲ್ಲಿ ಧಾರಣೆ ಬಿದ್ದು ಹೋಗಬಹುದು ; ಆಗ ಅದರಿಂದ ನಮ್ಮ ಆದಾಯ ಕಡಮೆಯಾಗಿ ನಮಗೆ ನಷ್ಟವಾಗಬಹುದು ಎಂದು ವರದಿ ಕಳುಹಿಸಿದ್ದಾರೆಂದು ಕೇಳುತ್ತೇನೆ. ಹಾಗೆ ಅವರು ಇದನ್ನು ವರ್ಗಾಯಿಸಕೂಡದೆಂದು ಶಿಫಾರಸನ್ನು ಕಳುಹಿಸಿದ್ದರೂ ಕೂಡ ಆ ಶಿಫಾರಸನ್ನು ಹಾಗೆ ಒಂದು ಕಡೆಗೆ ಇಟ್ಟು ಅವುಗಳ ಬಗ್ಗೆ ಸರ್ಕಾರಕ್ಕೆ ಶಿಫಾರಸನ್ನು ಕಳುಹಿಸದೆ ಚೀಫ್ ಕನ್ಸರ್ವೇಟರ್ ತಮ್ಮದೇ ಆದಂಥಾ ಒಂದು ಶಿಫಾರಸನ್ನು—ಅಂದರೆ ಸರ್ಕಾರ ಆ ವರ್ಗಾವಣೆಗೆ ಅವಕಾಶಕೊಡತಕ್ಕ ಧಾಟಿಯಲ್ಲಿ ಶಿಫಾರಸನ್ನು ಕಳುಹಿಸಿದ್ದಾರೆಂದೂ, ಅದಕ್ಕನುಸಾರವಾಗಿ ನಮ್ಮ ಸರ್ಕಾರದವರು ಆ ವರ್ಗಾವಣೆಗೆ ಅವಕಾಶ ಕೊಡಲು ಒಪ್ಪಿಕೊಳ್ಳುವಂಥ ಅವಕಾಶವಿದೆಯೆಂದೂ ಕೂಡ ನಾನು ಕೇಳುತ್ತೇನೆ. ಆದರೆ ಇದರಲ್ಲಿ ನಿಜಾಂಶವೇನಿರುತ್ತೆಂಬ ಬಗ್ಗೆ ಸರ್ಕಾರದವರು ತಿಳಿಸಬೇಕಾಗಿರುತ್ತೆಂದು ನಾನು ಕೇಳಿಕೊಳ್ಳುತ್ತೇನೆ. ಆದರೆ ಈಗ ಚೀಫ್ ಕನ್ಸರ್ವೇಟರ್ ಅವರು ಸರ್ಕಾರಕ್ಕೆ ಕಳುಹಿಸಿರುವಂಥ ಶಿಫಾರಸುಗಳ ಬಗ್ಗೆ ತಾವು ಸ್ಥಳಕ್ಕೆ ಬಂದು ಅಲ್ಲಿನ ಪರಿಸ್ಥಿತಿ ಏನಿದೆ, ಅಲ್ಲಿಯ ಜನ ಏನು ಹೇಳುತ್ತಾರೆ, ಹಾಗೆ ಇದನ್ನು ಅಲ್ಲಿಂದ ವರ್ಗಾಯಿಸಿದರೆ ನಮ್ಮ ಸರ್ಕಾರಕ್ಕೇನಾದರೂ ನಷ್ಟ ಆಗುತ್ತದೆಯೋ ಅಥವಾ ಬರುತ್ತಿರುವ ಆದಾಯವೇನಾದರೂ ಕಡಮೆಯಾಗುತ್ತದೆಯೋ ಎಂಬುದನ್ನೆಲ್ಲಾ ಮೊದಲು ನಿರ್ಧರಪಡಿಸಿಕೊಂಡು ತದನಂತರ ಸರ್ಕಾರದವರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಲು ಇಚ್ಛಿಸುತ್ತೇನೆ ; ಮತ್ತು ನಾನು ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸಮರ್ಥಿಸುತ್ತೇನೆ.

*Sri S. SRINIVASA IYENGAR (T.-Narasipur).—I beg to place before this House a few observations on the supplementary demands placed before us. As it has already been made clear, the supplementary demands total Rs. 68·41 lakhs on the voted section and Rs. 15·49 lakhs on the charged section. It has been made clear by the Finance Minister that a supplementary demand also was moved in the October session to the tune of nearly Rs. 1·2 crores. These two demands would amount to about Rs. 2 crores. I want to suggest that supplementary demands embracing such a large amount should not be introduced in this manner (*Sri J. Mohamed Imam—Haphazardly.*) The Government should have thought about some of these things. It is true these demands relate to many schemes that were not thought of at the time of the budget. Even for a new service, I think, if a new work is undertaken and that work is not contained in the Appendices to the Budget, then it can only be considered as a new work. Suppose there is an old work included in the programme of the Budget and the amount for that work is not enough; then we can adjust the amount by appropriation. Now the attempt is to introduce fresh work. For the introduction of these fresh works, opportunity has not been given to the Legislature to think about them. Therefore, instead of undertaking these works whenever they want, it would be better that such schemes costing such a huge lot of money are brought under the regular budgets themselves.

Speaking under Demand No. 11, page 5, item 1, it reads as follows :

"The question regarding the fixation of rent of the Hotel, K.R. Sagara, was under consideration for some time past and final orders

* Indicates that the speach has not been revised by the Member concerned.

were passed in November 1954, fixing the rent at Rs. 1,800 p.m. with effect from 1st April 1953. The arrears of rent for the last year and the claim for the current year have to be discharged and additional grant is therefore asked for. No provision was made for this in the current year's Budget."

I wanted to know to whom is this rent paid. If it is only an adjustment between the Public Works Department and the Hospitality Organization ; it would cost us nothing. It will be an account adjustment. On the other hand, if it is something else, I want to know how it was fixed. Prior to fixation of this rent, we want to know how the rent for that building was being charged, how much was it and why was it revised. If supposing the Government's decision of charging a rent at Rs. 1,800 is accepted, then as that institution is being run by Government itself, we want to know whether the running of that institution would pay us anything. Having charged as much amount as Rs. 1,800 per mensem in the profit and loss account would it be possible for Government to earn any profit from this institution ? Therefore, if this fact was also placed before us, we could have placed a suggestion that this hotel at Krishnaraja Sagara, might be given away to private management instead of Government maintaining it because then the Government would secure at least the rent. Therefore, it is very necessary to know why it has been fixed like this.

Secondly, it is stated in item No. 2 that an honorarium is paid. I want to know to whom that honorarium is paid and what is the rate of honorarium.

The third point I wanted to say was about Demand No. 25. I am glad the Government is making use of the assistance that is being given by the Central Government towards subsidised industrial housing scheme. But what I could not understand was, why the Government did not make use of the lower income group housing scheme. The Government of India, I am told, have offered a grant of Rs. 10 lakhs for the Government of Mysore to finance Low Income Group Housing. I have already congratulated the Government on the work done under Subsidised Industrial Housing Scheme. This industrial housing scheme is being pushed through by a registered corporation and we had also a Bill before us—the Housing Board Bill. The Government have offered the scheme of Low Income Group Housing. According to their scheme, the Government have set apart several lakhs of rupees for the benefit of various States. Even this morning I read in newspapers that for the year 1955-56 the Government of India have set apart rupees one crore towards this scheme. (*Sri L. Siddappa.–That is for the Middle Class Income Group.*) The scheme is called the Low Income Group Housing. According to that scheme, every taluk gets a quota. I am told that according to that scheme, every taluk would get a lakh of rupees to meet the expenditure in connection with the providing of residential buildings for low income group housing. The scheme also contains the maximum limit of salary or the amount of income ; it has a limit to income also. I am told that, all persons getting an income of Rs. 8,000 per annum and less will be benefited under this scheme. The repayment of the loan so obtained from the Government of India is limited to thirty annual instalments and the interest charged is 5½ per cent. We have such attractive terms and I thought the Government would have certainly made use of this opportunity. Knowing the Chief Minister as I do, I thought he would not have left this opportunity. I do not know why he has left it.

Sri J. MOHAMED IMAM.—Then you don't know him.

Sri S. SRINIVASA IYENGAR.—In Mysore State we have a central organisation of housing under co-operative lines. It is in existence for the last eight years or about that time. It is called the Mysore Provincial Housing Corporation. The Government of Mysore have nominated its Chairman to start with—Mr. Justice Nageswara Aiyar. Sri M. Narasimhaiya, retired Chief Engineer of Mysore State, is a member of that institution. Government have a right of nominating three

(SRI S. SRINIVASA IYENGAR.)

people on the Board of Directors. That institution has institutions all over the State affiliated to it and they raise and supply funds to the house building institutions throughout the State. That institution is best suited for receiving a grant of this type and supplying finance to the various affiliated institutions for developing housing schemes. That being the case, I do not know why the Government of Mysore did not think of getting this assistance and this assistance of Rs. 10 lakhs is about to lapse by the end of March. I consider that the Government of Mysore should take immediate action to see that this amount is drawn and paid to the Provincial Housing Corporation that has its jurisdiction throughout the whole State.

Sri N. HUCHMASTHY GOWDA (Huliyurdurga).—Villages do not come within the purview of these societies that are in the taluk headquarters.

Sri S. SRINIVASA IYENGAR.—There is no bar. It depends on us. We can organize house building co-operative societies anywhere. For such an organisation, the central organization is the Provincial Housing Corporation in Bangalore and the Government of India is offering an assistance of Rs. 10 lakhs for 1954-55. Why should not the Government make use of that opportunity ? It is true the repayment is to be guaranteed by the State Government. There is one point. If the loan is drawn, it is to be repaid, the repayment is to be guaranteed by the State Government. They can easily do it. They have already trusted the Provincial Housing Corporation with a loan of Rs. 9 lakhs. Why should they not draw this loan through this institution and distribute it, and extend the benefit further ? The time at our disposal is very short and the scheme has to survive and be continued for the coming year. We have got a scheme, that is what we are told in the press. I want a statement from the Government whether there is a scheme like that; if so, make the best use of that scheme.

Coming to the next point, that is under Demand No. 29, I wish to have some clarification from the Finance Minister. In item No. 1, the Government propose to spend nearly rupees one lakh to shift the Bitumen Emulsion Plant. Why should they do it ? The expenditure is such a large amount—one lakh of rupees. Why should the Bitumen Plant be shifted at all ? What is the trouble ? At a time when we have no money even for development works, for social activity, why should we subscribe for a lakh of rupees to shift the plant ? That is one thing.

2 P.M.

The next thing is as regards this village road development co-operative scheme. I do not hear much about the scheme at all. No doubt, I have seen the mention of this scheme in the activities of the Department in their reports that have been supplied to all of us recently. Beyond mention of it in the supplementary grants, what is the nature of co-operation that Government expect ? In the speech delivered by the Hon'ble Finance Minister, he deals with the subject as follows :

> "Similarly in the case of Demand No. 29, the sum of Rs. 10·11 lakhs required as additional grant is in respect of (1) the construction of five new roads in Hassan District on co-operative lines,"

What is that co-operative line ? What does the Government mean by the word co-operation ? To what extent is co-operation extended in the construction of the five roads ?

> "(2) purchase of Steam Road Rollers and Lorries and (3) speeding up the concreting and asphalting of important State Fund Roads over which there is very heavy traffic. I may state that a major portion of the expenditure is covered by Central assistance."

That is why I have raised this point. When there is central assistance, has Government taken any steps to see that grants are given to all parts of the Mysore State ? Somehow under

various schemes, the most favoured district is the Hassan District. If the scheme is to be implemented in Mysore State and if the Government undertake steps to see that the wants of the whole of the State are met, I entirely agree. There is meaning in it. Regarding village road development schemes, if the Government should have thought of such schemes for the whole of the State, if they have received the requirements of every part of the State, if they have worked up schemes for the whole State, I agree. But we only have the proposal of the Hassan District. And that too we do not know the commitment. How much has to be spent? They have said a token grant and that is a very dangerous grant. I feel that we should not give a token grant. I will read this para:

> "Item No. 3—(*a*) The following cement concreting of roads are in progress."

If they are in progress why should you treat it as a new service?

> ". . . and the expenditure to be incurred on these during the current year will be met by reappropriation".

That is good.

> "As these works fall under the category of New Service a token grant of Rs. 100 is asked for each item."

There are two things here. The estimate of work undertaken is not unknown. Here it is known. It is committed to the extent of twelve lakhs under 3 A, and eight lakhs under 3 B. Such a heavy commitment is shown here. Why should it be shown in the middle of the year or especially at the tail end? You could have shown it in 55-56 Budget and then we would have an opportunity of placing before Government the importance of various roads and speaking on the comprehensive scheme. So long as the Central assistance is there, the Government should see that every part of the State is benefited. I have the grievance that particular attention has been paid to a particular part of the State. Government should have waited for some period.

The next thing that I wanted to speak was about Demand No. 26. Sri Nagarajamurthy dealt with that subject. I wish to place before the Government one or two issues. It is for the purpose of getting clarification. The expenditure under this head does not involve an outlay of cash. That is quite clear. What I wish to know is this. The Accountant-General has sometimes and many times pointed out that these industries borrow funds and therefore interest has to be charged. That is correct. That has been done under 22 (*e*). Whatever amount we have borrowed and whatever loan it may be you are liable to pay interest and the liability of the payment of interest by the State is brought under 22 (*e*). It is a charged item. But why should it be provided under each demand also? The loan is raised by the State of Mysore. The interest is to be paid by the State of Mysore. It is brought under a separate head, *i.e.*, 22 (*e*). But when a separate amount is spent on a particular industry, why should that interest be shown in the charged item under that demand? I say that it is redundant. We are providing it once again. If it is provided under charged head, we will not be in a position to know if an industry has earned enough to pay interest. A little more clarification is necessary. What the Accountant-General said has to be made known to us in a clear way.

Sir, as regards item No. 32, item No. 6, to meet the liability in respect of pension of the composite State of Madras paid abroad, the liability is to the tune of Rs. 20,000. I want to know from the Government whether we get this amount recouped from the State of Madras or is it a liability on us?

(*Interruption*).

So, I want to know whether the Government of Madras would repay this amount and whether we have received any payment from them till today and whether we have received our share of the various funds built up

(SRI S. SRINIVASA IYENGAR.)

in the composite State of Madras. These are things that we ought to know.

Sir, lastly, I have stated that even under Demand No. 41 A, many works estimated to cost several lakhs are undertaken in a hurry and by an executive order. I believe this House is entitled to have a full picture of the schemes undertaken by the Government in the Budget Session itself. Such large schemes should not be brought under supplementary demands. Thereby we will not have enough material nor time to discuss. I therefore submit that the system of asking supplementary grants for these large schemes should be discontinued. The Accountant General has many times observed that our budgeting is not correct. I do not want to put it that way. There is much variation in our budgeting. Between the actuals and budgeting, we have a variation of 26 per cent. That will not lead us anywhere. It will only give us a very false picture. We should be more careful in budgeting. If necessary, we should provide the necessary staff to give us a correct picture. Then, we will know our commitments and where we stand.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).— ಸ್ವಾಮಿ, ಈ ಸಪ್ಲಿಮೆಂಟರಿ ಡಿಮ್ಯಾಂಡುಗಳ ವಿಷಯದಲ್ಲಿ ಮಾತನಾಡುವಾಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಕೆಲವು ಟೀಕೆಗಳನ್ನು ಮಾಡಿದರು. ಸರ್ಕಾರದವರು ಪ್ರಾರಂಭದಲ್ಲಿ ಬಡ್ಜೆಟ್ ತಯಾರುಮಾಡುವ ಕಾಲದಲ್ಲಿ ಇವುಗಳನ್ನೆಲ್ಲಾ ನಿರೀಕ್ಷಣೆ ಮಾಡಿ ಆಗಲೇ ತರಬೇಕು, ಈರೀತಿ ಇಷ್ಟು ದೊಡ್ಡ ಮೊತ್ತಗಳಿಗೆ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತರುವುದು ಯುಕ್ತವಲ್ಲವೆಂದು ಟೀಕೆಮಾಡಿದರು. ಆದರೆ ಈ ಮೆಮೊರ್ಯಾಂಡಂನಲ್ಲಿ ಕೊಟ್ಟಿರುವ ಹಾಗೆ,

"The Supplementary Statement now placed before the Legislature relates to expenditure incurred or expected to be incurred on (a) appropriations made in the Budget but found to be insufficient, (b) expenditure in respect of items for which no provision was made in the original estimate for want of sanction, (c) additional appropriations required on technical grounds, (d) expenditure authorised from contingency fund pending recoupment and (e) New Service items to be met by reappropriation."

ಆಡಳಿತ ನಡೆಸುವ ಕಾಲದಲ್ಲಿ ಇಲ್ಲಿ ಸೂಚಿಸಿರುವಂತಹ ಸನ್ನಿವೇಶಗಳು ಒದಗುತ್ತವೆ. ಆದಕಾರಣ ಮುಂಚೆಯೇ ಇದನ್ನೆಲ್ಲಾ ನಾವು ಊಹೆ ಮಾಡಿಕೊಂಡು ಬಡ್ಜೆಟ್ಟನ್ನು ತಯಾರುಮಾಡುವುದು ಸಾಧ್ಯವಿಲ್ಲ. ಆದುದರಿಂದಲೇ ರಾಜ್ಯಾಂಗದಲ್ಲಿ ಈರೀತಿ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ತರುವುದಕ್ಕೆ ಅವಕಾಶ ಮಾಡಿದ್ದಾರೆ. ಆದುದರಿಂದ ಪ್ರತಿ ಸಾರಿ ಸಪ್ಲಿಮೆಂಟರಿ ಡಿಮ್ಯಾಂಡ್ ಬಂದಾಗಲೂ ಒಂದೇ ಮಾತನ್ನು ಪುನಃ ಪುನಃ ಹೇಳುವುದರಲ್ಲಿ ಸಾರ್ಥಕವಿಲ್ಲವೆಂದು ವಿನಯದಿಂದ ತಿಳಿಸುತ್ತೇನೆ. ಇದು ಬಂದೇಬರುತ್ತದೆ, ಸಭೆಯಲ್ಲಿ ಇದನ್ನು ಸಮಾಲೋಚನೆ ಮಾಡಲೇಬೇಕು. ಆದುದರಿಂದ ಒಂದೊಂದು ಬಾಬನ್ನೂ ಸಮಾಲೋಚನೆ ಮಾಡುವುದು ಯುಕ್ತವಾಗಿದೆ. ಹೀಗೆ ಮಾಡುವುದರಲ್ಲಿ ನಾವು ಸರ್ಕಾರಕ್ಕೆ ಒಳ್ಳೆಯ ಸಲಹೆಗಳನ್ನು ಕೊಡಬಹುದು.

"DEMAND No. 7. *Item No.* 1.—To meet the additional expenditure on account of Non-Resident Dealers' Circle at Bangalore, constituted for the assessment and recovery of sales-tax from non-resident dealers."

ಎಂದು ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ತಿಳಿಸಿದ್ದಾರೆ. Non-resident dealers ನಿಂದ ಯಾವ ರೀತಿ ಟ್ಯಾಕ್ಸ್ ವಸೂಲುಮಾಡುತ್ತಾರೆ, ಇದಕ್ಕೆ ಸಂಬಂಧಪಟ್ಟ ಮೆಷಿನರಿ ಯಾವರೀತಿ ಕೆಲಸಮಾಡುವುದು ಎಂಬುದನ್ನು ಸಭೆಗೆ ತಿಳಿಸಿದ್ದರೆ, ಅನುಕೂಲವಾಗುತ್ತಿತ್ತು.

ಎಂಟನೆಯ ಡಿಮ್ಯಾಂಡ್. ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಳ್ಳುವಾಗ ಶಾಸ್ತ್ರೀಯ ವಿಧಾನದಲ್ಲಿ ಪರಿಶೀಲನೆ ನಡೆಸಿ ಯಾವ ಕೆರೆಗಳನ್ನು ನಾವು ಜೀರ್ಣೋದ್ಧಾರ ಮಾಡಿದರೆ ಲಾಭದಾಯಕವಾಗಿರುತ್ತದೆ, ಫಲಕಾರಿಯಾಗಿರುತ್ತದೆ ಅಥವಾ ರೈತರಿಗೆ ಉಪಯುಕ್ತವಾಗುತ್ತದೆ ಎಂಬುದನ್ನು ವಿಮರ್ಶಿಸಬೇಕಾದ ಕಾಲ ಬಂದಿದೆ. ನಮ್ಮ ದೇಶದಲ್ಲಿ ಸಾವಿರಾರು ಕೆರೆಗಳಿವೆ. ಹಿಂದಿನ ಕಾಲದಲ್ಲಿ ಈ ಕೆರೆಗಳನ್ನು ಕಟ್ಟಿಸಿದಾಗ ಯಾವರೀತಿ ಆ ಕೆರೆಗಳಿಗೆ ನೀರು ಸರಬರಾಯಿ ಆಗುತ್ತಿತ್ತು ಎಂಬುದನ್ನೂ ಕೂಡ ವಿಮರ್ಶಿಸಬೇಕಾಗಿದೆ. ಏಕೆಂದರೆ, ಈಗ ಅನೇಕ ಹೊಸ ರಸ್ತೆಗಳು, ಹೊಸ ಜಮೀನುಗಳು ಇವೆಲ್ಲ ಬಂದು ಹಿಂದೆ ಆ ಕೆರೆ ತುಂಬಬೇಕಾದರೆ ಯಾವ ಯಾವ ಅನುಕೂಲಗಳಿದ್ದವೋ ಆಯಾ ಅನುಕೂಲಗಳು ಈಗ ಇಲ್ಲ. ಆದಕಾರಣ ಪುನಃ ಇಂಥಾ ಕೆರೆಗಳನ್ನು ದುರಸ್ತುಮಾಡಿದರೆ ಇವುಗಳಿಂದ ರೈತರಿಗೂ ಉಪಯೋಗವಿಲ್ಲ, ಸರ್ಕಾರಕ್ಕೂ ಹಣ ವ್ಯರ್ಥವಾಗಿ ವ್ಯಯವಾಗುತ್ತದೆ. ಇದನ್ನು ತಪ್ಪಿಸಬೇಕಾದರೆ, ಈ ಕೆರೆಗಳ ವಿಷಯದಲ್ಲಿ ಸರಿಯಾದ ಒಂದು ಸಮಿತಿಯನ್ನು ಮಾಡಿ 26 ಸಾವಿರ ಕೆರೆಗಳು ಮತ್ತು ಇನ್ನೂ ದೊಡ್ಡ ದೊಡ್ಡ ಕೆರೆಗಳು ಇವುಗಳ ವಿಷಯದಲ್ಲಿ ಯಾವ ಯಾವ ಕೆರೆಗಳನ್ನು ನಾವು ದುರಸ್ತು ಮಾಡುವುದು ನ್ಯಾಯ, ಇವಕ್ಕೆ ವ್ಯಯಮಾಡುವ ಹಣ ಸದುಪಯೋಗವಾಗುತ್ತದೆಯೆ ಎಂಬುದನ್ನು ವಿಮರ್ಶೆಮಾಡಬೇಕು. ಇದಕ್ಕೆ ಯಾವುದಾದರೂ ತಜ್ಞರ ಸಮಿತಿಯನ್ನಾದರೂ ನಿಯಮಿಸಬೇಕಾಗುತ್ತದೆ.

ಆಗಾಗ, ಈ ಕೆರೆಗಳ ವಿಷಯದಲ್ಲಿ ಆಯಾ ಕ್ಷೇತ್ರಗಳಿಂದ ಬರತಕ್ಕ ಸದಸ್ಯರು ಅಲ್ಲಿಯ ಕೆರೆ ದುರಸ್ತಾಗಬೇಕು, ಹಣವನ್ನು ಖರ್ಚುಮಾಡಬೇಕು ಎಂಬ ಸಲಹೆಯನ್ನು ಸಭೆಯ ಮುಂದಿಡುತ್ತಾರೆ. ಅಂಥಾ ಸಂದರ್ಭದಲ್ಲಿ ಆ ಒಂದು ಕೆರೆಯ ವಿಷಯದಲ್ಲಿ ಇದನ್ನೆಲ್ಲಾ ಪರ್ಯಾಲೋಚನೆ ಮಾಡುವುದಕ್ಕಾಗುವುದಿಲ್ಲ. ಈಗ ಹೊಸದಾಗಿ ಅನೇಕ ನಾಲೆಗಳು ಬರುತ್ತಿವೆ, ದೊಡ್ಡದೊಡ್ಡ ಯೋಜನೆಗಳನ್ನು ತೆಗೆದುಕೊಂಡು ಹೊಸ ನಾಲೆಗಳನ್ನು ನಾವು ನಿರ್ಮಾಣಮಾಡುತ್ತಿದ್ದೇವೆ. ಅದಕ್ಕೋಸ್ಕರವಾಗಿ ಅನೇಕ ನಾಲೆಗಳನ್ನು ರಚಿಸುತ್ತಿದ್ದಾರೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಹೊಸ ನಾಲೆಗಳನ್ನು ಕೂಡ ಕಟ್ಟಿಸುತ್ತಿದ್ದಾರೆ. ಆದ್ದರಿಂದ ಈಗ ನೀರಾವರಿ ಕೆಲಸ ಬಹಳವಾಗಿ ಹೆಚ್ಚಾಗಿ ಆಗುವುದರಿಂದ ಯಾವ ಕೆರೆಗಳನ್ನು ದುರಸ್ತುಮಾಡಬೇಕು, ಬಿಡಬೇಕು, ಎಂಬ ವಿಷಯವನ್ನು ಸ್ವಲ್ಪ ಯೋಚನೆಮಾಡುವುದು ಯುಕ್ತವೆಂದು ಕಾಣುತ್ತದೆ, ಎಂದು ಈ Demand 8ರ ವಿಷಯದಲ್ಲಿ ಈ ಸಲಹೆ ಮಾಡುತ್ತೇನೆ.

DEMAND No. 11: ಕೃಷ್ಣರಾಜಸಾಗರದ ಹೊಟೇಲಿನ ವಿಷಯದಲ್ಲಿ ನಾನು ನನ್ನ ಅಭಿಪ್ರಾಯವನ್ನು ಸ್ವಲ್ಪ ತಿಳಿಸಬೇಕಾಗಿದೆ. ಕೃಷ್ಣರಾಜಸಾಗರದ ಬೃಂದಾವನದ ಹೊಟೇಲ್ ಬಹಳ ಒಳ್ಳೆ ದೊಡ್ಡ high class hotel; ಆದರೆ ಪ್ರಜೆಗಳೆಲ್ಲಾ ಹೋಗಿ ಆ ಹೊಟೇಲಿನಲ್ಲಿ ಇಳಿದುಕೊಂಡು ಅದರ ಅನುಕೂಲವನ್ನು ಪಡೆಯಲಿಕ್ಕೆ ಸಾಧ್ಯವಿಲ್ಲ. ಅದು ಯಾವುದೋ ಬಹಳ ದೊಡ್ಡ ಮನುಷ್ಯರು, ಐಶ್ವರ್ಯವಂತರಾದಂಥವರಿಗೆ ಅನುಕೂಲವಾಗಿದೆ. ಅವರಿಗೆ ಅನುಕೂಲ ಇರಬೇಕಾದುದು ನ್ಯಾಯ. ಅದೂ ಇರಲಿ. ಸಾಮಾನ್ಯವಾಗಿ ವರಮಾನ ಬರತಕ್ಕಂಥವರು ಮಧ್ಯಮ ವರ್ಗದವರು ಅವರೂ ಕೂಡ ಅಲ್ಲಿ ಹೋಗಿ 2-3 ರಾತ್ರಿ ಕಳೆಯುವುದಕ್ಕೆ ಅವಕಾಶವಿರುವ ಹಾಗೆ ಯಾರಾದರೂ ಸಾಮಾನ್ಯ ಪ್ರಜೆಗಳ ಅನುಕೂಲಕ್ಕಾಗಿ ಅವರ ಶಕ್ತಿಗೆ ನಿಲುಕುವ ಹಾಗೆ ಒಂದು ಹೊಟೇಲು ಏರ್ಪಾಡುಮಾಡಬೇಕಾದುದು ಅಗತ್ಯವೆಂದು ನನಗೆ ತೋರುತ್ತದೆ. ಈಗ ಇರುವುದು ಬಹಳ high class hotel ಆಗಿದೆ.

ಒಬ್ಬ ಸದಸ್ಯರು.—ಅಲ್ಲಿ ಛತ್ರ ಇದೆಯೆಂದು ಕಾಣುತ್ತದೆ?

ಶ್ರೀ ಪಿ. ಆರ್. ರಾಮಯ್ಯ.—ಸಾಮಾನ್ಯವಾಗಿ ನಾವು high class ಮನುಷ್ಯರಿಗೆ ಈ ರೀತಿಯಾದಂಥ ಅನುಕೂಲಗಳನ್ನು ಮಾಡುವುದು ಯುಕ್ತವಾಗಿದ್ದರೂ ಕೂಡ ಸಾಮಾನ್ಯ ಪ್ರಜೆಗಳಿಗೆ ಅವರ ಶಕ್ತಿ ಇರುವಷ್ಟಕ್ಕೆ ಅನುಕೂಲಮಾಡಬೇಕು ಎಂಬ ಅಂಶ ಈ ಸಭೆ ಗಮನಕ್ಕೆ ತಂದಿದ್ದೇನೆ. ಛತ್ರ ಎಂದು ಒಬ್ಬ ಸದಸ್ಯರು ಹೇಳಿದರು. ನವೀನ ರೀತಿಯಲ್ಲಿ ಒಂದು ಛತ್ರ ಕಟ್ಟಿದರೂ ಕೂಡ ಸಾಮಾನ್ಯ ಪ್ರಜೆಗಳಿಗೆ ಎಷ್ಟೋ ಅನುಕೂಲವಾಗುತ್ತದೆ. ಅದಕ್ಕೆ ನನ್ನ ಒಪ್ಪಿಗೆ ಇದೆ—ನಾನು ಇಂಡಿಯಾ ದೇಶವನ್ನೆಲ್ಲಾ ಸುತ್ತಿ ಬಂದಿದ್ದೇನೆ. ಅಲ್ಲಿ ಸಾಮಾನ್ಯವಾಗಿ ಪ್ರಜೆಗಳ ಮಧ್ಯಮ ವರ್ಗದವರ ಅನುಕೂಲಕ್ಕಾಗಿ ಕಟ್ಟಿಸಿರುವ ಅನೇಕ ಛತ್ರಗಳನ್ನು ನೋಡಿದ್ದೇನೆ. ಅವು ಬಹಳ ಅನುಕೂಲ ಸ್ಥಿತಿಯಲ್ಲಿವೆ. ನನ್ನಂಥವರು ಕೃಷ್ಣರಾಜಸಾಗರದ ಹೊಟೇಲಿನಲ್ಲಿ ಕಾಲ ಕಳೆಯಬೇಕು ಎಂದರೆ ನಮ್ಮ ವರಮಾನಕ್ಕೆ ನಿಲುಕುವ ಹಾಗೆ ಒಂದು ಏರ್ಪಾಡು ಮಾಡಬೇಕು. ನಾನು ಮಾತನಾಡತಕ್ಕದ್ದು ನನ್ನ ಸ್ವಂತಕ್ಕಲ್ಲ. ಸಾಮಾನ್ಯ ಪ್ರಜೆಗಳಿಗೋಸ್ಕರವಾಗಿ ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರದವರು ಈ ವಿಷಯವನ್ನು ಸ್ವಲ್ಪ ಯೋಚನೆಮಾಡಬೇಕೆಂದು ನಾನು ಸೂಚಿಸುತ್ತೇನೆ.

Fact Finding Committee ವಿಷಯವಾಗಿ 19 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಬಹಳ ಸಂತೋಷದ ವಿಷಯ. ಅವರು ಅನೇಕ ಅಂಕಿ ಅಂಶಗಳನ್ನು ಒದಗಿಸಿದ್ದಾರೆ. ಅದರಲ್ಲಿ ನಾನು ಒಂದು ಸಲಹೆ ಕೊಡುವುದು ಏನೆಂದರೆ ಇದು ಬಹಳ ದೊಡ್ಡ ವಿಷಯ. ಇದು ಪ್ರಜೆಗಳಿಗೆಲ್ಲಾ ಅನ್ವಯಿಸತಕ್ಕಂಥ ವಿಷಯ. ಇಂತಹ ವರದಿಯನ್ನು ಒಂದು ಕೈಪಿಡಿ ರೂಪದಲ್ಲಿ ಸಂಗ್ರಹವಾಗಿ ಕನ್ನಡದಲ್ಲಿ ರಚಿಸಿದ್ದರೆ ಹೆಚ್ಚಿಗೆ ಉಪಯೋಗಕ್ಕೆ ಬರುತ್ತಿತ್ತು. ಸಾಮಾನ್ಯವಾಗಿ ಸರಕಾರದವರು ನಡೆಸತಕ್ಕಂಥ ನಡೆವಳಿಕೆಗಳಲ್ಲಿ ಅನೇಕ ವಿಷಯಗಳು ಪ್ರಜಾ ಸಾಮಾನ್ಯಕ್ಕೆ ತಿಳಿಯುವುದಿಲ್ಲ ಎಂದು ಹೇಳಬಹುದು. ಪತ್ರಿಕೆಗಳಲ್ಲಿ ಪ್ರಕಟಿಸುತ್ತೇವೆ ಎಂದು ಹೇಳಬಹುದು. ನಾವೇನೊ ಇಂತಹ ವಿಷಯಗಳನ್ನು ಪ್ರಕಟಿಸುತ್ತೇವೆ. ಆದರೆ ಬಹಳ ವಿಷಯಗಳು ಸಾಮಾನ್ಯವಾಗಿ ಕನ್ನಡ ತಿಳಿಯುವ ಪ್ರಜೆಗಳಿಗೆ ಗೊತ್ತಾಗಬೇಕು. ಸರಕಾರ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಇದೆ. ಈ ಸಭೆಯೂ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಇವೆ. ಇವುಗಳೆಲ್ಲಾ ಜನ ಸಾಮಾನ್ಯಕ್ಕೆ ತಿಳಿಯಬೇಕು. ಇಂಗ್ಲೆಂಡ್ ದೇಶದಲ್ಲಿ ಇಂಗ್ಲಿಷ್ ಭಾಷೆ ಎಲ್ಲರಿಗೂ ಗೊತ್ತಾಗುತ್ತದೆ. ರೈತರಿಗೂ ಗೊತ್ತಾಗುತ್ತದೆ. ಕೆಲಸಗಾರರಿಗೂ ಗೊತ್ತಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಎಲ್ಲರಿಗೂ ಇಂಗ್ಲಿಷ್ ಭಾಷೆ ಗೊತ್ತಾಗುವುದಿಲ್ಲ. 100ರಲ್ಲಿ 5 ಜನಕ್ಕೆ ಇಂಗ್ಲಿಷ್ ಗೊತ್ತಾಗುವುದೋ ಇಲ್ಲವೋ! ಆದಕ್ಕಾಗಿ ಅವುಗಳನ್ನು ಕನ್ನಡದಲ್ಲಿ ಪ್ರಕಟಿಸಿ ಜನಸಾಮಾನ್ಯಕ್ಕೆ ತಿಳಿಯುವ ಹಾಗೆ ಸರಕಾರದವರು ಜಾಗ್ರತೆಯಾಗಿ ಮಾಡಬೇಕು. ಸರಕಾರದವರು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುತ್ತಿದ್ದಾರೆ. ಅವುಗಳ ತಿಳಿವಳಿಕೆ ಜನಸಾಮಾನ್ಯಕ್ಕೆ ಚೆನ್ನಾಗಿ ಗೊತ್ತಾಗಬೇಕಾದರೆ ಕನ್ನಡದಲ್ಲಿಯೂ ಕೂಡ ಪ್ರಕಟಿಸಬೇಕೆಂದು ನನ್ನ ವಿನಂತಿ ಮತ್ತು ಪ್ರಾರ್ಥನೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬೇಕಾಗಿದೆ. ನಮ್ಮ ಅನೇಕ ದೊಡ್ಡ ದೊಡ್ಡ ಕೈಗಾರಿಕೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವುಗಳ ವಿಷಯವಾಗಿ ಪ್ರಕಟಣೆಗಳು ಲಕ್ಷಣವಾಗಿ ಪ್ರಿಂಟ್ ಆಗಿ ಇಂಗ್ಲಿಷ್‌ನಲ್ಲಿ ಬರುತ್ತವೆ. ಭದ್ರಾವತಿ ವಿಷಯದಲ್ಲಿ ಎಲ್ಲಾ ಇಂಗ್ಲಿಷ್‌ನಲ್ಲಿ ಬಂದಿವೆ. ಅವುಗಳೆಲ್ಲಾ ಸಾಮಾನ್ಯವಾಗಿ ಇಂಗ್ಲಿಷ್ ತಿಳಿಯದೆ ಇರತಕ್ಕಂಥ ಕನ್ನಡದವರಿಗೂ ತಿಳಿಯುವ ಹಾಗೆ ಏರ್ಪಾಡು ಮಾಡಬೇಕು. Administration reports ಇಂಗ್ಲಿಷ್‌ನಲ್ಲಿ ಬರುತ್ತವೆ. ಅದರ ಸಾರಾಂಶವನ್ನು ಕನ್ನಡದಲ್ಲಿ ಪ್ರಕಟಿಸಿ ಜನಗಳಿಗೆ ತಿಳಿಯುವ ಹಾಗೆ ಮಾಡಬೇಕು. ಪ್ರಜಾ ಪ್ರಭುತ್ವ ವಿಷಯದಲ್ಲಿ ಸಾಮಾನ್ಯ ಪ್ರಜೆಗಳು ನಮ್ಮ Masters ಎಂದು ಏನು ಹೇಳುತ್ತೇವೋ, ಅವರು ಚೆನ್ನಾಗಿ ವಿಷಯಗಳನ್ನು ತಿಳಿದುಕೊಳ್ಳಬೇಕಾದರೆ ಹೆಚ್ಚು ಹೆಚ್ಚಾಗಿ ಕನ್ನಡದಲ್ಲಿ ಸುಲಭವಾದ ಭಾಷೆಯಲ್ಲಿ ರೈತರಿಗೂ ಮತ್ತು ಕೆಲಸಗಾರರಿಗೂ ತಿಳಿಯುವ ಹಾಗೆ ಪ್ರಕಟಣೆಗಳನ್ನು ಹೊರಡಿಸಬೇಕು. ಅದರಿಂದ ಪ್ರಜೆಗಳಿಗೂ ಪ್ರಯೋಜನವಿದೆ, ಸರ್ಕಾರಕ್ಕೂ ಪ್ರಯೋಜನವಿದೆ. ಸರ್ಕಾರದವರು ಮಾಡತಕ್ಕಂಥ ಅಭಿವೃದ್ಧಿ ಕೆಲಸಗಳು ಪ್ರಜೆಗಳಿಗೆ ಗೊತ್ತಾಗಿದೆ. 'Harijan upliftment of mass' ಎಂಬ ಒಂದು ಪತ್ರಿಕೆ ಮಾಡಿದ್ದಾರೆ. ಅದೂ ಸಹ ಇಂಗ್ಲಿಷ್‌ನಲ್ಲಿಯೇ ಇದೆ. ಹರಿಜನರಿಗೆ ಗೊತ್ತಾಗುವ ಹಾಗೆ ಕನ್ನಡದಲ್ಲಿ ಮಾಡಿ ಪ್ರಕಟಿಸಬೇಕು. ಅದು ಅತ್ಯಂತ

(ಶ್ರೀ ಪಿ. ಆರ್. ರಾಮಯ್ಯ.)

ಅವಶ್ಯಕವಾದುದು. ಈ ಪ್ರಜಾ ಪ್ರಭುತ್ವ ಯುಗದಲ್ಲಿ ಇದು ಎಲ್ಲಾ ಕೆಲಸಗಳಿಗಿಂತಲೂ ಅತಿ ಮುಖ್ಯವಾದುದು, ಜನಗಳಿಗೆ ತಿಳಿವಳಿಕೆ ಕೊಡುವುದು ಎಂದು ನಾನು ಸಲಹೆ ಮಾಡುತ್ತೇನೆ.

DEMAND No. 12.

General Administration—State Legislative Assembly—ವಿಷಯವಾಗಿ ಇದಕ್ಕೋಸ್ಕರ ಸ್ವಲ್ಪ ಹಣ ಇಟ್ಟಿದ್ದಾರೆ. ಈ ಸಭೆಯಲ್ಲಿ ನಡೆಯತಕ್ಕಂಥ ಕಾರ್ಯಕಲಾಪಗಳು ಸಾಮಾನ್ಯವಾಗಿ ಸಂಗ್ರಹವಾಗಿ ಪತ್ರಿಕೆಗಳಲ್ಲಿ ಬರುತ್ತಿವೆ. ಹೊಸ ಕಾನೂನುಗಳು, ಅನೇಕ ವಿಷಯಗಳು ಎಲ್ಲವೂ ಈ ಸಭೆಯ ಮುಂದೆ ಚರ್ಚೆಯಾಗುತ್ತವೆ. ಆದರೆ ಇವುಗಳ ವಿಷಯವಾಗಿ ಸರಿಯಾದಂಥ ಒಂದು ತಿಳಿವಳಿಕೆ ನಮ್ಮ ಜನಗಳಿಗೆ ಕೊಡಬೇಕಾದರೆ ಈ Assembly proceedings ವಿಷಯವಲ್ಲಿ ಒಂದೊಂದು sessionನಲ್ಲಿ ಎಷ್ಟು ಕೆಲಸ ನಡೆಯಿತು ಎಂಬ ಸಾರಾಂಶ ಜನಸಾಮಾನ್ಯರಿಗೆ ಕೊಡುವುದು ಅವಶ್ಯಕವಾಗಿದೆ. ಇದು ಬಹಳ ನೂತನವಾಗಿ ಕಾಣಬಹುದು. ಆದರೆ ನಮ್ಮ ದೇಶಕ್ಕೆ ಇದು ಅತ್ಯಾವಶ್ಯಕ. ಸಾಮಾನ್ಯವಾಗಿ ಕೆಲವು ದೇಶಗಳಲ್ಲಿ ಈ ಪದ್ಧತಿ ಇದೆ. ಆದ್ದರಿಂದ ಇನ್ನುಮುಂದೆ ಈ ಸಭೆಯಲ್ಲಿ ನಡೆಯುತಕ್ಕಂಥ ಕೆಲಸ ಕಾರ್ಯಗಳು ಜನಸಾಮಾನ್ಯಕ್ಕೆ ಗೊತ್ತಾಗುವ ಹಾಗೆ ಕನ್ನಡದಲ್ಲಿ ಸಂಗ್ರಹವಾಗಿ ಒಂದೊಂದು sessionನಲ್ಲಿ ನಡೆಯುತಕ್ಕಂಥ ಕಾರ್ಯಕಲಾಪಗಳನ್ನು ಗೋಷ್ವಾರ ಆದರೂ ತಿಳಿಸುವುದಕ್ಕೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

DEMAND No. 17.

"To meet the expenditure on exploration work connected with the opening of Sulphur Deposits in the Ingaldhal Area in Chitaldrug District and also for the purchase of machinery spares, etc., during the year 1954-55."

ಎಂಬುದಕ್ಕೆ provision ಸದುದ್ದೇಶದಿಂದ ಮಾಡಿದ್ದಾರೆ. ಆದರೆ ಬಳ್ಳಾರಿ gold minesಗಳ ವಿಷಯದಲ್ಲಿ ಆಗಿದ್ದಹಾಗೆ ಆಗಬಾರದೆಂದು ನನ್ನ ಸಲಹೆ. ಅಷ್ಟು ರೂಪಾಯಿ ಅದಕ್ಕಾಗಿ ಖರ್ಚುಮಾಡಿ ಅದು ಯಾವ ರೀತಿ ಆಯಿತು ಎಂದು ಗೊತ್ತಿದೆ. ಆದ್ದರಿಂದ ಈ ವಿಷಯದಲ್ಲಿ expert opinion ತೆಗೆದುಕೊಂಡು ಮಾಡಬೇಕೆಂದು ಹೇಳುತ್ತೇನೆ. ಈ ವಿಷಯದಲ್ಲಿ ಏನು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ, ಯಾರ ಮುಖಾಂತರ ಕೆಲಸಗಳು ನಡೆಯುತ್ತಿವೆ ಎಂಬ ಬಗ್ಗೆ ಒಂದು ಸಣ್ಣ ನೋಟ್ ಮೂಲಕ ತಿಳಿಸಿದರೆ ನಮಗೆಲ್ಲರಿಗೂ ಸಂತೋಷವಾಗುತ್ತದೆ.

DEMAND. No. 19.

Ayurvedic and Unani Dispensary ವಿಷಯದಲ್ಲಿ subventions to District Boards ಎಂದು ಇದೆ. ಇವುಗಳಲ್ಲಿ ಔಷಧಿ ವಿಷಯ, ಚಿಕಿತ್ಸೆ ವಿಷಯ ಬಹಳ ಪ್ರಾಮುಖ್ಯವಾದುದು. ಈಗ ಜನಗಳಿಗೆ ಖಾಯಿಲೆಗಳು ಬಹಳ ಜಾಸ್ತಿಯಾಗುತ್ತಿವೆ. ಖಾಯಿಲೆಗಳನ್ನು ಚಿಕಿತ್ಸೆ ಮಾಡುವುದಕ್ಕೆ ಅನೇಕರಿಗೆ ಶಕ್ತಿ ಇಲ್ಲ. ಆದುದರಿಂದ ಈ ಡಿಸ್ಟ್ರಿಕ್ಟು ಬೋರ್ಡುಗಳಿಗೆ subvention ರೂಪವಾಗಿ ಹತ್ತು ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇರುವುದು ಬಹಳ ಸಂತೋಷದ ವಿಷಯ. Ayurvedic ಮತ್ತು Unani ಔಷಧಿಯನ್ನು ಇನ್ನೂ ಹೆಚ್ಚು ಹೆಚ್ಚಾಗಿ ಜನಗಳಲ್ಲಿ ನಂಬಿಕೆ ಹುಟ್ಟುವ ರೀತಿಯಲ್ಲಿ ಅದನ್ನು ಜಾರಿಗೆ ತರಬೇಕಾದರೆ ಸ್ವಲ್ಪ ಇನ್ನೂ ಹೆಚ್ಚಿನ ಪ್ರಯತ್ನ ಮಾಡಬೇಕು. Allopathic medicines ಬಹಳ ದುಬಾರಿ ಆಗುತ್ತಿವೆ. ನಮ್ಮ ಜನಗಳಿಗೆ ಅವರ ಶಕ್ತಿಗೆ ನಿಲುಕುವ ಹಾಗೆ ಈ ಔಷಧಿಗಳ ಚಿಕಿತ್ಸೆಯನ್ನು ನಾವು ರೂಢಿಸಬೇಕಾಗಿದೆ. ಅದಕ್ಕೆ ಏನು ಕಾರ್ಯಕ್ರಮಗಳನ್ನು ಮಾಡಬೇಕು, ಎಂದು ಸ್ವಲ್ಪ ಬಲವಾಗಿ ಆಲೋಚನೆ ಮಾಡಬೇಕು. ಈಗ ಏನೋ ಒಂದು ಕಾಲಾನುಗುಣವಾಗಿ ಕೆಲಸ ನಡೆಯುತ್ತಿದೆ. ಆದರೆ ಈ ವಿಷಯದಲ್ಲಿ ಹೆಚ್ಚಿಗೆ ಪರಿಣಾಮಕಾರಿಯಾದ ಕೆಲಸ ನಡೆಯುವ ಹಾಗೆ ಏನು ಮಾಡಬೇಕೆಂಬುದನ್ನು ಮಂತ್ರಿಗಳು ಆಲೋಚನೆ ಮಾಡಬೇಕು, ಅದಕ್ಕಾಗಿ ಏನಾದರೂ ಒಂದು ಕಮಿಟಿಯನ್ನೋ ಅಥವಾ ಸಮಾಲೋಚನೆಯನ್ನೋ ಮಾಡಲು 4-5 ಜನಗಳನ್ನು ಸೇರಿಸಿ ಒಂದು ಪರಿಣಾಮಕಾರಿಯಾದ ಯೋಜನೆಯನ್ನು ಮಾಡಬೇಕು.

DEMAND No. 25.

*Co-operative society*ಗಳಿಗೆ auditorsಗಳನ್ನು ನೇಮಿಸುವ ವಿಷಯ. ಇದು ಬಹಳ ಸಂತೋಷದ ವಿಷಯ. Societyಗಳಿಗೆ audit fees charge ಮಾಡುತ್ತಾರೆಂದು ನನ್ನ ಕಿವಿಗೆ ಬಿದ್ದಿದೆ. ಅವರು ಬಹಳ ದುಬಾರಿಯಾಗಿ charge ಮಾಡುತ್ತಾರೆ, ಕಡಮೆ ಮಾಡಬೇಕು. ಒಂದೊಂದು ಸೊಸೈಟಿಗೆ audit feesನ್ನು ಕೊಡುವುದಕ್ಕೆ ಶಕ್ತಿ ಇಲ್ಲದೆ ಹೋಗಿದೆ ಎಂದು ನಾನು ಕೇಳಿದ್ದೇನೆ. ಇದು ಸ್ವಲ್ಪ ವಿಚಾರ ಮಾಡತಕ್ಕಂಥ ವಿಷಯ.

DEMAND No. 28.

Industrial Housing Scheme ವಿಷಯದಲ್ಲಿ ಒಂದು supplementary demand ಬಂದಿದೆ. ಇದಕ್ಕೆ 3,63,000 ರೂಪಾಯಿಗಳನ್ನು provide ಮಾಡಿದ್ದೀರಿ. ಆದರೆ ಈ ಸ್ಕೀಂ ಜಾರಿಗೆ ಬಂದು ಸುಮಾರು ಎರಡು ವರ್ಷಗಳು ಆಗಿರಬಹುದು. ಎಷ್ಟೋ ಮನೆಗಳನ್ನು ಕಟ್ಟಿಸಿದ್ದೀರಿ. ಇವು ಇನ್ನೂ ಕೆಲವು ಕಡೆಗಳಲ್ಲಿ ಖಾಲಿಯಾಗಿ ಬಿದ್ದಿವೆ. ಆದುದರಿಂದ ಕಟ್ಟಿಸಿದಂಥ ಮನೆಗಳು ಬೇಗ ಬೇಗ ವಿಲೇ ಆಗುವ ಹಾಗೆ machinery ಬೇಕು. ಅದನ್ನು ಮೊದಲು ಸರ್ಕಾರದವರು ಮಾಡಬೇಕೆಂದು ಸೂಚಿಸುತ್ತೇನೆ. ಈ ವಿಷಯದಲ್ಲಿ ಈಗ industrial housing scheme, industrial workersಗೆ ಮಾತ್ರ ಇದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಸಲಹೆ ಮಾಡಿದ ಹಾಗೆ low income groupsನವರಿಗೆ ಮನೆಗಳನ್ನು ಒದಗಿಸುವ ವಿಷಯದಲ್ಲಿ ಸರ್ಕಾರದವರು ತ್ವರಿತವಾಗಿ ಏರ್ಪಾಡು ಮಾಡಬೇಕು.. ಅದಕ್ಕೆ ಜಾಗ್ರತೆಯಾಗಿ ಗಮನಕೊಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲದೆ ಆ ಹೌಸಿಂಗ್ ಸ್ಕೀಮನ್ನು ಬೇಗ ಜಾರಿಗೆ ತರಬೇಕು.

2-30 P.M.

ಇನ್ನು 37ನೆಯ ಡಿಮ್ಯಾಂಡಿನಲ್ಲಿ ತಿಪ್ಪಗೊಂಡನ ಹಳ್ಳಿಗೆ ಸಂಬಂಧಪಟ್ಟ ಖರ್ಚು ಎಂದು ಹೇಳಿ 3 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಈ ಸಂದರ್ಭ ದಲ್ಲಿ ಬೆಂಗಳೂರು ಸಿಟಿ ಕಾರ್ಪೊರೇಷನ್ ಪ್ರದೇಶದಲ್ಲಿ ಮಾಡಬೇಕಾಗಿರುವ ನೀರು ಸರಬರಾಯಿಯ ವಿಷಯ ವನ್ನೂ ಸಹ ನಾನು ಕೊಂಚ ಮಟ್ಟಿಗೆ ಪ್ರಸ್ತಾಪಿಸ ಲ್ಲಿಚ್ಛಿಸುತ್ತೇನೆ.

Mr. SPEAKER.—Not here; main Budget ಮೇಲೆ ಮಾತನಾಡುವಾಗ ಹೇಳಬಹುದು.

ಶ್ರೀ ಪಿ. ಆರ್. ರಾಮಯ್ಯ.—ಆಗಲಿ, ಸ್ವಾಮಿ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಸಮರ್ಥನೆ ಮಾಡುತ್ತಾ ಕೆಲವು ವಿಷಯಗಳನ್ನು ನಾನು ಸರ್ಕಾರದವರ ಗಮ ನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಮೊದಲನೆಯ ದಾಗಿ, ಫಾರೆಸ್ಟ್ ಡಿಮ್ಯಾಂಡಿನ ವಿಷಯದಲ್ಲಿ ಒಂದು ಮುಖ್ಯ ವಿಷಯ ಹೇಳಬೇಕಾಗಿದೆ. ಶಿವಮೊಗ್ಗ ಸರ್ಕಲಿನ ಫಾರೆಸ್ಟ್ ಡಿವಿಜನ್ನಿನಲ್ಲಿ ಈಗಿರತಕ್ಕಂಥ ಕೆಲವು ನ್ಯೂನತೆಗಳನ್ನು ಸರ್ಕಾರದವರ ಅದರಲ್ಲೂ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿರುವಾಗ ಅವರ ಗಮನಕ್ಕೆ ತರುವುದು ನನ್ನ ಕರ್ತವ್ಯವೆಂದು ತಿಳಿದು ಈ ವಿಷಯವನ್ನು ಮೊದಲು ಹೇಳುತ್ತಿದ್ದೇನೆ. ಹಾಲಿ, ಭದ್ರಾವತಿಯ fuel ಡಿಪೋವಿನಲ್ಲಿರುವ ಪ್ರತಿಯೊಬ್ಬ ಅಫೀಸರಿಗೂ ಸಹ ಈ advance ಕೊಡತಕ್ಕಂಥ ಒಂದು ಅವಕಾಶವಿದೆ. ಅಧಿಕಾರಿಗಳು ಹೀಗೆ ಅಡ್ವಾನ್ಸ್ ಕೊಡಬೇಕಾದರೆ ತಮ್ಮ ಸ್ವಂತ ಜವಾಬ್ದಾರಿಯ ಮೇಲೆಯೇ ಕೊಡಬೇಕೆಂದು ಹೇಳಿ ಕಾನೂನೇನೋ ಇದೆ. ಆದರೆ, ಪ್ರತಿಯೊಬ್ಬ ಆಫೀಸರೂ ಅಲ್ಲಿಗೆ ಹೋದ ಕೂಡಲೆ ಸಾವಿರಾರು ರೂಪಾಯಿಗಳ ಅಡ್ವಾನ್ಸ್ ಕೊಡಲು ಷುರು ಮಾಡುತ್ತಾರೆ. ಹೀಗೆ, ಒಂದೆರಡು ವರ್ಷಗಳ ಹೊತ್ತಿಗೆ 50–60 ಸಾವಿರ ರೂಪಾಯಿ ಗಳಷ್ಟು ಅಡ್ವಾನ್ಸ್ ಕೊಟ್ಟು ಬಿಟ್ಟಿರುತ್ತಾರೆ. ಈ ಅಡ್ವಾನ್ಸ್‌ಗಳು ವಸೂಲಾಗುವವರೆಗೆ ಅವರನ್ನು ಬೇರೆಕಡೆಗೆ ವರ್ಗಾಯಿಸುವ ಹಾಗೇ ಇಲ್ಲ. ಏನಾ ದರೂ ವರ್ಗಾಮಾಡಬೇಕು ಎಂದರೆ, ಅಡ್ವಾನ್ಸ್ ಗಳನ್ನು ಜಾಸ್ತಿ ಕೊಟ್ಟುಬಿಟ್ಟಿದ್ದಾರೆ, ಅದನ್ನು ವಸೂಲು ಮಾಡಬೇಕು, ಆದ್ದರಿಂದ ಟ್ರಾನ್ಸ್‌ಫರ್ ಮಾಡಬೇಡಿ ಎಂದು ಹೇಳುತ್ತಾರೆ. ಒಂದುವೇಳೆ ವರ್ಗ ಮಾಡಿದರೂ, ಅಡ್ವಾನ್ಸ್‌ಗಳನ್ನು ಅವರೇ ವಸೂಲು ಮಾಡಬೇಕೆಂದು ಹೇಳಿ ಮತ್ತೆ ಕರೆಸಿಕೊಳ್ಳುತ್ತಾರೆ. ಹೀಗಾಗಿ ಈ ಆಫೀಸರುಗಳು ಅಲ್ಲಿಗೇ ಅಂಟಿಕೊಂಡು ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಅವಕಾಶವೇ ಇಲ್ಲ ದಂಥ ಸಂದರ್ಭಗಳು ದೊಡ್ಡ ಪೆಡಂ ಭೂತವಾಗಿ ನಿಂತಿವೆ.

Mr. SPEAKER.—You may refer to it when you speak on the Budget for 1955-56.

ಶ್ರೀ ಟಿ. ಸಿ. ಬಸಪ್ಪ.—All right. ಆ ವಿಷಯ ವನ್ನು ಮಾನ್ಯ ಸಭಾಧ್ಯಕ್ಷರು ಹೇಳಿದಹಾಗೆ, ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಹೇಳುತ್ತೇನೆ.

ಸ್ವಾಮಿ, ಸಿವಿಲ್ ವರ್ಕ್ಸ್ ವಿಚಾರದಲ್ಲಿ ಒಂದು ವಿಷಯವನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿ ದ್ದೇನೆ. ಕೆರೆ ಕಾಮಗಾರಿಗಳ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ರೈತರಿಗೆ ಒಂದು ಕೆರೆ ರಿಪೇರಿ ಮಾಡಿ ಕೊಡಬೇಕಾದರೆ, ಎಸ್ಟಿ ಮೇಟಿನ ಅರ್ಥವಾ ಖರ್ಚಾದಂಥ ಹಣದಲ್ಲಿ ಅರ್ಧವನ್ನು ಕಂಟ್ರಿಬ್ಯೂಷನ್ನಾಗಿ ಕೊಡಬೇಕೆಂದೂ ಜೊತೆಗೆ ಅಧಿ ಕಾರಿಗಳು ನಿಗದಿ ಮಾಡುವುದಕ್ಕನುಸಾರವಾಗಿ ಶೇಕಡ 3 ರಂತೆಯೋ ಅಥವಾ ಅದಕ್ಕೆ ಮೇಲ್ಪಟ್ಟೋ water rate ಸಾಲೇ ಸಾಲು ಕೊಡಬೇಕೆಂದೂ ಹೇಳಿ ಒಂದು ಕಾನೂನನ್ನು ತರುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಸರ್ಕಾರದವರು ಈ ಬಗ್ಗೆ ಯಾವ ಕಾನೂನನ್ನಾಗಲಿ, ನಿಬಂಧನೆಗಳಾಗಲಿ ಮಾಡದೇ ಇದ್ದರೂ ಡಿಪಾರ್ಟ್ ಮೆಂಟ್‌ನವರೇ ಈ ರೀತಿಯ ಒಂದು ಏರ್ಪಾಡನ್ನು ಜಾರಿಗೆ ಕೊಡಬೇಕೆಂದಿದ್ದಾರೆ. ಯಾವುದಾದರೊಂದು ಕೆರೆಯನ್ನು ರಿಪೇರಿ ಮಾಡಿಸುವುದಕ್ಕೆ 50,000 ರೂಪಾಯಿಗಳಿಗೆ ಒಂದು ಎಸ್ಟಿಮೇಟ್ ಆದರೆ, ಅದರಲ್ಲಿ 25,000 ರೂಪಾಯಿಗಳ ಕಂಟ್ರಿಬ್ಯೂಷನ್ ಅಚ್ಚುಕಟ್ಟು ದಾರರು ಕಂತುಗಳ ರೂಪವಾಗಿ ಕೊಡಬೇಕಾಗಿದೆ. ಇನ್ನು ಬಾಕಿ ಮೊಬಲಗಿಗೆ ಅಧಿಕಾರಿಗಳು ನಿಗದಿ ಮಾಡುವಂತೆ ಶೇಕಡ 3 ರಂತೆಯೋ 4 ರಂತೆಯೋ ವಾಟರ್ ರೇಟನ್ನು ಬೇರೆ ಕೊಡಬೇಕಾಗಿದೆ. ಪುನಃ ಇನ್ನೊಂದು ಸಾರಿ ಆ ಕೆರೆ ರಿಪೇರಿಗೆ ಬಂದರೆ ಪುನಃ ಇದೇರೀತಿ ವಾಟರ್ ರೇಟು ಮತ್ತು ಕಂಟ್ರಿಬ್ಯೂಷನ್ ಕೊಡಬೇಕಾಗಿ ಬರುತ್ತದೆ, ಹೀಗಾಗಿ ಸರ್ಕಾರದವರು ರೈತರಿಗೆ ಸಹಾಯ ಮಾಡುವುದರ ಬದಲು ತೊಂದರೆ ಕೊಡುತ್ತಿದ್ದಾರೆಂದೇ ಹೇಳಬೇಕು. ಇದಕ್ಕೆ ಬದಲಾಗಿ ಎಲ್ಲ ಹಣವನ್ನೂ ಕಂತುಗಳ ರೂಪದಲ್ಲಿ ತೆಗೆದು ಕೊಂಡರೆ ಎಷ್ಟೋ ಕ್ಷೇಮ. ಅದನ್ನೂ ಮಾಡದೆ, ಸಾರೋದ್ಧಾರ ವಾಗಿ ವಾಟರ್ ರೇಟನ್ನು ಕೊಡುತ್ತಾ ಹೋಗುವುದು ರೈತರಿಗೆ ಒಂದು ಹೊರೆ ಮತ್ತು ಇದು ನ್ಯಾಯವಾ ದುದೂ ಅಲ್ಲ. ಪಟ್ಟಣದವರಿಗಾದರೋ ಟೌನ್ ಇಂಪ್ರೂವ್‌ಮೆಂಟ್ ಗ್ರಾಂಟುಗಳು ಮುಂತಾಗಿ ನಾನಾ ಗ್ರಾಂಟುಗಳನ್ನು ಕೊಟ್ಟು ಸಹಾಯ ಮಾಡುತ್ತಿದ್ದೀರಿ. ಹಳ್ಳಿಗಾಡಿನ ರೈತರಿಗೆ ಮುಖ್ಯವಾಗಿ ಆಗಬೇಕಾದ್ದು ಕೆರೆಯ ರಿಪೇರಿ. ಅಂಥಾದ್ದರಲ್ಲಿ ಈ ಕೆರೆಗಳ ರಿಪೇರಿ ಗಾಗಿ ಸರ್ಕಾರದವರು ಕೊಂಚವಾದರೂ ಹಣ ಕೊಡ ಬೇಡವೇ? ಅರ್ಧಭಾಗವನ್ನು ರೈತರು ಕೊಟ್ಟಮೇಲೆ ಇನ್ನರ್ಧ ಭಾಗವನ್ನು ಸರ್ಕಾರದವರೇ ಏಕೆ ಕೊಡ ಕೂಡದು? ಹಾಗೆ ಮಾಡದೆ, ಒಂದೊಂದು ಸಲದ ಕೆರೆ ರಿಪೇರಿಗೂ ವಾಟರ್ ರೇಟು, ಕಾಂಟ್ರಿಬ್ಯೂಷನ್ ಎಂದು ಹೇಳಿ ಮಾರ್ವಾಡಿಯಂತೆ ಸರ್ಕಾರದವರು ರೈತರಿಂದ ಬಡ್ಡಿಯಮೇಲೆ ಬಡ್ಡಿ ತೆಗೆದುಕೊಳ್ಳುತ್ತಿದ್ದಾರೆ. ರೈತರ ಈ ಕಷ್ಟವನ್ನು ಸರ್ಕಾರದವರು ಆದಷ್ಟು ಸಹಾನು ಭೂತಿಯಿಂದ ಪರಿಶೀಲಿಸಬೇಕೆಂದು ಹೇಳುತ್ತೇನೆ.

ಇನ್ನು ಸಹಕಾರ ಇಲಾಖೆಯ ಡಿಮ್ಯಾಂಡಿನ ವಿಚಾರ ದಲ್ಲಿ ಒಂದಂಶವನ್ನು ಸರ್ಕಾರದವರ ಗಮನಕ್ಕೆ ತರ ಬೇಕೆಂದಿದ್ದೇನೆ. ಇದರ ಬಗ್ಗೆ ಈಗಾಗಲೇ ಸರ್ಕಾರ ದವರು ಒಂದು ಪ್ರತ್ಯೇಕ ಆಡಿಟ್ ಇಲಾಖೆಯನ್ನು ನೇಮಕಮಾಡಿ ಈಗಾಗಲೇ ಆಡಿಟ್‌ಗಳು ನಡೆಯು ತ್ತಿವೆ. ಕೆಲವು ಒಳ್ಳೆಯ ಫಲಿತಾಂಶಗಳೂ ಹೊರ ಬಿದ್ದಿ ರುವುದು ಬಹಳ ಸಂತೋಷ. ಅನೇಕ ಕಡೆಗಳಲ್ಲಿ ಬಹಳ ವರ್ಷಗಳಿಂದ ಆಡಿಟ್ಟೇ ಇಲ್ಲದೆ ಇದ್ದು ಈಚೆಗೆ ಆಡಿಟ್ ಆದಮೇಲೆ ಅನೇಕ ಲೋಪದೋಷಗಳಿರು ವುದು ಬೆಳಕಿಗೆ ಬಂದಿದೆ. ಅವುಗಳ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುತಿದ್ದಾರೆಂದು ಮಂತ್ರಿಗಳು ಹೇಳಿದ್ದು ಬಹಳ ಸಂತೋಷದ ವಿಷಯ. ಆದರೆ ಒಂದು ವಿಚಾರ ಹೇಳಬೇಕಾಗಿದೆ. ಈಗ ಅಕೌಂಟೆಂಟ್ ಜನ ರಲ್‌ರೊಬ್ಬರು ನೇಮಿಸಲ್ಪಟ್ಟಮೇಲೆ ಅವರು ಕರಾರುವಾಕಾಗಿ ದಯೆದಾಕ್ಷಿಣ್ಯವಿಲ್ಲದೆ ಎಲ್ಲಾ ಇಲಾಖೆ ಗಳ ಲೆಖ್ಖಗಳ ವಿಚಾರದಲ್ಲಿ ಲೋಪದೋಷಗಳನ್ನು ಕಂಡು ಹಿಡಿಯಲು ಪ್ರಯತ್ನ ಮಾಡುತ್ತಿದ್ದಾರೆ. ಹಾಗೆಯೇ ಲೋಕಲ್ ಸೆಲ್ಫ್ ಗೌರ್ನಮೆಂಟ್ ಎಂದರೆ

(ಶ್ರೀ ಟಿ. ಸಿ. ಬಸಪ್ಪ.)

ಮುನಿಸಿಪಾಲಿಟಿ, ವಿಲೇಜ್ ಪಂಚಾಯ್ತಿ, ಡಿಸ್ಟ್ರಿಕ್ಟ್ ಬೋರ್ಡ್‌ಗಳು, ಸಹಕಾರ ಸಂಘಗಳು ಮೊದಲಾದ ಸಂಸ್ಥೆಗಳ ಲೆಕ್ಕ ಪತ್ರಗಳನ್ನು ಆಡಿಟ್ ಮಾಡುವುದನ್ನು General Office ನಂತೆ ಆಯಾ ಸಂಸ್ಥೆಗಳಿಗೇ ಬಿಡುವುದಕ್ಕಿಂತ Accountant ಆಡಿಟ್ ಮಾಡಲು ಬೇರೆ ಒಂದು independent ಇಲಾಖೆಯನ್ನು ಏರ್ಪಡಿಸಿದರೆ ನಿಜವಾಗಿಯೂ ಅತ್ಯುತ್ತಮವಾದ ರೀತಿಯಲ್ಲಿ, ಸ್ವತಂತ್ರ ಮತ್ತು ನಿಷ್ಪಕ್ಷಪಾತ ಮನೋಭಾವದಿಂದ ಆಡಿಟ್ ಕೆಲಸ ನಡೆದಂತಾಗುವುದಿಲ್ಲವೆ ? ಎಂದು ನನಗನಿಸುತ್ತದೆ. ಏಕೆಂದರೆ ನನಗೆ ತಿಳಿದು ಬಂದಿರುವ ಹಾಗೆ ಕೆಲವು ಕಡೆ ಆಡಿಟ್‌ನವರು ಬಂದರೂ ಮೇಲಿನ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟವರಾಗಿದ್ದಾರೆ, ಅಲ್ಲಿ ತಪ್ಪುಗಳಿದ್ದರೂ ಅವನ್ನು ಕಂಡುಹಿಡಿಯುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಕೋ-ಆಪರೇಷನ್ ಇಲಾಖೆಯಲ್ಲಿ, ಅಲ್ಲಿರುವ ಆಡಿಟರುಗಳು ತಾವು ಮುಂದೆ ಇನ್‌ಸ್ಪೆಕ್ಟರುಗಳು ಆಗುವ ಅವಕಾಶವಿರುವುದರಿಂದ, ತಮ್ಮ ದರ್ಜೆಯವರೇ ಆದ ಇನ್ಸ್‌ಪೆಕ್ಟರುಗಳ ಮೇಲೆ ಏನಾದರೂ ಬರೆಯಬೇಕಾಗಿದ್ದರೂ ಅಷ್ಟು ನಿಷ್ಠುರವಾಗಿ ಬರೆಯಲು ಧೈರ್ಯ ಮಾಡುವುದಿಲ್ಲ. ಆದ್ದರಿಂದ, ಕೋ-ಆಪರೇಷನ್, ಮುನಿಸಿಪಾಲಿಟಿಗಳು—ಇವುಗಳೆಲ್ಲಕ್ಕೂ ಈ ಇಲಾಖೆಗಳಿಗೆ ಸಂಬಂಧ ಪಡದೆ ಇರುವ ಒಂದು ಪ್ರತ್ಯೇಕ ಡಿಪಾರ್ಟ್‌ಮೆಂಟೇ ಇದ್ದು ಅವರು ಸೂಕ್ತ ಕಾರ್ಯಕ್ರಮ ಕೈಕೊಂಡು ನೇರವಾಗಿ ಸರ್ಕಾರಕ್ಕೆ ಬರೆಯುವಂತೆ ಮಾಡಿದರೆ ಬಹಳ ಅನುಕೂಲವೆಂದು ನಾನು ತಿಳಿಸ ಬಯಸುತ್ತೇನೆ. ಆಮೇಲೆ, ಕೋ-ಆಪರೇಟಿವ್ ಇಲಾಖೆಯ ಸಂಬಂಧದಲ್ಲಿ ಸರ್ಕಾರದವರು ಆಡಿಟ್ ಮಾಡಲು ಒಂದು ಪ್ರತ್ಯೇಕ ಇಲಾಖೆಯನ್ನು ಈಗ ಏರ್ಪಡಿಸಿರತಕ್ಕದ್ದು ಬಹಳ ನ್ಯಾಯವಾಗಿದೆ. ಆದರೆ, ನೀವೀಗ ವಿಧಿಸಿರತಕ್ಕ ಫೀಜಿನ ದರಗಳು ಸೊಸೈಟಿಗಳ ಬೆಳವಣಿಗೆಗೆ ಅನುಗುಣವಾಗಿದೆಯೇ ಎಂಬುದನ್ನು ತಾವು ಸ್ವಲ್ಪ ವಿಮರ್ಶಿಸಬೇಕು. ದೇಶದಲ್ಲಿ ಕಂಟ್ರೋಲ್ ತಪ್ಪಿ ಹೋದಮೇಲೆ ಸೊಸೈಟಿಗಳು ಎಷ್ಟು ಕಷ್ಟಪಡುತ್ತಿವೆ, ಅವು ತಮ್ಮ ಇರುವಿಕೆಯನ್ನು ಉಳಿಸಿಕೊಳ್ಳುವುದಕ್ಕೇ ಎಷ್ಟು ಪ್ರಯತ್ನ ಪಡಬೇಕಾಗಿದೆ ಎಂಬುದು ತಮಗೆ ಗೊತ್ತಿರಬಹುದು. ಹೀಗಿರುವಲ್ಲಿ ಒಂದಕ್ಕೆ ನಾಲ್ಕರಷ್ಟು ಆಡಿಟ್ ಫೀಜನ್ನು ಜಾಸ್ತಿ ಮಾಡಿರುವುದು ಅವುಗಳಿಗೆ ತೊಂದರೆಯಾಗಿದೆ. 75 ರೂಪಾಯಿಗಳ ಫೀಜನ್ನು ಕೊಡುತ್ತಿದ್ದ ಕಡೆ, ಈಗ 300-400 ರೂಪಾಯಿಗಳ ಫೀಜನ್ನು ವಸೂಲು ಮಾಡುತ್ತಿದ್ದಾರೆ! ಈ ಇಲಾಖಾ ಮಂತ್ರಿಗಳು ಪ್ರತಿ ಸೊಸೈಟಿಯ ಲೆಖ್ಖಗಳನ್ನು ಆಡಿಟರುಗಳು ಆಗಾಗ್ಗೆ ಬಂದು ತನಿಖೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ ಎಂದು ಹೇಳಿದರು. ನಾನು ನೋಡಿದ ಹಾಗೆ ಈ ಆಡಿಟರುಗಳು ಬರುವುದು ವರ್ಷಕ್ಕೆ ಒಂದುಸಾರಿ. ಮೂರು-ನಾಲ್ಕು ದಿವಸಗಳಲ್ಲಿ ಆಡಿಟ್ ಮಾಡಿ ಮುಗಿಸುತ್ತಾರೆ. ಇಷ್ಟಕ್ಕೆ 300-400 ರೂಪಾಯಿಗಳನ್ನು ಕೊಡುವುದೆಂದರೆ ಬಹಳ ಕಷ್ಟ ಇದರಿಂದ ಸೊಸೈಟಿಗಳ ಅಭಿವೃದ್ಧಿಗೆ ಧಕ್ಕೆಯುಂಟಾಗುತ್ತದೆ. ನಿಧಾನವಾಗಿ ಕಾಲಕ್ರಮದಲ್ಲಿ ಜಾಸ್ತಿ ಮಾಡುವ ಯೋಚನೆಮಾಡಿ, ಆಡಿಟ್ ಫೀಜನ್ನು ಪುನರ್ವಿಮರ್ಶೆ ಮಾಡುತ್ತಾರೆಂದು ನಂಬಿದ್ದೇನೆ.

ಮೆಡಿಕಲ್ ಇಲಾಖೆಯ ವಿಚಾರದಲ್ಲಿ ಈಗಾಗಲೇ ಮಾನ್ಯ ಮಿತ್ರರನೇಕರು ಹೇಳಿದ್ದಾರೆ. ಆಯುರ್ವೇದ ಆಸ್ಪತ್ರೆಗಳ ವಿಚಾರದಲ್ಲಿ ಈಚೀಚೆಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹ ಕೊಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದಗೂ, ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅತ್ಯಗತ್ಯವೆಂದು ನಾನು ಅವರ ಗಮನಕ್ಕೆ ತರುತ್ತೇನೆ. ಈಗ ಬೆಂಗಳೂರಿನಲ್ಲಿರತಕ್ಕ ಆಸ್ಪತ್ರೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆಯೆಂದು ಅನೇಕ ಜನಗಳ ಮತ್ತು ಈ ಸಭಾಸದಸ್ಯರ ಅಭಿಪ್ರಾಯವಾಗಿದೆ. In-patient ರೋಗಿಗಳ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಈಚೆಗೆ ಒಂದು Buildingನ್ನು ಜಾಸ್ತಿ ಮಾಡುವವರಾಗಿದ್ದಾರೆಂದು ಕೇಳಿ ಬಂತು. ಇದೇರೀತಿ, ಎಲ್ಲಾ ಕಡೆಯಲ್ಲಲ್ಲದಿದ್ದರೂ ಕೆಲವು ಡಿಸ್ಟ್ರಿಕ್ಟ್‌ಗಳ ಹೆಡ್ ಕ್ವಾರ್ಟರ್‌ಸ್‌ನಲ್ಲಾದರೂ ಈ ಆಯುರ್ವೇದ ಆಸ್ಪತ್ರೆಗಳ ಸೌಲಭ್ಯವನ್ನು ಜಾಸ್ತಿ ಮಾಡಿದರೆ ಅನೇಕ ಜನರಿಗೆ ಅನುಕೂಲ ಪಡಿಸಿದಂತಾಗುತ್ತದೆಂದು ನಂಬಿದ್ದೇನೆ.

ಇಷ್ಟು ಹೇಳಿ ನಾನು ಈ ಅಪ್ರೋಪ್ರಿಯೇಷನ್ ಬಿಲ್ಲನ್ನು ಸಮರ್ಥಿಸುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, 1954-55ನೆಯ ಸಾಲಿಗೆ ಸಂಬಂಧಪಟ್ಟ ಈ ಅಪ್ರೋಪ್ರಿಯೇಷನ್ ಬಿಲ್ಲಿನಮೇಲೆ ಇಲ್ಲಿಗೆ ಸಂಬಂಧಪಟ್ಟಿರುವ ಹಾಗೆ ನಾನು ಕೇವಲ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಇಷ್ಟಪಟ್ಟಿದ್ದೇನೆ.

ಮೊಟ್ಟಮೊದಲನೆಯದಾಗಿ ಡಿಮ್ಯಾಂಡ್ ನಂಬರ್ 16. ಇದರಲ್ಲಿ ಒಂದು ಲಕ್ಷ 36 ಸಾವಿರದ 600 ರೂಪಾಯಿಗಳನ್ನ ಕೇಳಿದ್ದಾರೆ. ಏತಕ್ಕೆಂದರೆ:—

"To meet the cost of fifty wireless sets purchased for security purposes. In view of urgency, a sum of Rs. 1,76,200 was advanced from the Contingency Fund for making the purchase. The original indent was revised to Rs. 1,36,600 and additional grant for this sum is required."

ಸ್ವಾಮಿ, 1954ನೆಯ ಸಾಲಿನಲ್ಲಿ ದೇಶದ ಜನತೆಯ ಹಿತಕ್ಕೆ ಧಕ್ಕೆ ಬರತಕ್ಕಂಥ ಕಾರ್ಯಕ್ರಮಗಳು ಯಾವುದಾದರೂ ನಡೆದಿದ್ದರೆ ಮೈಸೂರಿನ ರಾಜಪ್ರಮುಖರವರು ಮೊನ್ನೆತಾನೆ ಜರುಗಿದ ಸಂಸ್ಥಾನದ ಜಂಟಿ ವಿಧಾನ ಮಂಡಲದ ಅಧಿವೇಶನದ ಆರಂಭೋತ್ಸವಕಾಲದಲ್ಲಿ ಅಪ್ಪಣೆ ಕೊಡಿಸಿದಂಥ ಭಾಷಣದಲ್ಲಿ ಅವರು ತಿಳಿಸಿಯೇ ತಿಳಿಸುತ್ತಿದ್ದರು. ಹಾಗೆ ದೇಶದಲ್ಲಿ ಏನಾದರೂ ಅಂಥಾ ಒಂದು ಗಂಡಾಂತರ ನಡೆದಿದ್ದರೆ, ಶ್ರೀ ಕೆ. ಹನುಮಂತಯ್ಯನವರ ಮುಖ್ಯ ಮಂತ್ರಿತ್ವ ಉರುಳಿಹೋಗುವಂಥ ಕೆಲಸಗಳೇನಾದರೂ ನಡೆದಿದ್ದರೆ, ಅಂಥ ಮಹತ್ವದ ಘಟನೆಗಳನ್ನು ಪೂರ್ತಿಯಾಗಿ ರಾಜಪ್ರಮುಖರು ಕೈಬಿಡುತ್ತಿರಲಿಲ್ಲ ಎಂದು ನನಗೆ ಅನಿಸುತ್ತಿದೆ. ಮುಖ್ಯವಾಗಿ ಈ ಡಿಮ್ಯಾಂಡಿನಲ್ಲಿ ಇವರು 50 ಸೆಟ್ ವೈರ್‌ಲೆಸ್ ಮಿಷನ್‌ಗಳನ್ನು ಒಮ್ಮೆಗೇ ಕೊಂಡುಕೊಳ್ಳುವಂಥ ಆವಶ್ಯಕತೆ ಬಂದಿತ್ತು ಎಂದು ಹೇಳಿದ್ದಾರೆ. ಬಹುಶಃ ಅಂಥ ಒಂದು ಗಂಡಾಂತರ ಅಥವಾ ಘಟನೆ ಯಾವುದು ನಡೆದಿತ್ತು ಎಂಬುದರ ಬಗ್ಗೆ ನನಗೆ ಒಂದು ವಿಚಾರ ಗೊತ್ತಿದೆ. ಈ ಸಂದರ್ಭದಲ್ಲಿ ಸರ್ಕಾರದವರು ಈ ವೈರ್‌ಲೆಸ್ ಸೆಟ್ಟುಗಳನ್ನು ಕೊಂಡುಕೊಳ್ಳತಕ್ಕಂಥ ಸನ್ನಿವೇಶವೇನಿತ್ತು ಎಂಬುದರ ಬಗ್ಗೆ ಮೊನ್ನೆ ಡಿಮ್ಯಾಂಡ್ ಮನವಿಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಅದಕ್ಕೆ ಕಾರಣವನ್ನು ತಿಳಿಸುತ್ತ ಹಣ ಕಾಸಿನ ಮಂತ್ರಿಗಳು ಆಗ ಸಭೆಯಲ್ಲಿ ಇಲ್ಲದಿದ್ದು

ದರ ಪ್ರಯುಕ್ತ ಮಾನ್ಯ ರೆವಿನ್ಯೂ ಸಚಿವರು—'ವಿದ್ಯುತ್ ಇಲಾಖೆ ನೌಕರರ ಮುಷ್ಕರ ನಡೆದಿತ್ತು; ಹೊರಗಡೆಯಿಂದ ಅಪಾಯಕಾರಿಗಳಾದಂಥ ಜನರು ಬಂದಿದ್ದರು; ಆಗ ಈ 50 ಸೆಟ್ಟುಗಳನ್ನು ಕೊಂಡು ಕೊಳ್ಳಬೇಕಾದಂಥ ಕಾರಣ ಬಂತು' ಎಂದು ಹೇಳಿರುತ್ತಾರೆ. ಆದರೆ ಈ ಸಂಬಂಧವಾಗಿ ನಾನು ಸರ್ಕಾರಕ್ಕೆ ಒಂದು ಪ್ರಶ್ನೆ ಹಾಕುತ್ತೇನೆ—ಅದೇನೆಂದರೆ ಸಂಸ್ಥಾನದಲ್ಲಿ ನಡೆದ ವಿದ್ಯುತ್ ಇಲಾಖಾ ನೌಕರರ ಮುಷ್ಕರ ಸಾರ್ವಜನಿಕರ ಕ್ಷೇಮಕ್ಕೆ ಅಥವಾ ಸರ್ಕಾರದ ಅಸ್ತಿತ್ವಕ್ಕೆ ಧಕ್ಕೆ ತರುವ ಯಾವುದಾದರೂ ಉದ್ದೇಶ ನಡೆದಿದ್ದು ಅಂಥಾ ಚಟುವಟಿಕೆಯಲ್ಲಿ ಆ ಇಲಾಖೆಯ ನೌಕರರು ಅಥವಾ ಆ ಮುಷ್ಕರದ ಮುಖಂಡರುಗಳು ಯಾರಾದರೂ ನಿರತರಾಗಿದ್ದರೇ ಅನ್ನುವುದು ಒಂದು ಮುಖ್ಯವಾದ ಪ್ರಶ್ನೆ. ಅದನ್ನು ಸರ್ಕಾರದವರು ಹೇಳಬೇಕು. ಮತ್ತು ಇದೇ ಸಂದರ್ಭದಲ್ಲಿ ಹಾಗೆ ಪರದೇಶದಿಂದ ಅಥವಾ ದೇಶದ ಹೊರಗಡೆಯಿಂದ ಅಪಾಯಕಾರಿಯಾದಂಥ ಜನರು ಯಾರಾದರೂ ನಮ್ಮ ಸಂಸ್ಥಾನಕ್ಕೆ ಬಂದಿದ್ದರೇ ? ಹಾಗೆ ಬಂದಿದ್ದಲ್ಲಿ ಅವರೇನಾದರೂ ಸಾರ್ವಜನಿಕರ ಪ್ರಾಣ, ಮಾನ, ಆಸ್ತಿಗಳಿಗೇನಾದರೂ ಧಕ್ಕೆ ತರತಕ್ಕಂಥ ಪ್ರಯತ್ನಗಳನ್ನೇನಾದರೂ ಮಾಡಿದ್ದಾರೆಯೇ ? ಅಥವಾ ಸರ್ಕಾರಕ್ಕೆ ಹಿಂಸಾತ್ಮಕವಾದ ರೀತಿಯಲ್ಲಿ ಅಥವಾ ಇನ್ನಾವುದಾದರೂ ರೀತಿಯಲ್ಲಿ ಅದನ್ನು ಉರುಳಿಸಲು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೇ ? ಈ ಅಂಶಗಳೆಲ್ಲಾ ಸರ್ಕಾರಕ್ಕೆ ಯಾವ ರೀತಿ ತಿಳಿಯಿತು ? ಈ ಎಲ್ಲಾ ಅಂಶಗಳ ಬಗ್ಗೆಯೂ ಸರ್ಕಾರದವರು ಈ ಮಾನ್ಯ ಸಭೆಗೂ ಮತ್ತು ಸಂಸ್ಥಾನದಲ್ಲಿರತಕ್ಕಂಥ ಸಾರ್ವಜನಿಕರ ತಿಳಿವಳಿಕೆಗೂ ಉತ್ತರವನ್ನು ಒದಗಿಸಬೇಕಾಗಿದೆಯೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಇದೇ ಸಂದರ್ಭದಲ್ಲಿ ಈ ಬರಿ ವೈರ್‌ಲೆಸ್ ಎಕ್ವಿಪ್‌ಮೆಂಟುಗಳಿಗೋಸ್ಕರವಾಗಿ ಒಂದು ಲಕ್ಷ 36 ಸಾವಿರದ 600 ರೂಪಾಯಿಗಳನ್ನು ಕೇಳಿದ್ದಾರೆ. ಆದರೆ ಇದೇ ಸಂಬಂಧವಾಗಿ ಸರ್ಕಾರದವರು ಇನ್ನೂ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಅನ್ನತಕ್ಕಂಥಾದ್ದು ನಮಗೆ ಗೊತ್ತಾಗಲು ನಮಗಿನ್ನೂ ಆ ಲೆಕ್ಕಗಳು ಸಿಕ್ಕಿಲ್ಲ ; ನಮ್ಮ ಮುಂದೆ ಇನ್ನೂ ಆ ಲೆಕ್ಕಗಳ ವಿವರಗಳು ಬರಬೇಕಾಗಿದೆ. ಆ ಬಾಬಿನಲ್ಲಿ ಅಥವಾ ಇನ್ನೂ ಯಾವ ಯಾವ ಬಾಬಿನಲ್ಲಿ ಎಷ್ಟು ಖರ್ಚುಮಾಡಿದ್ದಾರೆ ಅನ್ನುವುದನ್ನು ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವುದಾದರೆ ಅದನ್ನೂ ಕೂಡ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆದರೆ ಈ ಖರ್ಚುಗಳಿಗೆಲ್ಲಾ ಹಣ ಎಲ್ಲಿಂದ ಬಂತು ? ಆ ವಿದ್ಯುತ್ ನೌಕರರ ಮುಷ್ಕರದ ಬಗ್ಗೆ ಸರ್ಕಾರ ಬೇಕಾದಷ್ಟು ಹಣವನ್ನು ಖರ್ಚುಮಾಡಿದೆ. ಕಂಬಕಾಯತಕ್ಕವರಿಗೆ ಲಾಟೀನುಗಳು, ದೊಣ್ಣೆಗಳು, ಕಂಬಳಿಗಳು, ಮತ್ತು ಟಾರ್ಚ್‌ಲೈಟುಗಳು ಇತ್ಯಾದಿಗಳನ್ನೆಲ್ಲಾ ಒದಗಿಸಿರುವುದಲ್ಲದೆ—

ಒಬ್ಬ ಸದಸ್ಯರು.—ಎಲ್ಲವೂ ದೇಶದ ಹಿತದೃಷ್ಟಿಯಿಂದ !

ಶ್ರೀ ಎಸ್. ಗೋಪಾಲಗೌಡ.—ಹೌದು. ಆ ದೇಶದ ಹಿತದೃಷ್ಟಿಯನ್ನು ಕಾಯುವುದರಲ್ಲಿ ನಾವೂ ಸಹ ಯಾರಿಗೂ ಕಡಮೆಯಾಗಿಲ್ಲ. ಆದರೆ ಈ ಸಂದರ್ಭದಲ್ಲಿ ಪ್ರತಿಯೊಬ್ಬ ಸೆರ್ಕಲ್ ಆಫೀಸರಿಗೂ ಖರ್ಚಿಗಾಗಿ ಹಣವನ್ನು ಒದಗಿಸಲಾಗಿತ್ತು. ಆಗ ಹೊರಗಡೆಯಿಂದ ಕೆಲಸಕ್ಕಾಗಿ ನೇಮಿಸಿಕೊಂಡಿದ್ದವರಿಗೆ ಊಟ, ತಿಂಡಿಗಳೆಲ್ಲವನ್ನೂ ಕೊಟ್ಟು, ಅವರಿಗೆ ಸಂಬಳವನ್ನೂ ಕೂಡ ಕೊಡಲಾಗಿದೆ. ಆದರೆ ಇಷ್ಟೆಲ್ಲವನ್ನೂ ಎಮರ್ಜೆನ್ಸಿ ಖರ್ಚು ಎಂದು ತೋರಿಸಿದ್ದಾರೆ. ಆದರೆ ಈ ಖರ್ಚೆಲ್ಲವನ್ನೂ ಆ ವಿದ್ಯುಚ್ಛಕ್ತಿ ಬಾಬಿನಲ್ಲೇ ತೋರಿಸಿದ್ದಾರೆಯೇ ಅಥವಾ ಸಾರ್ವಜನಿಕರ ಬಾಬಿನ ಹಣದಲ್ಲಿ ಖರ್ಚುಮಾಡಿದ್ದಾರೆಯೇ ಅನ್ನತಕ್ಕ ಬಗ್ಗೆ ಸರ್ಕಾರದವರು ಈ ಎಲ್ಲಾ ಅಂಶಗಳ ಬಗ್ಗೆ ಕೂಲಂಕಷವಾಗಿ ವಿವರಿಸಿ ಒಂದು ಹೇಳಿಕೆ ಕೊಡುವುದರಿಂದ ಸಾರ್ವಜನಿಕರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

Mr. SPEAKER.—This item does not come under the items of expenditure in connection with the strike. You may speak about it at another time.

ಶ್ರೀ ಎಸ್. ಗೋಪಾಲಗೌಡ.—ನಮಗೇನು ಬೇಕಾಗಿತ್ತು ಎಂದರೆ, ನಮಗೆ ಗೊತ್ತಾದಹಾಗೆ ಈ ವರ್ಷ ಬಹಳ ಹಣ ಖರ್ಚಾಗಿದೆ. ಇದನ್ನು ಯಾವ ಯಾವ ಬಾಬಿನಲ್ಲಿ ನಿರ್ವಹಿಸಲಾಯಿತು, ಎಷ್ಟೆಷ್ಟು ಖರ್ಚಾಗಿದೆಯೆಂಬುದನ್ನು ನಾನೀಗ ಪ್ರಸ್ತಾಪ ಮಾಡುತ್ತಿದ್ದೇನೆ. ಈ 50 ವಿದ್ಯುಚ್ಛಕ್ತಿ ವೈರ್‌ಲೆಸ್ ಸೆಟ್ಟುಗಳನ್ನು ವಿದ್ಯುತ್ ಇಲಾಖಾ ನೌಕರರ ಮುಷ್ಕರಕ್ಕಾಗಿ ಕೊಂಡುಕೊಳ್ಳಲಾಯಿತೆಂದು ಕಂದಾಯದ ಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಎರಡು ಮಾತುಗಳಿಲ್ಲ. ಇದನ್ನು ತುರ್ತಾಗಿ ಕೊಂಡುಕೊಂಡಿದ್ದಾರೆ.

"The original indent was revised to Rs. 1,36,600 and additional grant for this sum is required."

ಎಂದು ಕೇಳಿದ್ದಾರೆ. ಆ ಒರಿಜಿನಲ್ ಇಂಡೆಂಟಿನಲ್ಲಿ ಎಷ್ಟು ಮೊಬಲಗನ್ನು ಕಾಣಿಸಿತ್ತು ? ಅವುಗಳಿಗೆ ಯಾವಾಗ ಆರ್ಡರ್ ಕೊಟ್ಟಿದ್ದರು ? ಇಷ್ಟೊಂದು ಸಾಮಾನುಗಳನ್ನು ಅವರು ಯಾರಿಂದ ಕೊಂಡುಕೊಂಡರು ? ಯಾವಾಗ ಎಲ್ಲೆಲ್ಲಿ ಎಷ್ಟೆಷ್ಟನ್ನು ಕೊಂಡುಕೊಂಡರು ? ಹಾಗೆ ಕೊಂಡದ್ದನ್ನು ಎಲ್ಲೆಲ್ಲಿಗೆ ಉಪಯೋಗಿಸಲಾಯಿತು ? ಈಗ ಆ ಸಾಮಾನುಗಳೆಲ್ಲಾ ಯಾರ ವಶದಲ್ಲಿವೆ ? ನಮ್ಮ ಪೋಲೀಸ್ ಅಧಿಕಾರಿಗಳಿಗೆ ಇವುಗಳನ್ನು ಬೇಕೆಂಬುದಾಗಿ ಅವರು ತಿಳಿಸಿದ್ದರೇ ?

Sri A. BHEEMAPPA NAIK (Molakalmuru).—On a point of order. In a discussion on the motion for consideration of the Appropriation Bill, is it necessary to give the cost, why, when and whether how many are broken. Is it necessary to give such information ?

Mr. SPEAKER.—So far as the items of expenditure are concerned, how the amount is spent, whether it has been usefully spent—these are things which Hon'ble Members may ask for and the Government will furnish the same. The Hon'ble Member may go on.

ಶ್ರೀ ಎಸ್. ಗೋಪಾಲಗೌಡ.—ನಾವು ದೇಶದ ಹಣವನ್ನು, ಸಾರ್ವಜನಿಕರ ಹಣವನ್ನು ಖರ್ಚುಮಾಡುವಾಗ ಅದನ್ನು ಬಡ್ಜೆಟ್ಟಿನಿಂದಲೇ ಕೊಡಲಿ ಅಥವಾ ಮಿನಿಷ್ಟರೇ ಕೊಟ್ಟಿರಲಿ—ಹೀಗೆ ದೇಶದ ಜನರು ಕೊಟ್ಟಿರತಕ್ಕ ಹಣವನ್ನು ಖರ್ಚುಮಾಡುತ್ತಿರುವಾಗ ನಾವಿಲ್ಲಿಗೆ ಅಂಥ ದೇಶದ ಜನರ ಪ್ರತಿನಿಧಿಗಳಾಗಿ ಬಂದಿರುವಾಗ "ನೀವು ಇಷ್ಟೊಂದು ಹಣವನ್ನು ಏತಕ್ಕಾಗಿ ಖರ್ಚುಮಾಡಿದ್ದೀರಿ" ಎಂದು ಕೇಳುವುದು

(ಶ್ರೀ ಎಸ್. ಗೋಪಾಲಗೌಡ)

ನಮ್ಮ ಪ್ರಥಮ ಕರ್ತವ್ಯಗಳಲ್ಲೊಂದಾಗಿರುತ್ತದೆ. ಈ 50 ವೈರ್‌ಲೆಸ್ ಸೆಟ್ಟುಗಳೂ ನಮ್ಮ ದೇಶಕ್ಕೆ ಸದಾ ಕಾಲದಲ್ಲಿಯೂ ಬೇಕಾಗಿರುತ್ತವೆಯೇ ? ಈಗ ಇವುಗಳೆಲ್ಲವನ್ನೂ ಯಾವ ರೀತಿ ಉಪಯೋಗಿಸಲಾಗುತ್ತಿದೆ ? ಇವುಗಳೆಲ್ಲಾ ಈಗ ಎಲ್ಲಿವೆ ? ಒರಿಜಿನಲ್ ಇಂಡೆಂಟ್ ಎಷ್ಟಕ್ಕಿತ್ತು ? ಇದನ್ನು ಯಾವಾಗ ರಿವೈಜ್ ಮಾಡಲಾಯಿತು ? ಎಷ್ಟಕ್ಕೆ ರಿವೈಜ್ ಮಾಡಲಾಯಿತು ? ಮೊದಲು 1 ಲಕ್ಷ 75 ಸಾವಿರ ಚಿಲ್ಲರೆ ಬೇಕೆಂದು ಹೇಳಿ ಲೆಕ್ಕದಲ್ಲಿ ಕಂಟಿನ್‌ಜೆನ್ಸಿ ಫಂಡಿನಿಂದ ಅದನ್ನು ಕೊಟ್ಟಿದ್ದೀರಿ.

ಶ್ರೀ ಕೆ. ಹನುಮಂತಯ್ಯ (ಮುಖ್ಯಮಂತ್ರಿಗಳು).—ಎಲ್ಲವನ್ನೂ ಆದರಿಂದಲೇ ಮೊದಲು ಕೊಡುವುದು.

ಶ್ರೀ ಎಸ್. ಗೋಪಾಲಗೌಡ.—ಈ ಒಂದು ಲಕ್ಷ 75 ಸಾವಿರದ 200 ರೂಪಾಯಿಗಳೆಲ್ಲವನ್ನೂ ಪೋಲೀಸ್ ಅಧಿಕಾರಿಗಳ ವಶಕ್ಕೆ ಕೊಡಲಾಗಿತ್ತೆ ? ಇದನ್ನು ತಾವು ಯಾವಾಗ 1 ಲಕ್ಷ 36 ಸಾವಿರದ 600 ರೂಪಾಯಿಗಳಿಗೆ ರಿವೈಜ್‌ಮಾಡಿದಿರಿ ?

Mr. SPEAKER.—It is not said that the amount is given to the Police Department as such.

Sri GOPALA GOWDA.—"In view of urgency, a sum of Rs. 1,76,200 was advanced from the Contingency Fund for making the purchase. . . ."

Mr. SPEAKER.—Yes, for making the purchase.

ಶ್ರೀ ಎಸ್. ಗೋಪಾಲಗೌಡ.—ಆಮೇಲೆ ಖರ್ಚಾಗಿರುವುದು ಒಂದು ಲಕ್ಷದ 76 ಸಾವಿರದ 200 ರೂಪಾಯಿಗಳು. ಇದಲ್ಲದೆ ಬೇರೆ ಹಣವನ್ನು ಖರ್ಚು ಮಾಡಿರತಕ್ಕ ಬಗ್ಗೆ ಯಾವರೀತಿ ಲೆಕ್ಕಕೊಡಬೇಕು, ಇದರಲ್ಲಿ ಎಷ್ಟು ಖರ್ಚಾಯಿತು ಎಂಬುದನ್ನೆಲ್ಲಾ ನಾನು ತಿಳಿದುಕೊಳ್ಳಲು ಅಪೇಕ್ಷೆ ಪಡುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಇದೆಲ್ಲಾ ಯಾವ ಸಂಬಂಧದಲ್ಲಿ ?

ಶ್ರೀ ಎಸ್. ಗೋಪಾಲಗೌಡ.—ತಾವು ಇಷ್ಟು ಹೊತ್ತು ಇರಲಿಲ್ಲ. ನಾನಿನ್ನೂ ಈಗತಾನೆ ಪ್ರಾರಂಭ ಮಾಡುತ್ತಿದ್ದೇನೆ . . . .

Mr. SPEAKER.—We will now rise for lunch and meet at 3-30.

The House adjourned for Lunch at Thirty Minutes past Three of the Clock and reassembled at Thirty-seven minutes past Three of the Clock.

(MR DEPUTY SPEAKER in the chair.)

ಶ್ರೀ ಎಸ್. ಗೋಪಾಲಗೌಡ.—ಎರಡನೆಯದಾಗಿ 29 ನೆಯ ಡಿಮ್ಯಾಂಡಿನ ಬಗ್ಗೆ explanatory note item No. 2 ನಲ್ಲಿ Village Road Development Co-operative Scheme ಎಂದು ಹೇಳಿ, ಇದರ ಬಗ್ಗೆ 60,000 ರೂಪಾಯಿ ಕೇಳಿದ್ದಾರೆ. ಈ ವಿಚಾರದಲ್ಲಿ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಈಗಾಗಲೇ ಪ್ರಸ್ತಾಪಮಾಡಿ, ಈ ಯೋಜನೆ ಯಾವಾಗ ಜಾರಿಗೆ ಬಂತು, ಇದು ಕೆಲಸ ಮಾಡತಕ್ಕ ರೀತಿಯೇನು, ಇದು ಅಂಥಾ ಒಳ್ಳೆಯ ಯೋಜನೆಯಾಗಿದ್ದರೆ ಸಂಸ್ಥಾನಾದ್ಯಂತ ಜಾರಿಗೆ ತರುವುದಕ್ಕೆ ಮತ್ತು ವರ್ಷದ ಆಯವ್ಯಯದ ಅಂದಾಜಿನಲ್ಲಿ ತೋರಿಸುವುದಕ್ಕೆ ಏನು ತೊಂದರೆ ಇತ್ತು ಎಂದು ಪ್ರಶ್ನೆಮಾಡಿದ್ದಾರೆ. ಅದನ್ನೇ ನಾನೂ ಕೂಡ ಇಲ್ಲಿ ಕೇಳಬೇಕೆಂದಿದ್ದೇನೆ.

ಇನ್ನು ಇದೇ ಡಿಮ್ಯಾಂಡಿನ ವಿವರಣೆಯ 4 ನೆಯ ಪ್ಯಾರಾದಲ್ಲಿ "Owing to present day heavy traffic conditions, the roads get deteriorated very fast and consequently it has become necessary to order special recoats" ಎಂದು ಹೇಳಿದೆ. ರಸ್ತೆಗಳನ್ನು ಚೆನ್ನಾಗಿಟ್ಟುಕೊಳ್ಳಬೇಕು, ಸರಿಯಾದ ರೀತಿಯಲ್ಲಿ maintain ಮಾಡಬೇಕು ಎನ್ನುವ ವಿಷಯದಲ್ಲಿ ನನ್ನ ಅಭ್ಯಂತರ ಅಥವಾ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ದಿನ ನಾವು ಇಷ್ಟೊಂದು ಹಣವನ್ನು ಈ ರಸ್ತೆಗಳಿಗೆ ಖರ್ಚು ಮಾಡುತ್ತಿದ್ದರೂ ಕೂಡ ನಮ್ಮ ರಸ್ತೆಗಳನ್ನು ಪಕ್ಕದ ಮದರಾಸು ಪ್ರಾಂತ್ಯದ ರಸ್ತೆಗಳಿಗೆ ಹೋಲಿಸಿ ನೋಡಿದರೆ ಅಥವಾ ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳಿಗೆ ಹೋಲಿಸಿ ನೋಡಿದರೆ, ಬಹಳ ಹಿಂದುಳಿದಿವೆಯೆಂದು ಹೇಳಬಹುದು. ಇಲ್ಲಿ ರಸ್ತೆಗಳಿಗೆ ಕೊಡತಕ್ಕ maintenance charge ನಲ್ಲಿ ಬಹುಭಾಗ ದುರುಪಯೋಗವಾಗಿರುವುದು ಕೂಡ ಕಂಡು ಬರುತ್ತದೆ.

Sri K. PUTTASWAMY (Srirangapatna).—It goes towards the maintenance of the staff.

ಶ್ರೀ ಎಸ್. ಗೋಪಾಲ ಗೌಡ.—ಸಿಬ್ಬಂದಿ maintenance ಗೆ ಖರ್ಚಾಗುತ್ತದೆಯೇ ಹೊರತು ರಸ್ತೆಗಳ maintenance ಗೆ ಹೋಗುವುದಿಲ್ಲ. ಈ ಮಾನ್ಯ ಸಭೆಯಲ್ಲಿ ಪ್ರತಿ ಸಾಲಿನ ಆಯವ್ಯಯವನ್ನು ಚರ್ಚೆ ಮಾಡುವಾಗಲೂ, ರಸ್ತೆಗಳ ಬಗ್ಗೆ ಕೊಟ್ಟಿರತಕ್ಕ ಹಣ ಸರಿಯಾದ ರೀತಿ ಖರ್ಚು ಆಗುವ ಹಾಗೆ ಇಲಾಖೆಯವರು ವ್ಯವಸ್ಥೆಮಾಡಬೇಕು, ಶ್ರಮವಹಿಸಬೇಕು ಎಂದು ಹೇಳುತ್ತಿದ್ದರೂ ಕೂಡ ಇದರಲ್ಲಿ ಯಾವ ಪರಿಣಾಮಕಾರಿಯಾದ ಬದಲಾವಣೆಯೂ ಆಗಿಲ್ಲ. ಇದಕ್ಕೆ ಬದಲಾಗಿ ದಿನೇ ದಿನೇ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಹೆಚ್ಚು ಹೆಚ್ಚು ಹಣ ಖರ್ಚಾಗುತ್ತಿದೆ. ಇದು ಹೆಚ್ಚು ಬೆಳೆಯುತ್ತಿರುವ ಒಂದು ಇಲಾಖೆಯಾಗಿದೆ. ಸರ್ಕಾರದ ಹಣದ ಮೂಲಕ, ಸಾರ್ವಜನಿಕ ಹಣದ ಮೂಲಕ ಸರ್ಕಾರ ನಡೆಸಿಕೊಂಡು ಹೋಗತಕ್ಕ ಎಲ್ಲಾ ಅಭಿವೃದ್ಧಿ ಕಾರ್ಯಗಳೂ ಕೂಡ, ಅವು ಸಣ್ಣವಾಗಿರಲಿ, ದೊಡ್ಡವಾಗಿರಲಿ, ಈ ಇಲಾಖೆಯ ಮೂಲಕವೇ ನಡೆಯುತ್ತವೆ. ಈ ಇಲಾಖೆಯ ಮೂಲಕ ವರ್ಷಕ್ಕೆ ಸುಮಾರು ಐದಾರು ಕೋಟಿ ರೂಪಾಯಿ ಖರ್ಚಾಗುತ್ತಿದೆಯೆಂದು ಹೇಳಬಹುದು. ಹೀಗಿರುವಾಗ ಈ ವೆಚ್ಚದ ಬಗ್ಗೆ ಎಷ್ಟು ತೀವ್ರವಾಗಿ ಗಮನ ಕೊಡಬೇಕು ಮತ್ತು ಹತೋಟಿ ಇರಬೇಕು ಎಂಬುದು ಬಹಳ ಮುಖ್ಯವಾದ ವಿಷಯ. ಇದಕ್ಕೆ ಸರ್ಕಾರದವರು ಹೆಚ್ಚಾಗಿ ಗಮನ ಕೊಟ್ಟಂತೆ ಕಾಣಲಿಲ್ಲ. ಅಲ್ಲಲ್ಲಿ ಮಾನ್ಯ ಮಂತ್ರಿಗಳು ಪ್ರವಾಸ ಹೋದಾಗ ಈ ರಸ್ತೆ ಬಹಳ ಕೆಟ್ಟಿದೆ ಎಂದು ಅವರ ಗಮನಕ್ಕೆ ತಂದರೆ, ಅವರಿಗೆ ಅದು ಸೂಕ್ತವೆಂದು ಕಂಡು ಬಂದರೆ, ಅದಕ್ಕೆ ನಾವು ಗ್ರ್ಯಾಂಟು ಕೊಡುತ್ತೇವೆ ಎಂದು ಹೇಳುವುದು ಮತ್ತು ಆ ರಸ್ತೆಗಳಿಗೆ ಹಣ ಕೊಡುವುದು ಈ ಸರ್ಕಾರದ ಸಂಪ್ರದಾಯವಾಗಿ ಬಂದಿದೆ. ಇದಕ್ಕಾಗಿ ಒಂದು ಇಲಾಖೆಯಿದ್ದು, ಆ ಇಲಾಖೆ ಯಾವ ಯಾವ ರಸ್ತೆಗಳು ಕೆಟ್ಟಿವೆ, ಯಾವ ಯಾವ ರಸ್ತೆಗಳನ್ನು

maintain ಮಾಡಬೇಕು, ಯಾವ ಯಾವ ರಸ್ತೆಗೆ ಹೆಚ್ಚು ಗಮನ ಕೊಡಬೇಕು, ಯಾವ ಯಾವ ರಸ್ತೆಗೆ ಧಕ್ಕೆ ಬಂದಿದೆ ಎಂಬುದನ್ನೆಲ್ಲಾ ಪರೀಕ್ಷಿಸಿ ನೋಡಿ, ಸಮಂಜಸವಾದ ವರದಿಯನ್ನು ಕೊಟ್ಟು ಅದರ ಮೇಲೆ ಕೆಲಸ ನಡೆಸುತ್ತಿರುವಂತೆ ತೋರಲಿಲ್ಲ. ಈ ಸಂಪ್ರದಾಯ ಬಹಳ ಕೆಟ್ಟದ್ದು; ಇದರಿಂದ ಸಂಸ್ಥಾನಾದ್ಯಂತ ಇರತಕ್ಕ ಅನೇಕ ರಸ್ತೆಗಳಿಗೆ ಯಾವ ಹಣವೂ ದೊರೆಯದೇ ಹೋಗುತ್ತದೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಕಡೆಯಲ್ಲಿ ಹೆಚ್ಚು ಮಳೆ ಬರುವುದರಿಂದ, ಸುಮಾರು 200 ರಿಂದ 300 ಅಂಗುಲಗಳವರೆಗೆ ಮಳೆ ಬೀಳುವುದರಿಂದ ಸುಮಾರು ಆರು ತಿಂಗಳ ಕಾಲ ನಮ್ಮ ರಸ್ತೆಗಳು ನೀರಿನಲ್ಲಿ ಮುಳುಗಿ ಹೋಗಿರುತ್ತವೆ. ಇಂಥ ಕಡೆಯ ರಸ್ತೆಗಳೂ ಬೇರೆಯ ಕಡೆಯ ರಸ್ತೆಗಳೂ ಒಂದೇ ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಮಲೆನಾಡಿನಲ್ಲಿ ರಸ್ತೆಯ ಮೇಲೆ ನೀರು ನದಿ ಹೋಗುವ ಹಾಗೆ ಹರಿಯುತ್ತಿರುತ್ತದೆ. ಅಲ್ಲದೆ ಮರದ ನೀರು ಬಿದ್ದು ಗುಂಡಿಗಳು ಬಿದ್ದಿರುತ್ತವೆ. ಈ ವರ್ಷ ಜುಲೈ-ಆಗಸ್ಟ್‌ನಲ್ಲಿ ಹಣ ಖರ್ಚು ಮಾಡಿ ರಿಪೇರಿ ಮಾಡಿದರೆ ಸೆಪ್ಟೆಂಬರ್ ಹೊತ್ತಿಗೆ ಎಲ್ಲಾ ಕೆಟ್ಟು ಹೋಗಿರುತ್ತದೆ. ಸಂದರ್ಭ ಹೀಗಿರುವಾಗ ಮಲೆನಾಡಿಗೇ ಬೇರೆ ಯೋಜನೆಯನ್ನು ಮಾಡಿ ಅಲ್ಲಿ ಯಾವ ರೀತಿ ಕೆಲಸ ಮಾಡಿದರೆ ರಸ್ತೆಗಳು ಹೆಚ್ಚು ಶಾಶ್ವತವಾಗಿ ಚೆನ್ನಾಗಿರಲು ಅವಕಾಶವಾಗುತ್ತದೆ, ಮತ್ತು ರಸ್ತೆಗಳಿಗೆ ಜಲ್ಲಿಯನ್ನು ಉಪಯೋಗಿಸುವುದು ಒಳ್ಳೆಯದೆ ಅಥವಾ ಬೇರೆ ಮೃದುವಾದ ಕಲ್ಲಿರುತ್ತದೆ, ಅದನ್ನು ಉಪಯೋಗಿಸಿದರೆ ಒಳ್ಳೆಯದೆ ಎನ್ನುವುದನ್ನು ಪ್ರಯೋಗ ಮಾಡಿ ನೋಡಬೇಕು. ಪ್ರಯಾಣ ಹೆಚ್ಚಾದ ಹಾಗೆಲ್ಲಾ ಎಲ್ಲ ಕಡೆಯ ಸಾರಿಗೆ ಸಂಪರ್ಕದ ಅನುಕೂಲ ಕಲ್ಪಿಸುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ, ಈ ಕಡೆ ಸರ್ಕಾರ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇಲ್ಲಿ ಮೈಸೂರಿನಿಂದ ಬೆಂಗಳೂರಿಗೆ, ಕೋಲಾರಕ್ಕೆ ಹೋಗುವ ರಸ್ತೆ, ಬೆಂಗಳೂರಿನ ಸುತ್ತುಮುತ್ತಲಿರುವ ರಸ್ತೆಗಳಿಗೆ ಹೆಚ್ಚು ಗಮನ ಕೊಟ್ಟು ಬೇರೆ ಕಡೆ ರಸ್ತೆಗಳಿಗೆ ನಿಗಾ ಕೊಡದೇಯಿರುವುದು ಸಮಂಜಸವಾದ ನೀತಿಯಲ್ಲ. ಈ ಹೊತ್ತು ರಸ್ತೆಗಳನ್ನು ರಿಪೇರಿ ಮಾಡಬೇಕಾಗಿದೆಯೆಂದು 5 ಲಕ್ಷ ರೂಪಾಯಿ ಕೇಳಿದ್ದೀರಿ. ಸಂಚಾರ ಹೆಚ್ಚಾಗಿ ರಸ್ತೆಗಳಿಗೆ ತೊಂದರೆಯಾಗಿದೆಯೆಂದು ಗ್ರಾಂಟ್ ಕೇಳಿದ್ದೀರಿ

ಈ Grantನ್ನು ಖರ್ಚುಮಾಡುವಾಗ ಎಲ್ಲೆಲ್ಲ ಯಾವ ಯಾವ ರಸ್ತೆಗಳಿಗೆ ಖರ್ಚುಮಾಡಿದ್ದಾರೆ, ಇದನ್ನು ಸಂಸ್ಥಾನಾದ್ಯಂತ ಇರತಕ್ಕಂಥ ರಸ್ತೆಗಳಿಗೆ ಏನಾದರೂ equal ಆಗಿ ಅವುಗಳ ಉದ್ದದಮೇಲೆ distribute ಮಾಡುತ್ತಿರಬೇಕು. ಅಥವಾ ಯಾವ ಯಾವ ರಸ್ತೆಗಳಲ್ಲಿ ಹೆಚ್ಚು traffic ಇದೆ ಎಂಬ ಅಂಕಿ ಅಂಶಗಳನ್ನಿಟ್ಟುಕೊಂಡು ನೋಡಿ distribute ಮಾಡಿದ್ದಾರೆಯೇ ಎಂದು ನೋಡಿದರೆ ಅಂಥದೇನೂ ನನಗೆ ಕಂಡುಬರಲಿಲ್ಲ. ಬಹುಶಃ ಕೆಲವು ರಸ್ತೆಗಳು ಚೆನ್ನಾಗಿ ಇರಬೇಕು. ಅದಕ್ಕೋಸ್ಕರ ಹಣ ಬೇಕು. ಕೊಡಿ ಎಂದು ಕೇಳುತ್ತಿದ್ದಾರೆ. ನಾವು Additional Grant ಕೊಡುತ್ತೇವೆ. ನೀವು ಹೋದ ಕಡೆಗಳಲ್ಲಿ ಭಾಷಣ ಮಾಡುವಾಗ ಅಲ್ಲಿ ಅವರನ್ನು ತೃಪ್ತಿಪಡಿಸಿಕೊಂಡು ಏನಾದರೂ ಹೇಳಿ ಅವರಿಗೆ commitments ಮಾಡಿ, ಇದಕ್ಕೋಸ್ಕರ ಹೊಸ ಗ್ರಾಂಟು ಕೊಡಿ ಎಂದು ಹೇಳಿದ ಹಾಗಿದೆ. ಯಾರ ಯಾರ ಪ್ರಭಾವ ಹೆಚ್ಚಾಗಿದೆಯೋ ಯಾರು ಯಾರು ದೊಡ್ಡ ಗಂಟಲನ್ನು ಇಟ್ಟುಕೊಂಡಿದ್ದಾರೋ, ಯಾರು ಅವರಿಗೆ ಸಮೀಪವಾಗಿದ್ದಾರೋ ಅಂತಹವರು ಕೇಳಿದರೆ ಈ ರಸ್ತೆಗಳನ್ನು ರಿಪೇರಿಮಾಡಿಕೊಡುವುದಾಗಿದೆ. ಇದೇ ನೀತಿ ಇದ್ದರೆ ಇದರಿಂದ ದೇಶಉದ್ಧಾರವಾಗುವುದಿಲ್ಲ. ಬಾಯಿ ಇಲ್ಲದೇ ಇರುವ ಜನಗಳು ನಮ್ಮ ದೇಶದಲ್ಲಿ ಜಾಸ್ತಿ. ಅಂದರೆ ಅವರನ್ನು dumb millions ಎಂದು ಹೇಳುತ್ತೇವೆ. ಸರ್ಕಾರದ ಹತ್ತಿರ ಹೋಗಿ ಕೆಲಸ ಮಾಡಿಸಿಕೊಳ್ಳಬೇಕಾದರೆ ಅರ್ಜಿಗಳನ್ನು ಬರೆಯಬೇಕೆಂಬುದು ಅವರಿಗೆ ಗೊತ್ತಾಗುವುದಿಲ್ಲ. ಹಿಂದಿನ ಎಂಟು ವರುಷಗಳ ಸರ್ಕಾರದ ವಿಷಯ ನಾನು ಹೇಳುವುದಿಲ್ಲ. ಅವರು ಮನಸ್ಸು ಬಂದರೆ ಮಾಡಬಹುದಾಗಿತ್ತು. ಮನಸ್ಸು ಬಾರದೆ ಇದ್ದರೆ ಮಾಡದೆ ಇರಬಹುದಾಗಿತ್ತು. ಅವರ ವಿಚಾರಕ್ಕೆ ನಾನು ಹೋಗುವುದಿಲ್ಲ. ಈಗ ಪ್ರಜೆಗಳಿಂದ ಆರಿಸಿ ಈ ಸಭೆಗೆ ಬಂದ ಪ್ರತಿಯೊಬ್ಬರೂ ತಮ್ಮ ಕ್ಷೇತ್ರಕ್ಕೆ ಜವಾಬ್ದಾರರಾಗಿದ್ದು ಅಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುವ ಸಂದರ್ಭಗಳು ಇರುವಾಗ ಸರ್ಕಾರದವರು ಯಾವ ಕೆಲಸಗಳಿಗೆ ಎಲ್ಲಿ ಅವಶ್ಯಕವಿದೆ, ಯಾವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕೆಂಬುದನ್ನು ಅರಿತು ಹಣವನ್ನು ವಿನಿಯೋಗಿಸದೆ ಹೋದರೆ, ಇದರಿಂದ ದೇಶ ಸರ್ವತೋಮುಖವಾಗಿ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಯಾರುಯಾರೋ ಕೆಲವರಿಗೆ ಕೆಲಕೆಲವು ಕೆಲಸಗಳು ಆಗಬಹುದು. ಅಂತಹವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ಪದ್ಧತಿಯನ್ನು ಸರ್ಕಾರ ಕೈಬಿಡಬೇಕು. ಈ ಪದ್ಧತಿಯನ್ನು ತೊಡೆದುಹಾಕಿ ಇಂತಹ ಯಾವ ಗ್ರಾಂಟನ್ನೂ ಕೇಳಬಾರದೆಂಬುದು ನನ್ನ ಅಭಿಪ್ರಾಯವಲ್ಲ. ಗ್ರಾಂಟನ್ನು ಕೇಳುವುದರಲ್ಲಿ ಒಂದು ಸಮಂಜಸತೆ ಇರಬೇಕು. ಕೆಲವು ರಸ್ತೆಗಳಲ್ಲಿ ಓಡಾಟ ಜಾಸ್ತಿಯಾಗಬೇಕಾಗಿದೆ. ಐದು ಲಕ್ಷ ರೂಪಾಯಿಗಳನ್ನು ಗ್ರಾಂಟುಕೊಡಿ ಎಂದರೆ ಅದನ್ನು ಕೊಡುವುದು ಅಷ್ಟು ಸುಲಭವಲ್ಲ. ಇವೊತ್ತು ಏನೋ ತಮ್ಮ 'ಬಹುಮತವಿದೆ,' ಕೇಳುವುದಿಲ್ಲವೆಂದು ತಾವು ನಡೆಯಬಹುದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ತಾವು ಆ ರೀತಿ ಮಾಡತಕ್ಕದ್ದು ಸರಿಯಾದ ನೀತಿಯಲ್ಲವೆಂದು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ.

ಆ ಮೇಲೆ ಈ departmentಗಳಲ್ಲಿ ಸಾಮಾನುಗಳನ್ನು ಅಂದರೆ ಮೆಷಿನರಿ (Tools and Plants) ತೆಗೆದುಕೊಂಡದ್ದು ಅತಿ ಮುಖ್ಯವಾದ ಒಂದು ಅಂಶ. ಈ ವಿಷಯದಲ್ಲಿ ಕೆಲವು ವೇಳೆ ನಾವು ಹಗರಣಗಳನ್ನು (scandals) ಕೇಳುತ್ತಿದ್ದೇವೆ. ಲಾರಿಗಳನ್ನು ಕೊಂಡಿರುವ ಇಂತಹವರ ಹತ್ತಿರ ತೆಗೆದುಕೊಂಡರು ಎಂದು ಮುಂತಾಗಿ ಕೇಳುತ್ತಾ ಇದ್ದೇವೆ.

Sri B. T. KEMPARAJ.—Tractors.

ಶ್ರೀ ಎಸ್. ಗೋಪಾಲಗೌಡ.—ರೋಡ್ ರೋಲರ್ಸ್, ಲಾರೀಸ್, ಹೀಟ್ ಮಾಸ್ಟರ್ಸ್ ಮತ್ತು ಜೀಪ್ಸ್ ಈ 4 itemಗಳನ್ನು ಮಾತ್ರ ಇಲ್ಲಿ ನಮೂದು ಮಾಡಿದ್ದಾರೆ. ಬೇರೆ ವಿಷಯ ನಾನು ಇಲ್ಲ ಹೇಳುವುದಿಲ್ಲ. ಈ ಸಾಮಾನುಗಳನ್ನು ಕೊಳ್ಳುವಾಗ ವಸ್ತು ಯಾವುದು ಎಂದು ನೋಡಿ ಅವುಗಳ ಖರೀದಿ ವಿಷಯದಲ್ಲಿ ಬಹಳ ಚೌಕಾಸಿ ಮಾಡಬೇಕಾಗಿದೆ. ಇದು ಸರ್ಕಾರದ ಅಂದರೆ ಸಾರ್ವಜನಿಕರ ಸ್ವತ್ತು. ಇಲ್ಲಿರುವ ಹಣ ಸಾರ್ವಜನಿಕರದು. ಕೊಂಡುಕೊಳ್ಳುವ ಸಾಮಾನುಗಳೂ ಕೂಡ ಸಾರ್ವಜನಿಕರದಾಗಿದೆ. ಆದ್ದರಿಂದ ಈ ವಿಷಯದಲ್ಲಿ ಹೆಚ್ಚಿನ ಒಂದು ಚೌಕಾಸಿ ಇರಬೇಕಾದುದು ಅತ್ಯಗತ್ಯ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಇದನ್ನು ನೋಡಿಕೊಳ್ಳಲು Accountant-General's Office ಇದೆಯಲ್ಲಾ ?

ಶ್ರೀ ಎಸ್. ಗೋಪಾಲ ಗೌಡ.—Accountant-General's Officeಗೆ Constitution ಪ್ರಕಾರ ಒಂದು ಅಸ್ತಿತ್ವವಿದೆ. ಈ ರೀತಿ ಈ ಬಾಬುಗಳಿಗಾಗಿ ಹಣ ಖರ್ಚು ಮಾಡಬೇಕು ಮತ್ತು ಹಣವನ್ನು ಪಡೆಯ ಬೇಕಾದರೆ ಈ Appropriation Bill ಮುಖಾಂತರ ಪಡೆದುಕೊಳ್ಳಬೇಕೆಂಬುದನ್ನು ಅವರು ಸರ್ಕಾರ ಮಾಡುವಂತೆ ನೋಡಿಕೊಳ್ಳುತ್ತಾರೆ. ಆದರೆ Accountant-General's Officeರವರು ನೀವು ಕೊಂಡುಕೊಳ್ಳತಕ್ಕಂಥ ಲಾರಿ ಅಚ್ಚ ಹೊಸದೆ ಅಥವಾ ಹಳೇ ಲಾರಿಗೇ paint ಮಾಡಿಸಿಕೊಂಡು ಕೊಂಡುಕೊಂಡಿದ್ದೀ ಎಂಬುದನ್ನು ನೋಡುವುದಿಲ್ಲ. ಅವರು 15 ಸಾವಿರ ರೂಪಾಯಿನ ಲಾರಿ ಇದೆ. ಅದಕ್ಕೆ ಸರಿಯಾದ voucher ಇದೆಯೇ ಎಂಬುದನ್ನು ಮಾತ್ರ ನೋಡುತ್ತಾರೆ. ಅಂದರೆ ಲಾರಿ paint ಮಾಡಿ ಬಂದಿರತಕ್ಕದ್ದು, ಅದರ ಚಕ್ರಗಳು ಸರಿಯಾಗಿಲ್ಲ ಎಂದು ಪ್ರಶ್ನೆ ಮಾಡುವುದಕ್ಕೆ ಅವರಿಗೆ ಸಾಧ್ಯವಿಲ್ಲ. ಹಾಗೆ ಮಾಡಬೇಕಾದುದು ಅವರ ಕೆಲಸವೂ ಅಲ್ಲ. ಆ ಕೆಲಸವನ್ನು ಸರ್ಕಾರದ ಇಲಾಖೆಗಳಲ್ಲಿರತಕ್ಕಂಥ, ಜವಾಬ್ದಾರಿ ಹೊತ್ತಿರತಕ್ಕಂಥ ಅಧಿಕಾರಿಗಳೂ ಮತ್ತು ಹಣವನ್ನು sanction ಮಾಡತಕ್ಕಂಥ ಈ ಸಭೆಯ ಪರ ವಾಗಿರತಕ್ಕಂಥ ಮಂತ್ರಿಗಳೂ ಮತ್ತು ಮೇಲಾಗಿ ಈ ಸಭೆಯವರೂ ನೋಡಿಕೊಳ್ಳಬೇಕಾಗಿದೆಯೇ ಹೊರತು ಇನ್ನು ಯಾರು ನೋಡಿಕೊಳ್ಳುವುದಕ್ಕೆ ಆಗುತ್ತದೆ? ಒಂದುವೇಳೆ ಜನರು ತಿಳಿದವರೂ, ಅಕ್ಕಪಕ್ಕದ ಮಹ ನೀಯರೂ, ಸುತ್ತು ಮುತ್ತಲ ಊರವರೂ ಈ ರೀತಿ ಸರಕಾರದಲ್ಲಿ ನಡೆದಿದೆ ಎಂದು ಹೇಳಬಹುದು.

Sri T. N. MUDALAGIRI GOWDA.—For instance.

ಶ್ರೀ ಎಸ್. ಗೋಪಾಲಗೌಡ.—ಇತ್ತೀಚೆಗೆ ಲಾರಿ ಗಳನ್ನು ಕೊಂಡುಕೊಂಡರೂ ಅದರಲ್ಲಿ ತಪ್ಪು ಇದ್ದರೂ ಅದು ದೊಡ್ಡದಾಗಿ ನಡೆದಿದೆ ಎಂಬ ವಿಚಾರವಾಗ ಬೇಕಾಗಿಲ್ಲ. ಈಗಿರುವ ಮುಖ್ಯ ಅಂಶ: ಆರು ಲಕ್ಷ ರೂಪಾಯಿಗಳನ್ನು Budget Provisionನಲ್ಲಿ ಕೊಟ್ಟಿತ್ತು, ಈಗ 4.5 ಲಕ್ಷ ರೂಪಾಯಿಗಳ ಹೆಚ್ಚಿನ ಗ್ರಾಂಟು ಕೇಳಿದ್ದೀರಿ. 1953-54ನೇ ಇಸವಿಯಲ್ಲಿ ಇದಕ್ಕೆ ಒಂದು ಆರ್ಡರ್ ಕೊಟ್ಟಿದ್ದರೂ ಅದು ಇನ್ನೂ ಬಂದಿರಲಿಲ್ಲ. Explanatory ನೋಟಿನಲ್ಲಿ ಹೀಗೆ ಹೇಳಿದ್ದಾರೆ. "These equipments are being secured during the current year, the cost of those already purchased during the year and those for which orders are placed comes to Rs 10,00,000 (Rupees ten lakhs). 1953-54ನೇ ಇಸವಿ ಯಲ್ಲಿ orders ಕೊಟ್ಟಿದ್ದು ಈ ವರೆಗೆ ಅವು ಏತಕ್ಕೆ ಬರಲಿಲ್ಲ? ಬಾರದೆ ಇರುವುದಕ್ಕೆ ಏನು ಕಾರಣ ಗಳಿದ್ದುವು? ಅದು ಯಾವಾಗ ಕಂಪನಿಗೆ ಕೊಟ್ಟ ಆರ್ಡರ್? ಈ ದೇಶದ ಕಂಪನಿಯೇ ಅಥವಾ ಭಾರತ ದೇಶದ ಕಂಪೆನಿಯೇ ಎಂದು ಕೇಳುತ್ತೇನೆ. ಇದರಿಂದ ಏನಾಗುತ್ತದೆ ಅಂದರೇ ಅನೇಕವೇಳೆ ಕೆಲಸಗಳು ನಿಂತುಹೋಗುತ್ತವೆ. ರೋಡ್ ರೋಲರ್ಸ್ ಸಿಕ್ಕದೆ ಹೋದರೆ, ಲಾರಿಗಳು, ಹೀಟ್ ಮಾಸ್ಟರ್ಸ್, ಜೀಪ್ಸ್ ಮುಂತಾದ ಸಲಕರಣೆಗಳು, ಉಪಕರಣಗಳು ಇಲ್ಲದೆ ಹೋದರೆ ರೇಟ್‌ನಲ್ಲಿ ಹೆಚ್ಚಿಗೆ ತರಬೇಕಾದ ಸಂದರ್ಭ ಬೀಳಬಹುದು. ಜೊತೆಯಲ್ಲಿ ಆಗಬೇಕಾದ ಕೆಲಸವೂ ಕೂಡ ಆಗದೆ ಅನೇಕವೇಳೆ ಬೇರೆ ಖಾಸಗಿ ಕಂಟ್ರಾಕ್ಟು ದಾರರಿಗೆ ಈ ಕೆಲಸಗಳನ್ನು ಮಾಡಿಸಲು ಒಂದಕ್ಕೆ ಹತ್ತರಷ್ಟು ಹಣ ತೆರಬೇಕಾಗುತ್ತದೆ. ಹೀಗಿರುವಾಗ ಇಷ್ಟು ದುಡ್ಡು ಆಗಿರುವುದಕ್ಕೆ ಏನು ಕಾರಣ, ಹೆಚ್ಚು ಹಣ ಖರ್ಚಾಗಿರುವುದಕ್ಕೆ ಏನು ಕಾರಣ ಎಂದು ಅನು ಮಾನಾಸ್ಪದವಾದ ವಿಷಯವಾಗಿ ಪರಿಣಮಿಸುತ್ತದೆ. ಅನುಮಾನಗಳಿಗೆ ಅವಕಾಶವಿಲ್ಲದಂತೆ ಸರಕಾರದವರು ಸರಿಯಾದ ರೀತಿಯಲ್ಲಿ ವ್ಯವಹಾರಗಳನ್ನು ನಡೆಸಬೇಕು. ಸಾಮಾನುಗಳನ್ನು ಕೊಂಡುಕೊಳ್ಳುವಾಗ ಬಹಳ ಎಚ್ಚರಿಕೆಯಿಂದ ಇದ್ದು ಸಾರ್ವಜನಿಕರ ಪ್ರತಿಯೊಂದು ಕಾಸು ಕೂಡ ಸದ್ವಿನಿಯೋಗವಾಗುವ ರೀತಿಯಲ್ಲಿ ವರ್ತಿಸಬೇಕೆಂಬುದು ನಾವು ತಿಳಿದುಕೊಳ್ಳಬೇಕಾದ ಬಹು ಮುಖ್ಯವಾದ ಅಂಶ. ಇನ್ನು ಹೌಸಿಂಗ್ ಸ್ಕೀಮಿನ ಮೇಲೆ ನಾನು ಹೇಳುವುದು ಬೇಡ ಎಂದು ಅಂದುಕೊಂಡಿದ್ದೇನೆ.

ಶ್ರೀ ಕೆ. ಹನುಮಂತಯ್ಯ.—ಅದೆಲ್ಲಾ ಚೆನ್ನಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಆಡಿಟ್ ವಿಷಯದಲ್ಲಿ ಈಗಾಗಲೇ ಮಾನ್ಯ ಸಭಾ ಸದಸ್ಯರು ಅನೇಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳನ್ನು audit ಮಾಡಿಸತಕ್ಕಂಥ ವಿಷಯ ಮತ್ತು co-operative societyಗಳನ್ನು ಆಡಿಟ್ ಮಾಡಿಸು ವುದಕ್ಕೆ ಈಗಿರತಕ್ಕಂಥ circle audit office ಗಳು ಅವನ್ನು ನಿರ್ವಹಿಸುವುದಕ್ಕೆ ಆಗಿಲ್ಲವೆಂದು ಒಂದು ಹೊಸ ಇಲಾಖೆಯನ್ನೇ ಎರಡು ವರ್ಷಗಳ ಕಾಲದವ ರೆಗೆ ನೇಮಿಸಿಕೊಂಡು ಕೆಲಸ ಮಾಡುತ್ತಾ ಇರುವುದು ಇನ್ನೊಂದು ವಿಷಯ ಮುಖ್ಯವಾದುವು. ಇರತಕ್ಕಂಥ ಇಲಾಖೆಯೇ ಈ ಕೆಲಸವನ್ನು ಏತಕ್ಕೆ ವಹಿಸಬಾರದು ಎಂಬ ಭಿನ್ನಾಭಿಪ್ರಾಯವಿದೆ. ಈ ಸೊಸೈಟಿಗಳು ಹುಟ್ಟಿದ ಲಾಗಾಯಿತು ಒಂದು ರೀತಿಯಲ್ಲಿ auditನ್ನೇ ಕಂಡಿರಲಿಲ್ಲ. "They were being audited by the local certified auditors." ಅದಕ್ಕೆ ಸಹಸ್ರಾರು ಸಂಘಗಳ ಲೆಖ್ಖ ಪತ್ರಗಳನ್ನು ಸರಿಯಾಗಿ ತನಿಖೆಮಾಡಿ ಅವುಗಳ ಹಣ ಏನಾಗಿದೆಂಬುದನ್ನು ನೋಡಿಕೊಳ್ಳುವುದಕ್ಕೆ ಇಂತಹ ಒಂದು ಇಲಾಖೆಯನ್ನು ರಚಿಸಬೇಕಾದ ಅಗತ್ಯತೆ ಬಹಳವಾಗಿ ಇತ್ತೆಂದು ಕಾಣು ತ್ತದೆ. ಆದರೆ ಮಾನ್ಯ ಸದಸ್ಯರೊಬ್ಬರು ಪ್ರಸ್ತಾಪ ಮಾಡಿದ್ದಾರೆ. Auditors ಗಳು inspectors ಆಗಿ ದ್ದಾರೆ. ಈ ಅಂಶದ ಬಗ್ಗೆ ಅವರಿಗೆ ಹೆಚ್ಚು ಪ್ರಾಜ್ಞತೆ ಇಲ್ಲ. ಅವರು ಹಿಂದೆ ಏನು inspector ಆಗಿ ಸೊಸೈ ಟಿಗಳಿಗೆ ಹೋಗಿ checked and found correct ಎಂದು ಮಾಡುತ್ತಾ ಇದ್ದರೋ ಹಾಗೆಯೇ ಮಾಡುತ್ತಾ ರೆಂದು ಕಾಣುತ್ತದೆ. ಅಂತಹ ಸಂದರ್ಭಗಳು ಇದ್ದರೆ ಅವರೆಲ್ಲರಿಗೂ ಟ್ರೈನಿಂಗ್ ಕೊಡುವುದಕ್ಕೆ ಮತ್ತು ಯಾವ ಒಬ್ಬರ ಹಂಗಿಗೂ ದಾಕ್ಷಿಣ್ಯಕ್ಕೂ ಒಳಗಾಗದೆ ನಿಷ್ಪಕ್ಷಪಾತವಾಗಿ ದೊಡ್ಡವರೇ ಮಾಡಲಿ, ಸಣ್ಣವರೇ ಮಾಡಲಿ, ಟೋಪಿ ಹಾಕಿದವರೇ ಮಾಡಲಿ ಅಥವಾ ಟೋಪಿ ಹಾಕದವರೇ ಮಾಡಲಿ ಅವೆಲ್ಲವನ್ನೂ ಗಮನಕ್ಕೆ ತೆಗೆದುಕೊಳ್ಳದೆ ಸಂಘದ ಹಣ ದುರುಪಯೋಗವಾಗಿ ದ್ದರೆ ಮತ್ತು ಲೆಕ್ಕ ಪತ್ರಗಳು ಸರಿಯಾಗಿ ಇಲ್ಲದೆ ಹೋದರೆ ಅಂತಹ ಸಂದರ್ಭಗಳಲ್ಲಿ ನಿಷ್ಪಕ್ಷಪಾತವಾಗಿ audit ಮಾಡಬೇಕು. ಇವೊತ್ತು Auditor-General ಯಾರು ಇದ್ದಾರೆ ಅವರು, ಮುಖ್ಯಮಂತ್ರಿಗಳು ಖರ್ಚುಮಾಡಿದರೂ ಅದನ್ನು ಬಿಡುವುದಿಲ್ಲ. ಅದಕ್ಕೆ query ಹಾಕುತ್ತಾರೆ. ಮತ್ತು ಏತಕ್ಕೆ ಖರ್ಚು ಮಾಡಿದ್ದೀರಿ? ಇದು ಕಾನೂನು ಪ್ರಕಾರ ಇದೆಯೇ ಯೆಂದು ಕೇಳುತ್ತಾರೆ. ಆ ಒಂದು ದಕ್ಷತೆ ಈ

auditorಗಳಲ್ಲಿ ಬರಬೇಕು. ಲೆಖ್ಖ ತನಿಖೆ ಮಾಡತಕ್ಕಂಥ ಇಲಾಖೆಗಳಿಗೆ ಇಂತಹ ದಕ್ಷತೆ ಇಲ್ಲದೇ ಹೋದರೆ ಈ ಕಡೆ ದುಡ್ಡು ಹಾಳಾಗುತ್ತದೆ. ಆ ಕಡೆ ಲೆಖ್ಖ ಸರಿಯಾಗಿರುವುದಿಲ್ಲ. ಎರಡುವರ್ಷದ ಮೇಲೆ ನಮ್ಮನ್ನು perpetuate ಮಾಡಿ ಎಂದು ಕೇಳಬಹುದು. ನಮ್ಮನ್ನು ಎಲ್ಲಿಗೆ ಕಳುಹಿಸುತ್ತೀರಿ ಎಂದು ಕೇಳಬಹುದು? Post create ಮಾಡುವ ತನಕ ನಾವು ಸ್ವತಂತ್ರರಾಗಿರುತ್ತೇವೆ. ಆದರೆ ಆ ಮೇಲೆ ಮನೆಗೆ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಹೊಸದಾಗಿ ರಿಕ್ರೂಟ್ ಮಾಡಿದ್ದಾರೆ ಎಂದು ಭಾವಿಸುವುದಿಲ್ಲ. ಹೊಸದಾಗಿ ರಿಕ್ರೂಟ್ ಮಾಡಿಕೊಂಡಿರಲೂ ಬಹುದು. ಸಾಮಾನ್ಯವಾಗಿ ಅವರು ಇಲಾಖೆಯಲ್ಲಿರತಕ್ಕಂತಹವರನ್ನೇ ಆ ರೀತಿ ಒಂದುಕಡೆ ಸೇರಿಸಿ ಆ ರೀತಿ ಒಂದು ಇಲಾಖೆಯನ್ನು ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅಂತಹ ಸಂದರ್ಭದಲ್ಲಿ ಯಾವ ಉದ್ದೇಶಕ್ಕಾಗಿ ಅವರನ್ನು ನೇಮಿಸಿದ್ದೇವೋ ಆ ಉದ್ದೇಶ ಸಾರ್ಥಕವಾಗದೆ ಹೋದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನನಗೆ ತಿಳಿದುಬಂದಿರುವಹಾಗೆ ಅನೇಕ ಕಡೆಗಳಲ್ಲಿ misappropriation ನಡೆದಿದೆ. ಮತ್ತು certified auditor ಗಳಿಂದ ಅಂಥ ಕಡೆಗಳಲ್ಲಿ ತನಿಖೆಗಳು ಆಗಾಗ ಆಗುತ್ತಿದ್ದರೂ ಕೂಡ, ಆ ಸೊಸೈಟಿಯಲ್ಲಿರತಕ್ಕ ಜನಗಳು ದಾಕ್ಷಿಣ್ಯಕ್ಕೊಳಗಾಗಿ ಮು ಂದಕ್ಕೆ ತಳ್ಳುತ್ತಾ ಹೋಗುತ್ತಿದ್ದಾರೆ. ಕಾನೂನಿನಲ್ಲಿ ಅವಕಾಶವಿದ್ದರೂ ಕೂಡ ಅನೇಕ ಸಂದರ್ಭಗಳಲ್ಲಿ ಅಂತಹವರ ಮೇಲೆ ಕ್ರಮ ಜರುಗಿಸಿಲ್ಲ. ಏನಾದರೂ ಮಾಡಿ ಹೀಗೆ ಕಾಲ ತಳ್ಳಿಹಾಕಿ hush up ಮಾಡಿಕೊಂಡು ಮುಂದುವರಿಯುತ್ತಾ ಹೋಗುವುದು ಸಂಪ್ರದಾಯವಾಗಿದೆ. ಅಂಥಾದ್ದು ಆಗಬಾರದು ಎಂಬುದು ಸರ್ಕಾರದ ಉದ್ದೇಶ. ಆ ಉದ್ದೇಶ ಸಾರ್ಥಕವಾಗಬೇಕಾದರೆ ಸರಿಯಾದ ಲೆಖ್ಖ ಪತ್ರಗಳನ್ನು ಅವರವರೇ ಆಡಿಟ್‌ಮಾಡಿ ಸರಿಯಾದ ರೀತಿಯಲ್ಲಿ share holder ಗಳಿಗೂ ಕೂಡ ಸರಿಯಾದ ಅರಿವು ಉಂಟಾಗುವಂತೆ ಮಾಡಬೇಕು. ಎಷ್ಟೋ multi-purpose co-operative societyಗಳನ್ನು ದೇಶಾದ್ಯಂತ ಹರಡಬೇಕೆಂದು ಶ್ರೀಮಾನ್ ಮರಿಯಪ್ಪನವರು ಮಂತ್ರಿಗಳಾಗಿದ್ದಾಗ ಸದುದ್ದೇಶದಿಂದ ಪ್ರಯತ್ನಮಾಡಿ ಲಕ್ಷಾಂತರ ರೂಪಾಯಿಗಳನ್ನು ಜನರಿಂದ ವಸೂಲು ಮಾಡಿದರು. ಈ ಹಣವನ್ನು ವಸೂಲು ಮಾಡುವಾಗ ಅಮಲ್ದಾರರು, ಶೇಕದಾರರು ಮುಂತಾದವರು ಜನರಲ್ಲಿ ಹೋಗಿ ಹಣವನ್ನು ಕೊಡಲೇಬೇಕೆಂದು ಒತ್ತಾಯ ಮಾಡಿ ವಸೂಲು ಮಾಡುತ್ತಿದ್ದರು. ಆಗ control ಇತ್ತು. ಆದ್ದರಿಂದ ಕೆಲವು ದಿವಸ ಈ ಸೊಸೈಟಿಗಳು ನಡೆದುಕೊಂಡು ಹೋದುವು. ಇದಾದಮೇಲೆ ಕೆಲವು ಕಡೆ ಈ ಸೊಸೈಟಿಗಳ ಬಂಡವಾಳ ಕೆಲವು ಜನರ ಸ್ವಂತ ಬಂಡವಾಳದ ರೂಪಕ್ಕೆ ತಿರುಗಿತು. ಯಾವಾಗ ಸೀಮೆಯೆಣ್ಣೆ, ಸಕ್ಕರೆ, ಜನಗಳಿಗೆ ಸುಲಭವಾಗಿ ಸಿಕ್ಕುವುದಕ್ಕೆ ಪ್ರಾರಂಭವಾಯಿತೋ ಜನರು ಸೊಸೈಟಿಗಳಿಗೆ ಹೋಗುವುದನ್ನು ಬಿಡುತ್ತಾ ಬಂದರು. ಅಲ್ಲಿ ಕೆಲಸ ಮಾಡತಕ್ಕಂಥ ಗುಮಾಸ್ತರು ಬೇರೆ ಉದ್ಯೋಗಕ್ಕೆ ಹೋದರು. ಈಗ ಆ ಸೊಸೈಟಿಗಳ ಬೀಗ ಯಾರ ಹತ್ತಿರ ಇದೆಯೋ ಪುಸ್ತಕಗಳ ಕಂತೆ ಯಾರ ಹತ್ತಿರವಿದೆಯೋ ಗೊತ್ತಿಲ್ಲ, ಹೀಗೆಯೇ multi-purpose society ಗಳು ಮುಚ್ಚಿಹೋಗಿ ಲೆಖ್ಖ ಪತ್ರಗಳು ಸಿಕ್ಕುತ್ತಾ ಇಲ್ಲ. ಈ ಸೊಸೈಟಿಗಳು ಯಾರ ಆಡಳಿತದಲ್ಲಿ ಇತ್ತು, ಎಷ್ಟು ಸಾಮಾನುಗಳು ಉಳಿದಿವೆ, ಹಣ ಎಷ್ಟಿದೆ ಎಂಬುದು ಸರಿಯಾಗಿ ಗೊತ್ತಾಗುತ್ತಾ ಇಲ್ಲ. ಕೆಲವರು ಹಣವನ್ನು ತಿಂದುಹಾಕಿ, ಅದನ್ನು ವಸೂಲು ಮಾಡದೆ ಇರುವ ಸಂದರ್ಭಗಳೂ ಇವೆ.

4 P.M.

ಅವು ಕೆಲವಿರಬಹುದು. ಅಂತೂ ಒಟ್ಟಿನಲ್ಲಿ ಈ ಸೊಸೈಟಿಗಳು ಕೆಲಸ ಮಾಡತಕ್ಕ ರೀತಿನೀತಿ ಬಹಳ ಅಸಮರ್ಪಕವಾಗಿದೆಯೆಂಬುದು ಮಾತ್ರವಲ್ಲ, ಬಹಳ ಮಟ್ಟಿಗೆ ಜನರಲ್ಲಿ ಇದರ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ರೂಢಿಸಬೇಕು, ಆ ಮುಂಖಾತರವೇ ಎಲ್ಲಾ ಕೊಡುವ ತೆಗೆದುಕೊಳ್ಳುವ ಕೆಲಸ ನಡೆಯಬೇಕೆಂದು ನಾವು ಉದ್ದೇಶಿಸಿದ್ದೆವೋ, ಆ ಉದ್ದೇಶವೇ ಈಡೇರದೆ ಹೋದಾಗ ಜನತೆಗೆ ಅವಿಶ್ವಾಸ ಬರುವುದು ಸಹಜ. ಹೀಗಾಗಿ ಕೊನೆಗೆ ಸಹಕಾರ ಪದ್ಧತಿಯೇ ನಮ್ಮ ದೇಶದಲ್ಲಿ ನಡೆಯುವುದಿಲ್ಲವೆಂದು ಹೇಳಿ ಕೈ ಬಿಡುವುದು ಬಹಳ ಮಟ್ಟಿಗೆ ಸಾರ್ವಜನಿಕರ ಅಭಿವೃದ್ಧಿಗೆ ಧಕ್ಕೆಯನ್ನುಂಟುಮಾಡುತ್ತದೆ. ಮತ್ತು ಹಣಕಾಸಿನ ಬಗ್ಗೆ ಯಾವುದೂ ಒಂದು ಹಿಡಿತವಿರುವುದಿಲ್ಲ.

Mr. DEPUTY SPEAKER.—I would like to know from the Government, what time they would require to reply ?

Sri K. HANUMANTHAIYA.—In order to give reply effectively to all the points raised, it would take atleast an houras you are aware. But if the House so requires, another 15 minutes may be given for the Hon'ble Members to speak, and I would take about ¾ of an hour to reply.

Mr. DEPUTY SPEAKER.—Is there any other member to speak ? We have got only 15 minutes available.

(Sri K. Puttaswamy, Sri V. M. Mascarenhas and Sri N. Huchmasthygowda rose).

Mr. DEPUTY SPEAKER.—You expect the Government to give reply to all the points raised by the Hon'ble Members. As some other members are anxious to speak, please close your speech.

Sri S. GOPALA GOWDA.—I do not take more than five minutes, Sir.

Mr. DEPUTY SPEAKER.—You can speak about all the points during the course of the Budget Discussion ; you will have ample opportunity then.

Sri S. GOPALA GOWDA.—I am summing up the points, Sir.

ಸಹಕಾರ ಸಂಸ್ಥೆಗಳ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ನಾನು ಬಡ್ಜೆಟ್ ಕಾಲದಲ್ಲಿ ಪ್ರಸ್ತಾಪಿಸಬೇಕೆಂದಿದ್ದೇನೆ. ಸದ್ಯಕ್ಕೆ ಒಂದು ಮಾತು ಹೇಳಬಯಸುತ್ತೇನೆ. ಹೌಸಿಂಗ್ ಕಾರ್ಪೊರೇಷನ್ ಕೆಲಸಮಾಡುತ್ತಿರುವುದು ಸಮರ್ಪಕವಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು, ಆ ಕಾರ್ಪೊರೇಷನ್ ಅಸ್ತಿತ್ವದಲ್ಲಿ ಅದು ಕೆಲಸಮಾಡುತ್ತಿರುವುದು ಸ್ವಾಗತಾರ್ಹ

(SRI S. GOPALA GOWDA.)

ವಾದದ್ದು ಮತ್ತು ಪ್ರಶಂಸನೀಯವಾದದ್ದು ಆದರೆ, ಒಂದು ಕೊರತೆಯೇನೆಂದರೆ,—ಮನೆಗಳನ್ನು ಕಟ್ಟಿರುವುದನ್ನು ಕೆಲವು ಕಡೆ ನಾನು ನೋಡಿದ್ದೇನೆ. ಎಸ್ಟಿಮೇಟನ್ನು ನೋಡಿದರೆ, ಎಲ್ಲಾ 6,000, 8,000 ಎಂದು ಸಾವಿರದಲ್ಲೇ ಇರುತ್ತಾರೆ. ಒಳಗೆ ಇರುವ ಸ್ಥಳಾವಕಾಶವನ್ನು ನೋಡಿದರೆ, ಅಲ್ಲಿ ಕಾಲು ಚಾಚಿ ಮಲಗಿಕೊಳ್ಳುವುದಕ್ಕೆ ಕೂಡ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನೀವು ಆ ಮನೆಗಳನ್ನು ನೋಡಿಲ್ಲವೆಂದು ಹೇಳಬೇಕು ಅಷ್ಟೆ.

ಶ್ರೀ ಎಸ್. ಗೋಪಾಲಗೌಡ.—ಭದ್ರಾವತಿಯಲ್ಲಿ ನಾನೇ ಕಣ್ಣಾರೆ ನೋಡಿದ್ದೇನೆ. ಮಳೆ ಬಂದರೆ ನೀರು ಸಲೀಸಾಗಿ ಮನೆಯ ಒಳಕ್ಕೆ ಬರುವಹಾಗಿರುವ ಬಾಗಿಲುಗಳು ಇರುವುದನ್ನು. ಬಹಳ ಹೆಚ್ಚಿನ ಹಣದಿಂದ—ಅದು ಕೇಂದ್ರಸರ್ಕಾರದವರ ಹಣವೇ ಆಗಿರಲಿ, ನಮ್ಮ ಸರ್ಕಾರದವರ ಹಣವೇ ಆಗಿರಲಿ ಅಂತೂ ನಮ್ಮ ದೇಶದ ಹಣ—ಈ ಮನೆಗಳನ್ನು ಕಟ್ಟಿದ್ದಾರೆ. ಆದ್ದರಿಂದ ಸ್ವಲ್ಪಮಟ್ಟಿಗೆ ಈ ಎಸ್ಟಿಮೇಟುಗಳನ್ನು ಪರಿಶೀಲನೆಮಾಡಬೇಕಾದ ಅಗತ್ಯವಿದೆ. ಏಕೆಂದರೆ, ಇದರಲ್ಲಿ ಒಂದು ಅಂಶವಿದೆ. ಹರಿಜನರಿಗೆ ಮನೆಗಳನ್ನು ಕಟ್ಟಿಸುವುದರಲ್ಲಿ, ಏನೋ gratis ಕೊಡುವುದು, ಸರ್ಕಾರ ಸುಮ್ಮನೆ ಕಟ್ಟಿಸಿಕೊಡುತ್ತದೆ ಎಂದು ಒಂದು ರೀತಿಯ ಭಾವನೆಯಿದೆ. ಸರ್ಕಾರವೇ ಕಟ್ಟಿಸಿಕೊಡುತ್ತಿದೆಯೆಂದರೂ, ಅದು ಯಾರೊಬ್ಬರ ಜೇಬಿನ ದುಡ್ಡಲ್ಲ. ಸಭೆಯ ಅನುಮತಿ ಪಡೆದುಕೊಡುತ್ತಾರೆ. ಆದರೆ ಭಾವನೆ ಏನಿದೆಯೆಂದರೆ,—ಕಟ್ಟಿ ಏಕೆ ಸುಮ್ಮನೆ ಕೊಡಬೇಕು, ಅದರಲ್ಲಿ ಒಂದು Margin of Profit ಇಟ್ಟುಕೊಂಡರೆ ಏನು ತಪ್ಪು ಎಂದು ಕಟ್ಟಿಸಿಕೊಡುವವರಿಗೆ ಇದೆ. ಹೀಗಾಗಿ ನಮ್ಮ ಹರಿಜನರಿಗೆ ಕಟ್ಟಿಸಿಕೊಟ್ಟಿರುವ ಮನೆಗಳನ್ನು ನೋಡಿದರೆ ವ್ಯಸನವಾಗುತ್ತದೆ; ಅವಕ್ಕೆ ಹಾಕಿರುವ ಬಾಗಿಲುಗಳು, ಕಿಟಕಿಗಳು ಕೆಲವು ಕಡೆ ಚಿಗುರಿವೆ!! ನಾನೇ ಹೋಗಿ ನೋಡಿದ್ದು ಇದು. ಯಾವ ರೀತಿಯ ಮರವನ್ನು ಹಾಕಿದ್ದರೋ ಗೊತ್ತಿಲ್ಲ. ಆದ್ದರಿಂದ ಮನೆಗಳನ್ನು ಕಟ್ಟಿಸಬೇಕಾದರೆ, ಅದು ಕಾಂಕ್ರೀಟಿನದೇ ಆಗಲಿ, ಹೆಂಚಿನದೇ ಆಗಲಿ ಸರಿಯಾದ ರೀತಿಯಲ್ಲಿ ಮಾಡಿಸಬೇಕು. ಏಕೆಂದರೆ, ಅದೂ ಸರ್ಕಾರದ ಹಣ. ಸರ್ಕಾರದ ಹಣ ಪೋಲಾಗದಂತೆ ಎಸ್ಟಿಮೇಟುಗಳನ್ನು ಸರಿಯಾಗಿ ಪರಿಶೀಲನೆಮಾಡಿ ನಾಲ್ಕಾರು ವರುಷಗಳು ಗಾಳಿಮಳೆ ತಡೆಯುವಂತೆ ಮಾಡಬೇಕು. ನಾನು ಒಂದು ಕಡೆ ನೋಡಿದ್ದೇನೆ. ಎರಡು ಮನೆಯ ಗೋಡೆಗಳು, ಒಂದು ಇನ್ನೊಂದರ ಮೇಲೆ ಬಿದ್ದಾಗ, ಇನ್ನೊಂದು ಮುಗುಚಿಕೊಂಡು ಎರಡೂ ಒಂದಕ್ಕೊಂದು ಮಾತಾಡುವ ಹಾಗೆ ಕೂತಿದ್ದವು. ಸರಿಮಾಡಿಸಬೇಕೆಂದರೆ, ಕಂಟ್ರಾಕ್ಟರುಗಳಿಗೆ ದುಡ್ಡು ಕೊಟ್ಟ ಮೇಲೆ ಏನುಮಾಡುವುದಕ್ಕಾಗುತ್ತದೆ ಎಂದು ಹೇಳುತ್ತಾರೆ. ಈ ರೀತಿಯೆಲ್ಲಾ ಆಗದಂತೆ ಮಾಡಬೇಕೆಂದು ನಾನು ಮಾನ್ಯಸಚಿವರನ್ನು ಕೇಳಿಕೊಳ್ಳುತ್ತೇನೆ.

*ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ, ನಾಲ್ಕನೆಯ ಡಿಮ್ಯಾಂಡಿನ ವಿಚಾರದಲ್ಲಿ ಒಂದೇ ಒಂದು ವಿಚಾರ ಹೇಳಿ ಮುಗಿಸುತ್ತೇನೆ. ಈ ಡಿಮ್ಯಾಂಡು 35,000 ರೂಪಾಯಿಗಳಿಗೆ ಇದೆ. ಅರಮನೆಗೆ ಸೇರಿದ wireless sets ಗಳಿಗಾಗಿ ಎಲೆಕ್ಟ್ರಿಕಲ್ ಡಿಪಾರ್ಟ್‌ಮೆಂಟಿನವರು ಕೊಟ್ಟಿರುವ ಬಿಲ್ಲುಗಳಿಗಾಗಿ ಈ ಹಣ ಬೇಕಾಗಿದೆಯೆಂದು ಹೇಳಿದೆ. ಹಿಂದೆ ಈ ವೈರ್‌ಲೆಸ್ ಸೆಟ್ಟುಗಳನ್ನು ಇಟ್ಟಿದ್ದ ಉದ್ದೇಶ, ಮಹಾರಾಜರು ಬೇಟೆಯಾಡುವುದಕ್ಕೆ ಹೋಗುವಾಗ ಬೇಟೆ ಮೃಗ ಸಿಕ್ಕುತ್ತದೆಯೋ ಎಂಬುದನ್ನು ಗೊತ್ತುಮಾಡುವುದಕ್ಕೆ. ಅದು ಅರಮನೆಗೆ ಸೇರಿದ ಇಲಾಖೆಯೇ ಆಗಿತ್ತು. ಈ ಇಲಾಖೆಯನ್ನು ಜವಾಬ್ದಾರಿಯ ಸರ್ಕಾರ ಮೈಸೂರು ದೇಶಕ್ಕೆ ಬಂದಮೇಲೆ ಸರ್ಕಾರಕ್ಕೆ ಸೇರಿದೆ. ಆದ್ದರಿಂದ, ನ್ಯಾಯವಾಗಿ ಸಂಸ್ಥಾನದ ಖಜಾನೆಯಿಂದ ಈ ಹಣವನ್ನು ಕೊಡುವುದು ನ್ಯಾಯವಲ್ಲ. ಮಹಾರಾಜರು ತಮ್ಮ ಪ್ರೀವಿಪರ್ಸ್‌ನಿಂದ ಕೊಡಬೇಕಾದದ್ದು ಯುಕ್ತ. ನನಗೆ ತಿಳಿದಮಟ್ಟಿಗೆ ಇದರ ವಿಷಯದಲ್ಲಿ ಒಂದು ಸರ್ಕಾರಿ ಆರ್ಡರ್ ಆಗಿದೆಯೆಂದು ಗೊತ್ತಾಗಿದೆ. ಈ ಆರ್ಡರನ್ನು ಬದಲಾವಣೆ ಮಾಡಬೇಕೆಂದು ನನ್ನ ಸೂಚನೆ.

Sri V. M. MASCARENHAS (St. John's Hill).—I support the Appropriation Bill, Sir, and I congratulate the Government on Demand No. 7 for having appointed a Non-Resident Dealers' Circle at Bangalore, for assessment and recovery of Sales-tax from Non-resident dealers. I only hope that this Circle will do good work and we will at the end of the session hear from them the actual assessment made for the six months they have been in office. I am sure the Government will take cognizance of this suggestion and will supply the members the actual assessment made by this Circle for the year ending 31st day of March 1955.

Coming to Demand No. 12, to me it is not very clear why extra sum was needed. Everybody knew that the Budget Session would meet in this month and in the previous month. I think we knew last year that we would meet in the months of February and March 1955 and how a shortage was then found out at the beginning of the year is not very clear to me.

And then I come to Demand No. 29. My friend Sri Gopala Gowda has spoken pretty much about the rates shown. I only want to point out that there is something radically wrong somewhere; if you want to estimate for concreting a mile costing 90,000 rupees, I do not know whether the figures have been correctly furnished or not. Concreting four miles in Hassan Division, it is estimated to cost Rs. 3,88,000 and two miles in Mysore Division, the estimate is Rs. 4,45,000. As far as I know, the price of materials is going down and I should have thought that in the year 1955, it would be possible to concrete the road at Rs. 55,000 a mile. And it shocks

me to find here the average cost to concrete a road as Rs. 90,000 a mile. I would be very glad if the Hon'ble Finance Minister pulls up the department concerned and asks them whether costs go up or whether costs go down as price of materials falls. That is all Sir.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಈ ಮಸೂದೆಯ ವಿಷಯದಲ್ಲಿ ಮಾತನಾಡುತ್ತಾ, ಒಂದೆರಡು ಸಲಹೆಗಳನ್ನು ಕೊಡಬೇಕೆಂದು ಆಸೆಪಡುತ್ತೇನೆ. ಎಂಟನೆಯ ಡಿಮ್ಯಾಂಡಿನಲ್ಲಿ ಸಣ್ಣ ಸಣ್ಣ ಕೆರೆಗಳ ರಿಪೇರಿಗಾಗಿ, ತೂಬುಗಳ ರಿಪೇರಿಗಾಗಿ ದುಡ್ಡನ್ನು ಕೇಳಿದ್ದೀರಿ. ಸಣ್ಣಸಣ್ಣ ಕೆರೆಗಳ ರಿಪೇರಿಗಾಗಿ ಹಾಗೂ ತೂಬುಗಳ ರಿಪೇರಿಗಾಗಿ ವರ್ಷದ ಪ್ರಾರಂಭದಲ್ಲೇ ಎಷ್ಟು ಕೆರೆಗಳನ್ನು ರಿಪೇರಿಮಾಡಬೇಕು, ಯಾವಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮಾಡಬೇಕು ಎಂಬುದರ ಬಗ್ಗೆ ಒಂದು ನಿರ್ದಿಷ್ಟವಾದ plan, ಸರ್ಕಾರದವರ ಮುಂದೆ, ಇಲಾಖೆಯವರ ಮುಂದೆ ಇದ್ದರೆ ಒಳ್ಳೆಯದು. ಆರೀತಿ ಮಾಡದೆ ವರ್ಷದ ಅಂತ್ಯದಲ್ಲಿ ಹೀಗೆ ದುಡ್ಡನ್ನು ಕೇಳಿ ಹಣವನ್ನು ಲ್ಯಾಪ್ಸ್ ಮಾಡುವಂತೆ ಮಾಡುವುದು ಸೂಕ್ತವಲ್ಲ.

ಇನ್ನು ತೂಬುಗಳ ರಿಪೇರಿಯ ವಿಷಯದಲ್ಲಿ ತೂಬುಗಳನ್ನು ರಿಪೇರಿ ಮಾಡಿದ್ದೂ ಮಾಡಿದ್ದೇ! ಪದೇ ಪದೇ ಮಾಡಿದ್ದನ್ನೇ ಮಾಡುತ್ತಲಿರುತ್ತಾರೆ. ಅದೇನು ಸಿಮೆಂಟಿನಲ್ಲೇ ಬಲ ಕಡಿಮೆಯಾಗಿದೆಯೋ ಅಥವಾ ನಳ್ಳಿ ವಗೈರೆ ಸೇರಿಕೊಂಡು ಸಿಮೆಂಟನ್ನೇ ಕೊರೆಯುವ ಶಕ್ತಿ ನಳ್ಳಿಗಳಿಗೆ ಬಂದಿದೆಯೋ ಗೊತ್ತಿಲ್ಲ! ಆದ್ದರಿಂದ ತೂಬುಗಳನ್ನು ರಿಪೇರಿಮಾಡಿಸುವ ಕೆಲಸವನ್ನು ಸರ್ಕಾರವೇ ವಹಿಸಿಕೊಂಡರೆ ಒಳ್ಳೆಯದು. ಈ ಬಗ್ಗೆ ಒಂದು ಸರ್ಕಾರಿ ಆರ್ಡರ್ ಮಾಡಬೇಕೆಂದು ಹೇಳುತ್ತೇನೆ.

ಹತ್ತೊಂಬತ್ತನೆಯ ಡಿಮ್ಯಾಂಡ್ ವಿಚಾರದಲ್ಲಿ, ಆಯುರ್ವೇದ ಯುನಾನಿ ಆಸ್ಪತ್ರೆಗಳ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಕೊಡಬೇಕಾದ ಬಾಕಿಗಾಗಿ ಎಂದು ಒಂದು ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಮೊನ್ನೆ ಈ ಬಗ್ಗೆ ಬಂದಿದ್ದ ಒಂದು ಖೋತಾ ನಿರ್ಣಯದ ವಿಷಯದಲ್ಲಿ ಮಾತನಾಡಿದ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮೊಟ್ಟಮೊದಲು ಆಯುರ್ವೇದ ಯುನಾನಿ ಪಂಡಿತರುಗಳನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಅವರಿಗೆ ಸ್ವಂತವಾಗಿ ಔಷಧಿಗಳನ್ನು ತಯಾರುಮಾಡುವ ಅನುಭವವುಳ್ಳ ಜನರನ್ನು ನೇಮಿಸಿಕೊಳ್ಳಬಹುದು ಎಂಬ ನಿರೀಕ್ಷಣೆಯಿತ್ತು. ಆದರೆ, ಅಯುರ್ವೇದ ಕಾಲೇಜಿನಿಂದ ಬಂದ ವಿದ್ಯಾರ್ಥಿಗಳನ್ನು ನೋಡುವುದಾದರೆ, ಅವರಿಗೆಯಾರಿಗೂ ಸ್ವಂತವಾಗಿ ಔಷಧವನ್ನು ತಯಾರು ಮಾಡತಕ್ಕ ಶಕ್ತಿಯಿಲ್ಲವೆಂದು ಹೇಳಬಹುದು. ಔಷಧವನ್ನು ತಯಾರು ಮಾಡುವುದಕ್ಕೇ ಬರುವುದಿಲ್ಲ. ಅಲ್ಪಸ್ವಲ್ಪದ ಔಷಧಿಗಳನ್ನು ಕೊಡುವುದಕ್ಕಾಗಿ ಅಂಗಡಿಗೆ ಹೋಗಿ ಕೊಂಡುಕೊಂಡು ಬರುತ್ತಾರೆ. ಕೆಲವು ಈ ಆಯುರ್ವೇದ ಯುನಾನಿ ಕಾಲೇಜಿನ ಪಂಡಿತರುಗಳು ಇಂಜಕ್ಷನ್‌ಗಳನ್ನೂ, allopathic drugsಗಳನ್ನೂ ಸಹ ರೋಗಿಗಳಿಗೆ ಕೊಡುತ್ತಿದ್ದಾರೆ.

ಈ ದೃಷ್ಟಿಯಿಂದ ನೋಡಿದರೆ, ಆಯುರ್ವೇದ ಕಾಲೇಜಿನಲ್ಲಿ ತಯಾರಾಗಿಗತಕ್ಕ ಈ ವಿದ್ಯಾರ್ಥಿಗಳಿಗೆ ಸೌಲಭ್ಯಗಳು, ಅವರಿಗೆ ಕೊಟ್ಟಿರತಕ್ಕ ಶಿಕ್ಷಣ ಸಾಕಾದಷ್ಟಿಲ್ಲವೆಂದು ಹೇಳಬಹುದು. ಇನ್ನು ಮೇಲಾದರೂ ಅವರು ಔಷಧಗಳನ್ನು ತಯಾರು ಮಾಡುವುದಕ್ಕೆ ಬೇಕಾದ ಶಕ್ತಿ ಸಂಪಾದಿಸುವಂಥ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು.

ಎರಡನೆಯದಾಗಿ ಅವರು ಶಿಕ್ಷಣವನ್ನು ಪೂರೈಸಿದ ಕೂಡಲೆ, allopathic system ನಲ್ಲಿ ಯಾವರೀತಿ practical trainingನ್ನು ಕೊಡುತ್ತಾರೋ...... ಅವರು ಇಲ್ಲಿ ಶಿಕ್ಷಣ ಪಡೆಯಲೇಬೇಕೆಂಬುದನ್ನು ತಾವು ನಿರ್ಧಾರಮಾಡಬೇಕು. ಹಾಗೆ ಮಾಡದೆ ಇದ್ದರೆ ಅವರು ಅಷ್ಟಾಗಿ ಏನೂ ಪ್ರಯೋಜನಕಾರಿಯಾಗಿರುವುದಿಲ್ಲ. ಈಗಾಗಲೇ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದಹಾಗೆ ಆ ಆಯುರ್ವೇದ ಕಾಲೇಜಿನಿಂದ ಶಿಕ್ಷಣಪಡೆದು ಬಂದಿರತಕ್ಕಂಥ ವೈದ್ಯರುಗಳಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನ ಬರುವಂತೆ ತಾವು ಮಾಡಬೇಕು.

ಇನ್ನು ಇವರನ್ನು ನೇಮಕ ಮಾಡಿಕೊಳ್ಳತಕ್ಕಂಥ ವಿಷಯ ತೀರಾ ಆವಶ್ಯಕವಾದ್ದರಿಂದ ಒಂದೆರಡು ಮುಖ್ಯ ವಿಷಯಗಳನ್ನು ಮಾತ್ರ ತಿಳಿಸಿಬಿಡುತ್ತೇನೆ. ಇವರ ನೇಮಕದ ವಿಷಯವನ್ನು ಆ P.S.C. ಗಾದರೂ ವಹಿಸಿಬಿಡಿ. ಇಲ್ಲವೇ ಹೆಚ್ಚು ವೈದ್ಯ ಪರಿಶ್ರಮವಿರುವಂಥವರ ಒಂದು ಸಮಿತಿಯನ್ನು ರಚಿಸಿ ಅವರ ಸಲಹೆಯನ್ನಾದರೂ ಪಡೆದು, ಆ ಪ್ರಕಾರವಾದರೂ ಇವರನ್ನು ನೇಮಕ ಮಾಡಿಕೊಳ್ಳುವಂತೆ ಮಾಡಿ. ಆದರೆ ಈ ನೇಮಕದ ಕೆಲಸ ಮಾತ್ರ ಆ ಜಿಲ್ಲಾ ಬೋರ್ಡುಗಳಿಗೆ ಬಿಡುವುದು ಸಾಧುವಲ್ಲವೆಂದು ಹೇಳಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಈ ಮಸೂದೆಯ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಆದರೆ ಆ ಭಾಷಣಗಳಲ್ಲಿ ಬಹಳ ಭಾಗ ಆಡಳಿತಕ್ಕೆ ಅಂದರೆ ಅಡ್ಮಿನಿಸ್ಟ್ರೇಟಿವ್ ವಿಷಯಗಳಿಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಆದರೆ, ಅವರು ಕೊಟ್ಟಿರತಕ್ಕಂಥ ಎಲ್ಲಾ ಸಲಹೆಗಳನ್ನೂ ನಾನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಅವುಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಪ್ರಯತ್ನಮಾಡುತ್ತಾರೆ. ಆದಕಾರಣ ಈ ವಿಚಾರದಲ್ಲಿ ಸರ್ಕಾರದವರು ಕೈಹಾಕಬೇಕೇ ವಿನಾ ಇದಕ್ಕೆಲ್ಲಾ ಉತ್ತರ ಕೊಡತಕ್ಕಂಥಾದ್ದಾಗಲಿ ಅಥವಾ ಇದನ್ನು ಲಂಬಿಸಿಕೊಂಡು ಚರ್ಚೆಮಾಡುತ್ತಾ ಹೋಗುವುದಾಗಲಿ ಸರಿಯಾದುದಲ್ಲ. ಆದುದರಿಂದ ನಾನೀಗ ಉತ್ತರಕೊಡತಕ್ಕಂಥ ವಿಷಯಗಳೇನಿದ್ದರೂ ಒಂದು ಪಾಲಿಸಿಗೆ ಸಂಬಂಧಪಟ್ಟವುಗಳೂ ಮತ್ತು ಇನ್ನೂ ಕೆಲವು ಮುಖ್ಯ ವಿಷಯಗಳಿಗೆ ಸಂಬಂಧಪಟ್ಟವುಗಳೂ ಆಗಿರುತ್ತವೆ. ಇಂಥ ವಿಚಾರಗಳಿಗೆ ಮಾತ್ರ ನಾನೀಗ ಉತ್ತರ ಕೊಡಲು ಪ್ರಯತ್ನಮಾಡುತ್ತೇನೆ.

ಲೋ-ಇನ್‌ಕಂ ಗ್ರೂಪಿನವರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಒಂದು ವ್ಯವಸ್ಥೆ ಆಗಿದೆ. ಯೋಜನೆಯನ್ನು ಇಂಡಿಯಾ ಸರ್ಕಾರದವರೂ ಮತ್ತು ಸಂಸ್ಥಾನ ಸರ್ಕಾರದವರೂ ಸಹಕರಿಸಿ ಕೆಲಸ ಮಾಡಿ, ಇದನ್ನು ಕಾರ್ಯರೂಪಕ್ಕೆ ತರಬೇಕಾಗಿದೆ. ಇದಕ್ಕಾಗಿ ಇಂಡಿಯಾ ಸರ್ಕಾರದವರು ಮೈಸೂರು ಸರ್ಕಾರದವರಿಗೆ ಒಂದು ಕೋಟಿ ರೂಪಾಯಿಗಳ ಸಾಲವನ್ನು ಕೊಡಲು ಸಿದ್ಧವಾಗಿದ್ದಾರೆ. ಈ ವರ್ಷ 10 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈ ರೀತಿ ಹಣ ಕೊಡತಕ್ಕಂಥಾದ್ದು ಮತ್ತು ತೆಗೆದುಕೊಳ್ಳುವುದರ ಬಗ್ಗೆ ಒಂದು ಒಪ್ಪಂದವಾಗಿದ್ದರೂ, ಈ ಮನೆಗಳನ್ನು ಎಲ್ಲಿ ಕಟ್ಟಬೇಕು, ಎಷ್ಟೆಷ್ಟು ಮನೆಗಳನ್ನು ಕಟ್ಟಬೇಕು ಎಂಬುದರ ಬಗ್ಗೆ ನಾವು ಒಂದು ಪ್ಲಾನನ್ನು ಅಥವಾ ಸ್ಕೀಮನ್ನು ತಯಾರುಮಾಡಬೇಕು. ಹಾಗೆ ತಯಾರುಮಾಡಿದ

(ಶ್ರೀ ಕೆ. ಹನುಮಂತಯ್ಯ.)

ಪ್ಲಾನನ್ನು ಇಂಡಿಯಾ ಸರ್ಕಾರದವರಿಗೆ ಅವರ ಅನುಮತಿಗಾಗಿ ಕಳುಹಿಸಿಕೊಡಬೇಕು. ಅವರು ಅದನ್ನು ಒಪ್ಪಬೇಕು. ಅನಂತರ ನಾವು ಅದನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು. ಆದರೆ ಇಂಡಿಯಾ ಸರ್ಕಾರದವರು ಹಣವನ್ನೊದಗಿಸಿದ್ದಾರೆಂದ ಮಾತ್ರಕ್ಕೇ ಈ ವ್ಯವಹಾರಗಳನ್ನೆಲ್ಲಾ ನಡೆಸುವುದಕ್ಕಾಗುವುದಿಲ್ಲ. ನನಗೂ ಕೂಡ, ಈಗ ತಮಗೆ ಅನ್ನಿಸಿರುವ ಹಾಗೆ, ಎಷ್ಟೋ ಸಲ ಮನಸ್ಸಿಗೆ ಅನ್ನಿಸಿದೆ—ಇದಕ್ಕಾಗಿ ನಾನು ಅವರಲ್ಲಿ ಅನೇಕ ಸಲ ವಾದಮಾಡಿದ್ದೇನೆ. ಅವರು ಹಾಕತಕ್ಕಂಥ ಪ್ರತಿಯೊಂದು ಯೋಜನೆಯ ಬಗ್ಗೆಯೂ ನಾವು ಇಲ್ಲಿಂದ ಪ್ಲಾನುಗಳನ್ನು ತಯಾರಿಸಿ ಪ್ರತಿಯೊಂದನ್ನೂ ಡೆಲ್ಲಿಗೆ ಕಳುಹಿಸಿ ಅವರ ಒಪ್ಪಿಗೆ ಪಡೆದೇ ಈ ಕೆಲಸಗಳನ್ನು ಮಾಡಬೇಕೆಂದರೆ ಬಹಳ ನಿಧಾನವಾಗುತ್ತದೆ. ಆದ್ದರಿಂದ ಅವರು ಉದ್ದೇಶವನ್ನು ಮಾತ್ರ ಸಂಸ್ಥಾನ ಸರ್ಕಾರಗಳಿಗೆ ತಿಳಿಸಿದರೆ ಸಾಕು, ಅವುಗಳನ್ನು ಇಲ್ಲಿಯೇ ಯಾವ ರೀತಿ ಮಾಡಬೇಕೆಂಬುದನ್ನು ನಿರ್ಧರಿಸಿ, ಕಾರ್ಯರೂಪಕ್ಕೆ ತರಲು ಸಂಸ್ಥಾನದ ಸರ್ಕಾರಕ್ಕೆ ಅವಕಾಶ ಇರಬೇಕಾದ್ದು ತುಂಬ ಅಗತ್ಯ ಎಂದು ಹೇಳಿ ನಾನು ಎಷ್ಟೋ ವೇಳೆ ಅವರಲ್ಲಿ ವಾದ ಮಾಡಿದ್ದೇನೆ. ಈಗ ಈ 10 ಲಕ್ಷ ರೂಪಾಯಿಗಳನ್ನು ಉಪಯೋಗಿಸುವುದಕ್ಕೆ ಅವಕಾಶವಾಗದಿದ್ದರೆ ಅದಕ್ಕೆ ಮೈಸೂರು ಸರ್ಕಾರದ ಕಾಲವಿಳಂಬ ನೀತಿಯೇನೂ ಕಾರಣವಲ್ಲ.

The State Government prepared a scheme for the construction of 5;000 houses in the State at a total cost of Rs. 2 crores. The Government of India in their communication dated 17th instant approved of the contruction of 1,800 houses at a cost of Rs. 90 lakhs in the Five-Year Plan period.

ಎಂಬ ಅಂಶವನ್ನು ನಾನೀಗ ತಮ್ಮೆಲ್ಲರ ಅವಗಾಹನೆಗೆ ತಂದಿದ್ದೇನೆ. ಈಗತಾನೆ 1,800 ಮನೆಗಳನ್ನು ಕಟ್ಟುವ ಯೋಜನೆಗೆ ಇಂಡಿಯಾ ಸರ್ಕಾರದವರ ಒಪ್ಪಿಗೆ ದೊರೆತಿದೆ. ಈ ಕಾರ್ಯಕ್ರಮವನ್ನು ನಾವೀಗ ಕೈಗೊಳ್ಳಬೇಕಾಗಿದೆ. ಆದರೆ ನಾವೀಗ ಈ ಹತ್ತು ಲಕ್ಷ ರೂಪಾಯಿಗಳನ್ನು ಬಳಸುವುದು ನಿಧಾನವಾದರೆ ಈ ಮೊಬಲಗೇನೂ ಲ್ಯಾಪ್ಸ್ ಆಗುವುದಿಲ್ಲ. ಇದು ನಮ್ಮ ಬಡ್ಜೆಟ್ ರೆಕರಿಂಗ್ ಎಕ್ಸ್‌ಪೆಂಡಿಚರ್‌ನ ಹಾಗೆ ಲ್ಯಾಪ್ಸ್ ಆಗಿಹೋಗುತ್ತದೆಂಬ ಭಯವು ಯಾರಿಗೂ ಇರಬೇಕಾಗಿಲ್ಲ. ಈ ಮನೆಗಳ ನಿರ್ಮಾಣ ಕಾರ್ಯಕ್ಕಾಗಿ ಒಂದು ಹೌಸಿಂಗ್ ಬೋರ್ಡ್ ಎಂಬುದನ್ನು ಹೊಸ ಶಾಸನದ ಪ್ರಕಾರದ ನಿರ್ಮಾಣ ಮಾಡಬೇಕಾಗಿದೆ. ಆದರೆ ಅದು ಹಾಗೆ ನಿರ್ಮಿತವಾಗಿ ಕೆಲಸವನ್ನು ಕೈಗೊಳ್ಳಬೇಕಾದರೆ ಈ ಗೃಹ ನಿರ್ಮಾಣಕಾರ್ಯ ನಿಧಾನವಾಗಬಹುದು. ಈ ಕಾರಣದಿಂದ ಈಗ ಸದ್ಯಕ್ಕೆ ಈ ಕಾರ್ಯವನ್ನು ಈಗ ಹಾಲಿ ಇರುವ ಲೇಬರ್ ಹೌಸಿಂಗ್ ಕಾರ್ಪೊರೇಷನ್ನಿಗೆ ತಾತ್ಕಾಲಿಕವಾಗಿ ವಹಿಸಿಕೊಡಲಾಗುತ್ತದೆ. ಆದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಈ ಕೆಲಸವನ್ನು ಸ್ಟೇಟ್ ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಸೊಸೈಟಿಯವರಿಗೆ ಏತಕ್ಕೆ ಕೊಡಬಾರದು ಎಂದು ಪ್ರಸ್ತಾಪಿಸಿದ್ದಾರೆ.

Sri S. SRINIVASA IYENGAR.—My point was about the Provincial Housing Corporation being granted the loan. . .

Sri K. HANUMANTHAIYA.—These are details. I am not able to say just now to whom we will be able to lend this money.

Sri S. SRINIVASA IYENGAR.—But you will consider.

Sri K. HANUMANTHAIYA.—Yes, we will consider at the appropriate time.

ಇನ್ನು ಈ ಪೆನ್ಷನ್‌ಗಳ ವಿಚಾರವಾಗಿ ಮಾತನಾಡುತ್ತ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಮದ್ರಾಸ್ ಸರ್ಕಾರದವರು ಕೊಡುತ್ತಿದ್ದಾರೆಯೋ ಎಂದು ಕೇಳಿದರು. ಆಂಧ್ರ ಆಕ್ಟಿನ 7ನೆಯ ಷೆಡ್ಯೂಲ್ ಪ್ರಕಾರ ಈ ಪೆನ್ಷನ್‌ಗಳನ್ನು ಅವರು ಕೊಡಲೇಬೇಕಾಗಿದೆ. ಆದರೆ, ಈಗ ಈ ಪ್ರಶ್ನೆಯನ್ನು ಮೂರು ಸರ್ಕಾರಗಳೂ ಸೇರಿ ಬಗೆಹರಿಸಬೇಕಾಗಿದೆ. ಈ ಇಂಟರ್ ಸ್ಟೇಟ್ಸ್‌ಗಳ ಫೈನಾನ್ಷಿಯಲ್ ಇಂಟಿಗ್ರೇಷನ್ ವಿಷಯ ಇನ್ನೂ ಆಗಿಲ್ಲ. ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೆಲ್ಲರೂ ಒಂದು ಕಡೆ ಸೇರಿ ಸಮಾಲೋಚನೆ ಮಾಡಿ ಇದನ್ನು ಮಾಡಬೇಕಾಗಿದೆ; ಮಾಡೋಣ. ಇದು ಸರ್ಕಾರದ ಕರ್ತವ್ಯ. ಆದರೆ ಇದಿನ್ನೂ ಆಗಬೇಕು.

ಇನ್ನು ವಿಲೇಜ್ ಡೆವಲಪ್‌ಮೆಂಟ್ ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ.

The Village Road Development Co-operative scheme is a Scheme sponsored by the Government of India under which the Central Government gave an assistance of one-third of the expenditure on road works undertaken in the State on the undermentioned conditions. The balance of the cost of two-thirds will be met by the State Government, local bodies and the villages concerned. The regular annual maintenance of the roads by the local bodies is assured for a period of ten years after the completion of the roads. The reason why it was taken up only in Hassan District and not in other Districts is, that the Government suggested that the scheme should be taken up in one district after another. Hassan District has been selected first. The other districts will follow. Proposals are received in respect of 7 more districts and they are under consideration.

ಶ್ರೀಮಾನ್ ಪಟ್ಟಸ್ವಾಮಿಯವರು ಅರಮನೆಯ ಸೌಲಭ್ಯಕ್ಕಾಗಿ ಕೊಟ್ಟಿರುವ ವೈರ್‌ಲೆಸ್ ಸೆಟ್ಟಿನ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ಅವರು ಹೇಳಿದ ಹಾಗೆ ಅದನ್ನು ಬಂಡೀಪುರದಲ್ಲಿಡಲಾಗಿದೆ. ಇದನ್ನು ಕೇವಲ ಬೇಟೆಯ ಪ್ರಚಾರ ಕಾಲದಲ್ಲಿ ಉಪಯೋಗಿಸಲಾಗುತ್ತಿದೆ. ಕೇವಲ ಈ ಒಂದು ಕಾರ್ಯಕ್ಕಾಗಿ ಇಷ್ಟೊಂದು ಹಣ ವೆಚ್ಚವಾಗುತ್ತಿದೆಯಲ್ಲಾ ಎಂದು ನನಗೂ ಕೂಡ ಎಷ್ಟೋ ಸಲ ಅನ್ನಿಸಿದೆ. ಹಿಂದೆ ಇದ್ದಂಥ ಶ್ರೀಮನ್ ಮಹಾರಾಜರವರಿಗೂ ಮತ್ತು ಇಂಡಿಯಾ ಸರ್ಕಾರದವರಿಗೂ ಈ ಬಗ್ಗೆ ಒಂದು

ಒಪ್ಪಂದವಾಗಿತ್ತು. ಆ ಒಪ್ಪಂದದ ಪ್ರಕಾರ ಈಗ ನಮ್ಮ ಸರ್ಕಾರ ಆ ಹಣವನ್ನು ಕೊಡಬೇಕಾಗಿದೆ. ಆದರೆ ಇದನ್ನು ಮುಂದೆ ಉಪಯೋಗಿಸಿಕೊಳ್ಳುವುದೇ ಅಥವಾ ಬಿಟ್ಟು ಬಿಡುವುದೇ ಅನ್ನತಕ್ಕಂಥ ವಿಚಾರವನ್ನು ಶ್ರೀಮನ್ಮಹಾರಾಜರವರ ಇಷ್ಟಕ್ಕೆ ಬಿಟ್ಟು ಬಿಡುವುದು ಸೂಕ್ತವೆಂದು ನನಗೆ ಕಾಣುತ್ತಿದೆ.

Sri K. PUTTASWAMY.—Just a minute's interruption. Long after the agreement, the Government have passed an Order giving certain concessions. In that Order, it is one of the items.

ಶ್ರೀ ಕೆ. ಹನುಮಂತಯ್ಯ.—I agree. ಆ ಗೌರ್ನಮೆಂಟ್ ಆರ್ಡರಿನಲ್ಲೇ ಈ ಸೌಲಭ್ಯಗಳನ್ನು ಆ ಒಪ್ಪಂದಕ್ಕನುಗುಣವಾಗಿ ಕೊಡಲಾಗಿತ್ತೆಂದು ಹೇಳಲಾಗಿದೆ. ಆ ಗೌರ್ನಮೆಂಟ್ ಆರ್ಡರನ್ನು ನೋಡಿಕೊಂಡು ಇದು ಆರ್ಡರಿಗೆ ಅನುಗುಣವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿ ಮಾಡಬೇಕಾಗಿದೆ. Unilaterally we cannot take steps. That is the real difficulty. That is why I said it is left to His Highness' discretion to make use of such a big sum annually or not.

ಇನ್ನು ಕೃಷ್ಣರಾಜಸಾಗರದ ಹೋಟೆಲಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದುವರೆಗೂ ಆ ಕಟ್ಟಡಕ್ಕೆ 1,800 ರೂಪಾಯಿಗಳ ಬಾಡಿಗೆಯನ್ನು ನಾವೇ ಹಾಕುತ್ತಿದ್ದೆವು. ಆದರೆ ಹಾಗೆ ನಾವೇಕೆ ಹಾಕಬೇಕು, ಆ ಬಾಡಿಗೆಯನ್ನು ಅದರ ಉತ್ಪತ್ತಿಯಲ್ಲೇ ತೆಗೆಯಬೇಕೆಂಬುದಾಗಿ ಈಚೆಗೆ ತೀರ್ಮಾನಮಾಡಿದ್ದೇವೆ. ಕಾರಣ ಇದರ ವೆಚ್ಚಗಳು ಕಡಮೆಯಾಗಿದ್ದು ಇದರಿಂದ ಬರತಕ್ಕಂಥ ಉತ್ಪತ್ತಿ ಬಹಳವೆಂಬುದಾಗಿ ಕಾಣಬರುತ್ತಿತ್ತು. ಆದರೆ ಆಗ ಈ ಬಾಡಿಗೆ ಅದರಲ್ಲಿ ಸೇರಿರಲಿಲ್ಲ, ಇನ್ನುಮೇಲೆ ನಾವು ವ್ಯಾಪಾರ ಸಂಸ್ಥೆಗಳನ್ನೆಲ್ಲಾ ವ್ಯಾಪಾರಸ್ಥರು ಹೇಗೆ ನಡೆಸುತ್ತಿದ್ದಾರೋ ಹಾಗೆಯೇ ನಡೆಸಬೇಕೆಂದೂ, ವಾಸ್ತವಾಂಶಗಳನ್ನೆಲ್ಲಾ ಕೈಬಿಟ್ಟು ಸುಮ್ಮನೆ ಹೆಚ್ಚು ಲಾಭ ಬರುತ್ತಿರುವ ಹಾಗೆ ತೋರಿಸುವುದು ಸರಿಯಲ್ಲವೆಂದೂ ತೀರ್ಮಾನಕ್ಕೆ ಬಂದಿದ್ದೇವೆ. ಅದಕ್ಕಾಗಿ ಈಗ ನಮ್ಮ ವ್ಯಾಪಾರೋದ್ಯಮಗಳ ಲೆಕ್ಕ ಪತ್ರಗಳೆಲ್ಲವನ್ನೂ ಖಾಸಗಿ ವ್ಯಾಪಾರಸ್ಥರು ಯಾವ ರೀತಿ ಇಡುತ್ತಾರೋ ಅದೇ ರೀತಿಯಾಗಿ ಇಡಬೇಕೆಂಬ ನಿರ್ಧಾರಕ್ಕೆ ಸರ್ಕಾರ ಬಂದಿದೆ. ಈ ಹಿಂದೆ ಈ ಕೈಗಾರಿಕಾ ಸಂಸ್ಥೆಗಳ ಆಡಳಿತವನ್ನು ಪರಿಶೀಲಿಸಲು ಇಂಡಿಯಾ ಸರ್ಕಾರದ ಪರವಾಗಿ ಶ್ರೀ ಕಸ್ತೂರ್‌ಭಾಯ್‌ಲಾಲ್‌ಭಾಯ್ ಅನ್ನತಕ್ಕವರು ಬಂದಿದ್ದರು. ಆಗ ಅವರು ನಮ್ಮ ಕೈಗಾರಿಕಾ ಸಂಸ್ಥೆಗಳ ಆಡಳಿತವನ್ನೆಲ್ಲಾ ಪರಿಶೀಲಿಸಿ ಆ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರೂ ಸಹ ಇದೇ ವಿಚಾರಗಳನ್ನು ಅವರ ವರದಿಯಲ್ಲಿ ಸೂಚಿಸಿದ್ದಾರೆ. ಆದಕಾರಣ ನಾವೀಗ ನಮ್ಮ ಲೆಕ್ಕಪತ್ರಗಳನ್ನೆಲ್ಲಾ ಆ ಕ್ರಮದಲ್ಲೇ ಇಡಲು ಮತ್ತು ಅದನ್ನು ಕಾರ್ಯರೂಪಕ್ಕೆ ತರಲು ತೀರ್ಮಾನಿಸಿದ್ದೇವೆ. ಇದೇ ಸಂದರ್ಭದಲ್ಲಿ ಮಧ್ಯಮ ವರ್ಗದವರಿಗೆ ಅನುಕೂಲವಾಗತಕ್ಕಂಥ ಒಂದು ರೆಸ್ಟೋರೆಂಟ್ ಹೋಟಲನ್ನು ಕಟ್ಟಿಸಬೇಕೆಂದು ಹೇಳಿದ್ದಾರೆ. ಅದನ್ನು ಆಲೋಚನೆಮಾಡಲಾಗುವುದು.

ಇನ್ನು ಈ itumen ಪ್ಲಾಂಟನ್ನು ಇಷ್ಟೊಂದು ಹಣ ಖರ್ಚುಮಾಡಿ ಅದನ್ನು ಬೇರೆ ಕಡೆಗೆ ವರ್ಗಾಯಿಸತಕ್ಕಂಥ ಆವಶ್ಯಕತೆಯಾದರೂ ಏನಿತ್ತು ಎಂದು ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ಅವರು ಕೇಳಿದರು. ಈಗ ಇದು ಐ.ಟಿ.ಎಲ್. ಇಂಡಸ್ಟ್ರಿ ನಡೆಯುತ್ತಿರುವುದರ ಹತ್ತಿರ ಇದೆ. ಈ ಟಾರನ್ನು ಕಾಯಿಸಿ, ಅದನ್ನು ಬೇರ್ಪಡಿಸಿ, ರಸ್ತೆಗೆ ಅನುಕೂಲವಾಗುವ ಹಾಗೆ ಮಾಡತಕ್ಕಂಥ ಕಾರ್ಯಕ್ರಮ ಇದರದು. ಇದು ಅಲ್ಲಿ ಮಾಡುತ್ತಿರುವ ಕೆಲಸದಿಂದುಂಟಾಗುವ ಹೊಗೆಯಿಂದ ಐ.ಟಿ.ಎಲ್. ನವರಿಗೆ ಔಷಧಿ ವಗೈರೆಗಳನ್ನು ತಯಾರಿಸಲು ತೊಂದರೆಯಾಗುತ್ತಿದೆಯೆಂದು ಇತ್ತೀಚೆಗೆ ಐ.ಟಿ.ಎಲ್. ಸಂಸ್ಥೆಯವರು ಹೇಳಿದ್ದಾರೆ. ಈ ಹಿಂದೆಯೇ ಬೆಂಗಳೂರಿನಲ್ಲಿ ಒಂದು ಪ್ರತ್ಯೇಕವಾದ ಸ್ಥಳವನ್ನೇ ಈ ಕೈಗಾರಿಕಾ ಕೇಂದ್ರಗಳಿಗಾಗಿ ಇಂಡಸ್ಟ್ರಿಯಲ್ ಸಬರ್ಬ್ ಎಂದು ಹೇಳಿ—ಇದಕ್ಕಾಗಿ ಸರ್ಕಾರದವರು ಈಗಾಗಲೇ ಬಹಳ ಜಮೀನನ್ನು ಅಕ್ವೈರ್‌ಮಾಡಿಕೊಂಡಿದ್ದಾರೆ. ಆದರೆ ಅಲ್ಲಿಗೆ ಯಾವ ಇಂಡಸ್ಟ್ರಿಯವರೂ ಹೋಗುವುದಕ್ಕೆ ಇಷ್ಟಪಡುತ್ತಿಲ್ಲ. ಹಾಗೆ ಸರ್ಕಾರದವರು ಹಾಕಿದ ಸ್ಕೀಂಗೆ ಅನುಸಾರವಾಗಿ ಯಾರೂ ಅಲ್ಲಿಗೆ ಹೋಗುವುದಿಲ್ಲವೆಂದು ಹೇಳುತ್ತಿರುವಾಗ ಸರ್ಕಾರ ಹಾಕಿದ ನೀತಿಗೆ ಸರ್ಕಾರದ ಕೈಗಾರಿಕೆಗಳನ್ನಾದರೂ ಅಲ್ಲಿಗೆ ವರ್ಗಾಯಿಸದೆ ಹೋದರೆ ಅದು ಸಮಂಜಸವಾಗಿರುವುದಿಲ್ಲವೆಂದು ಭಾವಿಸಿ ಈಗ ಇದನ್ನು ಅಲ್ಲಿಗೆ ವರ್ಗಾಯಿಸಬೇಕೆಂದು ನಿರ್ಧರಿಸಲಾಯಿತು. ಹೀಗೆ ಮಾಡಿದ್ದರಿಂದ ಮಲ್ಲೇಶ್ವರದ ಏರಿಯಾದಲ್ಲಿರತಕ್ಕ ಜನಗಳಿಗೂ ಮತ್ತು ಐ.ಟಿ.ಎಲ್. ಸಂಸ್ಥೆಯವರಿಗೂ ಈಗ ಬಹಳ ಅನುಕೂಲಮಾಡಿದಂತಾಗಿದೆ.

4-30 P.M.

ಅಂಕಿ ಅಂಶಗಳ ಸಮಿತಿಯ ಸಂಬಂಧವಾಗಿ ಮೂರು ಸಾವಿರ ರೂಪಾಯಿ 'ಆನೋರೇರಿಯಂ' ಎಂದು ಕಾಣಿಸಿದೆ, ಇದನ್ನು ಯಾರಿಗೆ ಕೊಟ್ಟರು ಎಂದು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರವರು ಕೇಳಿದರು. ಆ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಎಂ. ಶೇಷಾದ್ರಿಯವರಿಗೆ ಈ 'ಆನೋರೇರಿಯಂ' ಕೊಟ್ಟಿದೆ.

ಸಹಕಾರ ಸಂಘಗಳಿಗೆ ಆಡಿಟ್ ಫೀ ಚಾರ್ಜುಮಾಡತಕ್ಕ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಕೆಲವರು ಕಡಮೆ ಮಾಡಬೇಕೆಂದು ಹೇಳುತ್ತಾರೆ, ಕೆಲವರು ಹಿಂದಿದ್ದ ಪದ್ಧತಿಯೇ ಅನುಕೂಲವೆಂದು ಅಭಿಪ್ರಾಯಪಟ್ಟರು. ಸರ್ಕಾರದವರು ಎಲ್ಲವನ್ನೂ ಆಲೋಚನೆಮಾಡಿ, ಸಹಕಾರ ಸಂಘಗಳು ಸರಿಯಾಗಿ ಕೆಲಸಮಾಡಬೇಕಾದರೆ ಲೆಕ್ಕಪತ್ರಗಳು ಸರಿಯಾಗಿರಬೇಕು, ಜನರಿಗೆ ಅಲ್ಲಿನ ಲೆಕ್ಕಪತ್ರಗಳಲ್ಲಿ ನಂಬಿಕೆಯುಂಟಾಗುವುದು ಬಹಳ ಅವಶ್ಯಕವೆಂದು ಅಭಿಪ್ರಾಯಕ್ಕೆ ಬಂದು ಈ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆಡಿಟ್‌ಫೀ ಎನ್ನುವುದು ಹೊಸ ತೆರಿಗೆಯಲ್ಲ. ಒಂದು ಸಂಘಕ್ಕೆ ಕಟ್ಟಡವಿದ್ದರೆ ಅದಕ್ಕೆ ಬಾಡಿಗೆ ಕೊಡುವುದು ಎಷ್ಟು ಅವಶ್ಯಕವೋ, ಗುಮಾಸ್ತರನ್ನು ನೇಮಿಸಿ ಲೆಕ್ಕಪತ್ರಗಳನ್ನಿಡುವುದು ಎಷ್ಟು ಅವಶ್ಯಕವೋ, ಅಷ್ಟೇ ಅವಶ್ಯಕ ಆಡಿಟ್ ಮಾಡಿಸುವುದು. ಆದುದರಿಂದ ಈ ಖರ್ಚು ಅನಿವಾರ್ಯವಾದ ಖರ್ಚು, ಎಂಬ ಭಾವನೆಯನ್ನು ಮನಸ್ಸಿಗೆ ಉಂಟುಮಾಡಿಕೊಳ್ಳಬೇಕು. ಬಾಡಿಗೆ ಹೆಚ್ಚಾಗುತ್ತದೆಂದು ಸಂಘಗಳನ್ನು ಯಾರೂ ಮುಚ್ಚುವುದಿಲ್ಲ; ಅಥವಾ ಪ್ರಾರಂಭಮಾಡಬೇಕೆಂದಿರುವ ಸಂಘಗಳನ್ನು ಪ್ರಾರಂಭಮಾಡದೆ ನಿಲ್ಲಿಸುವುದಿಲ್ಲ. It is one of the inevitable charges. ಸರ್ಕಾರದವರು

(ಶ್ರೀ ಕೆ. ಹನುಮಂತಯ್ಯ.)

ಆಡಿಟ್ ವ್ಯವಸ್ಥೆಯನ್ನು ಮಾಡಿ, ಅದಕ್ಕೆ ಸರ್ಕಾರಕ್ಕೆಷ್ಟು ಖರ್ಚಾಗುತ್ತದೋ ಅಷ್ಟನ್ನು ಮಾತ್ರ ಆಡಿಟ್‌ಫೀ ಆಗಿ ಚಾರ್ಜುಮಾಡುತ್ತಾರೆಯೇ ವಿನಾ ಅದರಿಂದ ಲಾಭ ಪಡೆಯುವುದಿಲ್ಲ. ಆದಕಾರಣ ಇದನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ ಮತ್ತು ಈ ವ್ಯವಸ್ಥೆಯನ್ನು ಬದಲಾಯಿಸುವುದಕ್ಕೂ ಆಗುವುದಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಶ್ರೀಮಾನ್ ವ್ಯಾಸ್ಕರೆನ್ಹಾಸ್‌ರವರು ಪಬ್ಲಿಕ್ ವರ್ಕ್ಸ್ ಇಲಾಖೆಯ ರೇಟುಗಳ ವಿಚಾರವನ್ನು ಪ್ರಸ್ತಾಪಿಸಿದರು. ನನಗೂ ಕೂಡ ಅವರ ಅಭಿಪ್ರಾಯ ಸೂಕ್ತವೆಂದೆನಿಸುತ್ತದೆ. ರೇಟುಗಳು ಮತ್ತು ಕೂಲಿದರ ಆಹಾರ ಸಾಮಗ್ರಿಗಳ ದರಗಳು ಇಳಿದಂತೆಲ್ಲ ಇಳಿದು ಕೆಲಸಗಳು ಕಡಮೆ ಖರ್ಚಿನಲ್ಲಿ ಆಗಬೇಕಾದುದು ನ್ಯಾಯ. ಆದರೆ ಎಷ್ಟುಮಟ್ಟಿಗೆ ಕಡಮೆಯಾಗಿವೆ ಎನ್ನುವುದನ್ನು ಕಂಡುಹಿಡಿಯುವುದು ಕಷ್ಟ. ನಾನು ಪರೀಕ್ಷಾರ್ಥವಾಗಿ ಅಲ್ಲಲ್ಲಿ ವಿಚಾರಣೆ ಮಾಡುತ್ತೇನೆ. ಕೂಲಿಯನ್ನು ಮೊದಲು ಎಷ್ಟು ತೆಗೆದುಕೊಳ್ಳುತ್ತಿದ್ದರೋ ಅಷ್ಟೇ ಈ ದಿವಸವೂ ತೆಗೆದುಕೊಳ್ಳುತ್ತಾರೆ, ಕಡಮೆ ತೆಗೆದುಕೊಳ್ಳುವುದಿಲ್ಲ. ಆಹಾರ ಸಾಮಗ್ರಿಯ ಬೆಲೆ ಇಳಿದಿರಬಹುದು, ಇತರ ವಸ್ತುಗಳ ಬೆಲೆಗಳು ಇಳಿದಿರಬಹುದು; ಆದರೆ ಕೂಲಿಯ ದರ ಇಳಿದಿಲ್ಲ. ಈ ಇಲಾಖೆಯ ಕೆಲಸಗಳಲ್ಲಿ ಮುಖ್ಯವಾಗಿ ಕೊಡಬೇಕಾದುದು ಕೂಲಿ. ಆದಷ್ಟು ಬೆಲೆಗಳು ಇಳಿಯುತ್ತಿರುವ ಅಂಶವನ್ನು ಗಣನೆಗೆ ತೆಗೆದುಕೊಂಡು ಅಂದಾಜುಗಳನ್ನು ತಯಾರುಮಾಡಬೇಕು, ಖರ್ಚು ಮಾಡಬೇಕು ಎಂಬ ಸೂಚನೆಯನ್ನು ಈ ಇಲಾಖೆಯವರಿಗೆ ಖಂಡಿತ ಕೊಡುತ್ತೇವೆ.

ಶ್ರೀಮಾನ್ ದೇವರಾಜ ಅರಸಿನವರು ಕೊಡಗು ಸರ್ಕಾರದವರು ಹುಣಸೂರಿನಿಂದ ಮೈಸೂರಿಗೆ ತಮ್ಮ ಟಿಂಬರ್ ಡಿಪೋವನ್ನು ವರ್ಗಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ, ಇದರಿಂದ ಮೈಸೂರು ಸರ್ಕಾರಕ್ಕೆ ನಷ್ಟವಾದೀತು, ಇದನ್ನು ನೋಡಿಕೊಳ್ಳಬೇಕೆಂದು ಹೇಳಿದ್ದಾರೆ. ಖಂಡಿತವಾಗಿಯೂ ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮೈಸೂರು ಸರ್ಕಾರದ ಹಿತವನ್ನು ರಕ್ಷಣೆಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮಾನ್ ನಾಗರಾಜಮೂರ್ತಿಯವರು ಗಂಧದೆಣ್ಣೆ ಕಾರ್ಖಾನೆಯ ವಿಚಾರವನ್ನು ಪ್ರಸ್ತಾಪಮಾಡುತ್ತಾ ಅಲ್ಲಿ ಗಂಧದ ಮರದ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಏನೋ ಹೆಚ್ಚು ಲಾಭ ಬರುತ್ತದೆಂದು ತೋರಿಸುತ್ತಾರೆಂದು ಹೇಳಿದರು. ನಾನು ಮೊದಲೇ ಹೇಳಿದಹಾಗೆ, all industrial concerns under the Mysore Government must run on commercial basis. ಈ ನೀತಿಯನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಹೀಗೆ ಒಪ್ಪಿಕೊಂಡು ಗಂಧದ ಮರಕ್ಕೆ ಎಷ್ಟು ಬೆಲೆಯಾಗುತ್ತದೆಂಬುದನ್ನು ನಿಗದಿಮಾಡಿ ಅದನ್ನು ಈ ಇಲಾಖೆಯವರಿಂದ ವಸೂಲು ಮಾಡಿ ಫಾರೆಸ್ಟ್ ಇಲಾಖೆಗೆ ಕೊಡುತ್ತೇವೆ. ಬೆಲೆ ನಿಗದಿ ಮಾಡಲು ಒಂದು ನೀತಿ ಇದೆ. ಮಲಬಾರ್, ಕೊಡಗು ಇವುಗಳಲ್ಲಿ ಹೆಚ್ಚು ಕಡಮೆ ಯಾವ ರೇಟಿದೆಯೆಂದು ಗೊತ್ತಾಗುತ್ತದೆ, ಇದರ ಆಧಾರದಮೇಲೆ ಬೆಲೆಯನ್ನು ನಿಗದಿಮಾಡಿ ಕಾರ್ಖಾನೆಯಿಂದ ಅಷ್ಟು ಹಣವನ್ನು ತೆಗೆದುಕೊಳ್ಳುತ್ತೇವೆ. ಎಲ್ಲ ಕೈಗಾರಿಕೆಗಳಲ್ಲಿಯೂ ಇನ್ನು ಮುಂದೆ ಹೀಗೆ ಮಾಡುತ್ತೇವೆ. ಭದ್ರಾವತಿಗೆ ಫಾರೆಸ್ಟ್ ಇಲಾಖೆಯಿಂದ ಸರಬರಾಯಿ ಆಗುತ್ತಿರುವ ಸೌದೆ, ಪೇಪರ್ ಮಿಲ್ಲಿಗೆ ಸರಬರಾಯಿ ಆಗುವ ಬೊಂಬು ಇವುಗಳ ಬೆಲೆಯನ್ನು ನಿರ್ಧಾರಮಾಡಿ ಬರುವ ಹಣವನ್ನು ಫಾರೆಸ್ಟ್ ಇಲಾಖೆಗೆ ಜಮಾ ಮಾಡುವುದು ಸೂಕ್ತ. That is the proper way of conducting these industrial concerns, as I said, on commercial lines. That is in pursuance of the policy I just now announced that we want to run every Government concern on commercial lines. ಈ ವಿಷಯದಲ್ಲಿ ಈಗಾಗಲೇ ಆರ್ಡರ್ ಪಾಸ್ ಆಗಿದೆ. ಹೋದ ವರ್ಷದ ಬಡ್ಜೆಟ್ಟಿನಲ್ಲೂ ಸೇರಿಸಿದ್ದೇವೆ, ಬೇಕಾದರೆ ತಾವು ನೋಡಬಹುದು.

ಶ್ರೀಮಾನ್ ನಾಗರಾಜಮೂರ್ತಿಯವರು ಮತ್ತೊಂದು ವಿಚಾರ ಪ್ರಸ್ತಾಪ ಮಾಡಿದರು. ಬಡ್ಡಿಯನ್ನು charged accountಗೆ ಹಾಕುತ್ತೀರಿ, ನಮಗೆ ಆ ವಿಚಾರದಲ್ಲಿ ಓಟ್ ಮಾಡುವುದಕ್ಕವಕಾಶವಿರುವುದಿಲ್ಲ, ಆದುದರಿಂದ ಕೈಗಾರಿಕೆಗಳ ವಿಚಾರದಲ್ಲಿ ಪರಿಣಾಮಕಾರಿಯಾಗಿ ಮಾತನಾಡುವುದಕ್ಕೂ ಓಟ್ ಮಾಡುವುದಕ್ಕೂ ಅವಕಾಶವಿಲ್ಲವೆಂದು ಹೇಳಿದರು. ಇದು ಸರಿಯಲ್ಲ. ಬಡ್ಡಿಯನ್ನು ಮಾತ್ರ ಒಂದು 'ಹೆಡ್'ನಿಂದ ಇನ್ನೊಂದಕ್ಕೆ ಹಾಕಿದ್ದೇವೆ.

ಒಂದು ವೇಳೆ ಕೈಗಾರಿಕೆ ಸರಿಯಾಗಿ ನಡೆಯುತ್ತಿಲ್ಲ ಎಂದು ತಾವು ಅಭಿಪ್ರಾಯ ಪಡುವುದಾದರೆ, ಇದನ್ನು ವ್ಯಕ್ತಪಡಿಸುವುದಕ್ಕೆ ಇದು charged item ಆಗಲಿ voted item ಆಗಲಿ ಅವಕಾಶವಿದೆ. ಕೈಗಾರಿಕೆಗಳಿಗೆ ಸಂಬಂಧಪಟ್ಟ ಡಿಮ್ಯಾಂಡ್ ಬಂದಾಗ ತಮ್ಮ ಅಭಿಪ್ರಾಯವನ್ನು ಕೊಡಬಹುದು. ತಾವು ಯಾವ ರೀತಿಯಾದರೂ ಮಾತನಾಡಲು ಮತ್ತು ಓಟು ಮಾಡಲು ಸಂಪೂರ್ಣ ಹಕ್ಕಿದೆ, ಸಭೆಯ ಈ ಹಕ್ಕಿಗೆ ಲೋಪ ಬರುವುದಿಲ್ಲ.

ಮೈನರ್ ಕೆರೆಗಳ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮೈನರ್ ಕೆರೆಗಳ ರಿಪೇರಿ ಒಂದು ವ್ಯವಸ್ಥಿತ ರೂಪದಲ್ಲಿ ಆಗುತ್ತಿದೆ. ರೆವಿನ್ಯೂ ಮಂತ್ರಿಗಳು ಈಗ ಸಭೆಯಲ್ಲಿಲ್ಲ. ಮತ್ತೊಂದು ಸಂದರ್ಭದಲ್ಲಿ ಈ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ನಾನು ಹೇಳುತ್ತೇನೆ. ಈ ಮೂರು ವರ್ಷಗಳಲ್ಲಿ ರಿಪೇರಿಯಾಗಿರುವಷ್ಟು ಮೈನರ್ ಕೆರೆಗಳು ಸಾಮಾನ್ಯವಾಗಿ ಹಿಂದೆ ಯಾವ ಮೂರು ವರ್ಷಗಳಲ್ಲಿಯೂ ಆಗಿಲ್ಲವೆಂದು ಘಂಟಾಘೋಷವಾಗಿ ಹೇಳಿ ಸ್ಥಾಪಿಸಬಹುದು. ಬಲ್ಲೆ, ಹಿಂದೆ ಸರ್ಕಾರದವರು ಈ ಸಣ್ಣ ಕೆರೆಗಳನ್ನು ಕಟ್ಟಿಸುತ್ತಿರಲಿಲ್ಲ, ಹೂಳು ತೆಗೆಸುತ್ತಿರಲಿಲ್ಲ, ಆಯಾ ಗ್ರಾಮದ ಜನರೇ ಈ ಕೆಲಸವನ್ನು ಮಾಡುತ್ತಿದ್ದರು. ಜನರಿಗೆ ಈಗ ಪ್ರತಿಯೊಂದನ್ನೂ ಸರ್ಕಾರವೇ ಮಾಡಬೇಕೆಂಬ ಮನೋಭಾವ ಬೆಳೆದುಬಂದಿದೆ. ಇದರ ಕಾರಣವನ್ನು ನಾನು ಪ್ರತಿಪಾದಿಸುವುದಕ್ಕೆ ಹೋಗುವುದಿಲ್ಲ. ಅನೇಕ ಸಾರಿ ಮಂತ್ರಿಗಳು ಪ್ರವಾಸ ಹೋದಾಗ ಜನರು ಮನವಿಗಳನ್ನು ಕೊಡುತ್ತಾರೆ. ಅದರಲ್ಲಿ ತಮ್ಮ ಮನೆಗಳ ಹತ್ತಿರವಿರುವ ಬಾವಿಗಳ, ಕಾಲುವೆಗಳ ಮತ್ತು ಸಣ್ಣ ಪುಟ್ಟ ಕೆರೆಗಳ ಹೂಳನ್ನು ತೆಗೆಯುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಕೇಳುತ್ತಾರೆ. ಹೀಗೆ ಕೆರೆಗಳ ಹೂಳು ತೆಗೆಯುವುದನ್ನೂ ಸರ್ಕಾರವೇ ಕೈಗೊಂಡರೆ, ಅದಕ್ಕೆ ಹಣ ಬೇಕಾಗುತ್ತದೆ. ಹಣಕ್ಕಾಗಿ ತೆರಿಗೆ ಹಾಕಬೇಕಾಗುತ್ತದೆ. ಇದೊಂದು vicious circle. ಆದುದರಿಂದ ಸಭೆಯಲ್ಲಿ ನಾನು ಪ್ರಾರ್ಥನೆ ಮಾಡುತ್ತಿರುವುದು, ಮೈನರ್ ಕೆರೆಗಳ ರಿಪೇರಿ, ಹೂಳು ತೆಗೆಯುವುದು ಇಂಥಾದ್ದನ್ನು ಹಳ್ಳಿಗಳ ಜನರೇ

ಮಾಡಿಕೊಳ್ಳಬೇಕು. ಈ ಸಂಬಂಧದಲ್ಲಿ ಮತ್ತೊಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಹೊಸ ವಿದ್ಯಾಭ್ಯಾಸ ಕ್ರಮದ ಪ್ರಕಾರ ಕೈ ಕೆಲಸಕ್ಕೆ ಅವಕಾಶವನ್ನು ಪ್ರತಿಯೊಂದು ವಿದ್ಯಾಸಂಸ್ಥೆಗೂ ಒದಗಿಸಬೇಕೆಂದಿದೆ. ಇಂಥಾ ಸಂಸ್ಥೆಗಳ ಆಜುಬಾಜುವಿನಲ್ಲಿ ಸಣ್ಣ ಸಣ್ಣ ಕೆರೆಗಳಿದ್ದರೆ, ಅದೊಂದು ಕೈ ಕೆಲಸವಾಗಿ ಪರಿಗಣಿಸಿ, ಅವುಗಳ ರಿಪೇರಿಯನ್ನು ಮಾಡಿಸಬೇಕೆಂದು ಯೋಚನೆ ಮಾಡುತ್ತಿದ್ದೇನೆ. ಒಂದು ಸ್ಕೂಲು ಒಂದು ಮೈನರ್ ಕೆರೆಯನ್ನು ನೋಡಿಕೊಳ್ಳುತ್ತಿದ್ದರೆ, ಪ್ರತಿ ವರ್ಷವೂ ವಿದ್ಯಾರ್ಥಿಗಳು ಸ್ವಲ್ಪ ಸ್ವಲ್ಪವಾಗಿ ಹೂಳು ತೆಗೆಯುತ್ತಿದ್ದರೆ, ಸ್ವಲ್ಪ ಸ್ವಲ್ಪ ರಿಪೇರಿ ಕೆಲಸಗಳಾಗುತ್ತಿದ್ದರೆ, ಆ ಕೆರೆ ಯಾವಾಗಲೂ ರಿಪೇರಿಯಲ್ಲಿರುತ್ತದೆ. ಹಿಂದೆ ಗ್ರಾಮಸ್ಥರು ತಮ್ಮ ಕೆರೆಯನ್ನು ತಾವೇ ನೋಡಿಕೊಳ್ಳುವ ಒಂದು ಒಳ್ಳೆಯ ಪದ್ಧತಿಯಿತ್ತು. ಆ ಪದ್ಧತಿಯನ್ನು ಈಗ ವಿದ್ಯಾಭ್ಯಾಸಕ್ರಮದಲ್ಲಿ ಜೋಡಿಸಿ, ವಿದ್ಯಾರ್ಥಿಗಳಿಗೆ ದೇಹಶ್ರಮ ಪಡೆಯುತಕ್ಕ ಅವಕಾಶ ಮಾಡಿಕೊಟ್ಟಂತಾಗಬೇಕು, ಮತ್ತು ಊರಿಗೂ ಉಪಕಾರವಾಗುವಂತಿರಬೇಕು, ಈ ಪದ್ಧತಿಯನ್ನು ಕಾರ್ಯಗತ ಮಾಡುವ ದೊಳ್ಳೆಯದು. ಇದಕ್ಕೆ ತಮ್ಮ ಸಹಕಾರವಿದೆಯೆಂದು ನಂಬಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಇದನ್ನು ಎಲ್ಲಿ ಮಾಡುತ್ತೀರಿ ?

ಶ್ರೀ ಕೆ. ಹನುಮಂತಯ್ಯ.—ಇದನ್ನೆಲ್ಲಾ ತಾವು ಸ್ವಲ್ಪ ಯೋಚನೆ ಮಾಡಿದರೆ ಗೊತ್ತಾಗುತ್ತದೆ. ಯಾರ ಕೈಯಲ್ಲಿ ಸಾಧ್ಯವೋ ಅವರಿಂದ ಮಾಡಿಸಬೇಕು.

ಇನ್ನು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಯಲ್ಲಿ, arrears ಅಥವಾ ಬಾಕಿ ಇರಲು ಕಾರಣವೇನೆಂದು ಕೇಳಿದರು. ಜಿಲ್ಲಾ ಬೋರ್ಡಿನವರು ಬಿಲ್ ಮಾಡಿ ಸರ್ಕಾರಕ್ಕೆ ಕಳುಹಿಸುವುದು ಸ್ವಲ್ಪ ತಡವಾಯಿತು. ಈ ಕಾರಣದಿಂದ ಬಿಲ್ಲು ಪೇಮೆಂಟ್ ಆಗಿರಲಿಲ್ಲ. ಈಗ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿದೆ. ಶ್ರೀಮಾನ್ ಹುಚ್ಚೆಗೌಡರು ವೈದ್ಯರಿಗೆ ಸಂಬಳ ಸರಿಯಾಗಿ ಕೊಟ್ಟಿಲ್ಲವೆಂದು ಪ್ರಸ್ತಾಪಮಾಡಿದರು. ಅವರಿಗೇ ಗೊತ್ತಿರುವ ಹಾಗೆ, ಇದು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ವಿಷಯ. ಈಗ ಡೆಪ್ಯುಟೀ ಕಮೀಷನರೇ ಈ ಸಂಸ್ಥೆಗಳ ಚಾರ್ಜಿನಲ್ಲಿರುವುದರಿಂದ ಏನಾದರೂ ಇಂಥಾ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುತ್ತೇನೆ.

ಆಯುರ್ವೇದ ಯುನಾನಿ ಪದ್ಧತಿಗಳಿಗೆ ಬಹಳ ಉತ್ತೇಜನ ಕೊಡಬೇಕೆಂದು ಹಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಕೊಡಬೇಕಾದುದು ನ್ಯಾಯವೇ. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಈ ಪದ್ಧತಿಗಳಿಗೆ ಉತ್ತೇಜನ ಕೊಡುತ್ತಿದ್ದಾರೆ. ಈಗ ಕೊಡುತ್ತಿರುವ ಉತ್ತೇಜನ ಸಾಲದೆಂಬ ಅಭಿಪ್ರಾಯ ವ್ಯಕ್ತಪಟ್ಟಿದೆ, ಇದನ್ನು ಪರಿಶೀಲನೆ ಮಾಡಿನೋಡೋಣ. ಸಾಧ್ಯವಾದಷ್ಟು ಸುಲಭ ಬೆಲೆಯಲ್ಲಿ ಸುಲಭವಾಗಿ ಈ ಔಷದೋಪಚಾರಗಳು ದೊರೆಯಬೇಕಾದರೆ ಉತ್ತೇಜನ ಕೊಡಬೇಕಾದುದು ನ್ಯಾಯವಾಗಿದೆ.

ಇನ್ನೂ ಅನೇಕ ವಿಷಯಗಳನ್ನು ನಾನು ಈ ದಿವಸ ಪ್ರಸ್ತಾಪಮಾಡಬಹುದಾಗಿತ್ತು. ಆದರೆ ಪುನಃ ಈ ವಿಷಯಗಳು ಬಡ್ಜೆಟ್ ಚರ್ಚೆಯಲ್ಲಿ ಕೂಡ ಬರುತ್ತವೆ. ಆಗ ಅವಕ್ಕೆ ನಾನು ಉತ್ತರ ಹೇಳುವವನಾಗಿದ್ದೇನೆ. ಆದುದರಿಂದ ಇನ್ನು ಹೆಚ್ಚು ಕಾಲವನ್ನು ನಾನು ತೆಗೆದುಕೊಳ್ಳದೆ, ಈ ಅಪ್ರೋಪ್ರಿಯೇಷನ್ ಬಿಲ್ಲಿಗೆ ಬೆಂಬಲ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—The question is:

"That the Mysore Appropriation Bill, 1955, be taken into consideration."

The motion was adopted.

Mr. DEPUTY SPEAKER.—The question is:

"That Clauses 2 and 3 stand part of the Bill."

The motion was adopted.

Clauses 2 and 3 were added to the Bill.

Mr. DEPUTY SPEAKER.—The question is:

"That the Schedule stand part of the Bill."

The motion was adopted.

The Schedule was added to the Bill.

Mr. DEPUTY SPEAKER.—The question is:

"That Clause 1 stand part of the Bill."

The motion was adopted.

Clause 1 was added to the Bill.

Mr. DEPUTY SPEAKER.—The question is:

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri K. HANUMANTHAIYA.—Sir, I beg to move:

"That the Mysore Appropriation Bill, 1955, be passed."

Mr. DEPUTY SPEAKER.—The question is:

"That the Mysore Appropriation Bill, 1955, be passed."

The motion was adopted.

Mr. DEPUTY SPEAKER.—The House will now rise and meet tomorrow at 12 o'clock.

The House adjourned for the day at Forty-seven minutes past Four of the Clock to meet again at Twelve of the Clock on Wednesday the 2nd March 1955.

WD 4508—GPB—550—9-4-55